ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

# ಕಲಿಕಾ ಚೇತರಿಕೆ

# 2022–23

## ಶಿಕ್ಷಕರ ಕೈಪಿಡಿ

# ಸಮಾಜ ವಿಜ್ಞಾನ

## 7ನೇ ತರಗತಿ

ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು
ಮತ್ತು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು

# ಸಂದೇಶ



ಆತ್ಮೀಯರೇ,

ಮಕ್ಕಳ ಶಿಕ್ಷಣವೇ ಭಾರತದ ಭವಿಷ್ಯ. ಇದಕ್ಕಾಗಿ ಕೇಂದ್ರ ಸರ್ಕಾರವು ಹೊಸ ಶಿಕ್ಷಣ ನೀತಿ 2020ನ್ನು ಜಾರಿಗೊಳಿಸಿದೆ. ರಾಷ್ಟ್ರೀಯ ಶಿಕ್ಷಣ ನೀತಿ 2020 ರ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಮುಂಚೂಣಿಯಲ್ಲಿದ್ದು, ವ್ಯವಸ್ಥೆಯಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಲಾಗುತ್ತಿದೆ. ಪಠ್ಯಕ್ರಮ ವಿನ್ಯಾಸ, ಕಲಿಸುವಿಕೆಯಲ್ಲಿ ನಾವೀನ್ಯತೆ, ತರಗತಿ ಪ್ರಕ್ರಿಯೆಯ ಮರುವಿನ್ಯಾಸ ಹಾಗೂ ಶಾಲೆಗಳಲ್ಲಿ ಕಲಿಕಾ ಸಮೃದ್ಧ ವಾತಾವರಣ ನಿರ್ಮಾಣ ಮಾಡಲು ಹಲವು ಕಾರ್ಯತಂತ್ರಗಳನ್ನು ರೂಪಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಈಗಾಗಲೇ ನಿಪುಣ್ ಭಾರತ್ ಮಿಷನ್ ಅಡಿಯಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನ ಕೌಶಲಗಳನ್ನು ಖಾತ್ರಿಪಡಿಸುವಲ್ಲಿ ನಮ್ಮ ರಾಜ್ಯ ಕಾರ್ಯಪ್ರವೃತ್ತಗೊಂಡಿದೆ.

ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಮಕ್ಕಳು ಔಪಚಾರಿಕ ಶಿಕ್ಷಣ ಪಡೆಯುವಲ್ಲಿ ಅಡೆತಡೆಗಳಾಗಿ, ಎರಡು ವರ್ಷಗಳಲ್ಲಿ ಕಲಿಕಾನಷ್ಟವಾಗಿರುತ್ತದೆ. ಔಪಚಾರಿಕ ಹಾಗೂ ಅನೌಪಚಾರಿಕ ಕಾರ್ಯತಂತ್ರಗಳ ಮೂಲಕ ವಿದ್ಯಾರ್ಥಿಗಳ ಕಲಿಕೆಯ ನಿರಂತರತೆಗೆ ಪ್ರಯತ್ನಿಸಿದ್ದಾಗ್ಯೂ ಸಹ ನಿರೀಕ್ಷಿತ ಮಟ್ಟದ ಕಲಿಕೆ ಆಗದಿರುವುದನ್ನು ಹಲವು ಅಧ್ಯಯನಗಳು ತಿಳಿಸಿವೆ. ಈ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯಪ್ರವೃತ್ತರಾಗಬೇಕಿದೆ. ಸದರಿ ಕಲಿಕಾ ಅಂತರವನ್ನು ಸರಿಪಡಿಸುವ ನಿಟ್ಟಿನಲ್ಲಿ ವೈಜ್ಞಾನಿಕ ತಳಹದಿಯ ಮೇಲೆ ಕರ್ನಾಟಕ ಸರ್ಕಾರ **'ಕಲಿಕಾ ಚೇತರಿಕೆ'** ಎಂಬ ವಿನೂತನ ಉಪಕ್ರಮವನ್ನು 2022–23ನೇ ಶೈಕ್ಷಣಿಕ ವರ್ಷದಲ್ಲಿ ಅನುಷ್ಠಾನಗೊಳಿಸುತ್ತಿದೆ.

ಎಲ್ಲಾ ವಿದ್ಯಾರ್ಥಿಗಳು ಹಿಂದಿನ ಎರಡು ತರಗತಿಗಳಲ್ಲಿ ಕಲಿಯಲೇಬೇಕಾಗಿದ್ದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಗುರುತಿಸಿದೆ. ಇದಕ್ಕೆ ಸಂವಾದಿಯಾಗಿ ಪ್ರಸಕ್ತ ತರಗತಿಯಲ್ಲಿ ಕಲಿಯಲೇಬೇಕಾದ ಪ್ರಮುಖ ಸಾಮರ್ಥ್ಯ, ಪರಿಕಲ್ಪನೆಗಳನ್ನು ಜೋಡಿಸಿ ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ಸಿದ್ಧಪಡಿಸಲಾಗಿದೆ. ಕಲಿಕಾ ಹಾಳೆಗಳು ಚಟುವಟಿಕೆಗಳಿಂದ ಕೂಡಿದ್ದು, ಮಗುವಿನ ಮುಗ್ಧ ಮನಸ್ಸಿಗೆ ಸಂತೋಷವನ್ನುಂಟು ಮಾಡುವಂತೆ ರೂಪಿಸಲಾಗಿರುತ್ತದೆ. ಇವುಗಳನ್ನು ಪೂರ್ಣಗೊಳಿಸುವುದರಿಂದ ಕಲಿಕಾ ನಷ್ಟವನ್ನು ಸರಿದೂಗಿಸಬಹುದು ಎಂಬ ಆಶಯ ನನ್ನದಾಗಿರುತ್ತದೆ. ಪಠ್ಯಪುಸ್ತಕ, ಶಿಕ್ಷಕರ ಕೈಪಿಡಿಗಳು ಮತ್ತು ಕಲಿಕಾ ಹಾಳೆಗಳು ಪರಸ್ಪರ ಪೂರಕವಾಗಿವೆ. ಶಿಕ್ಷಕರು, ಕೈಪಿಡಿಯಲ್ಲಿ ನೀಡಿದ ಮಾರ್ಗಸೂಚಿಯನ್ವಯ ಈ ವಿನೂತನ ಕಾರ್ಯವನ್ನು ಅದರ ಅಂತಸ್ಸತ್ವದಿಂದ ಅನುಷ್ಠಾನಗೊಳಿಸಿ, ಮಕ್ಕಳ ಕಲಿಕೆಯ ಸುಧಾರಣೆಗೆ ಕಾರಣವಾಗುತ್ತೀರಿ ಎಂದು ಹಾರೈಸುತ್ತೇನೆ. ಆದ್ದರಿಂದ ಇಲಾಖೆಯ ಸರ್ವರೂ, ಪೋಷಕವರ್ಗ ಮತ್ತು ಭಾಗೀದಾರರೆಲ್ಲರೂ ಇದರಲ್ಲಿ ಪರಿಣಾಮಕಾರಿಯಾಗಿ ಕೈ ಜೋಡಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುತ್ತೀರೆಂದು ಆಶಿಸುತ್ತೇನೆ.

ಎಲ್ಲರಿಗೂ ಶುಭವಾಗಲಿ............

**ಶ್ರೀ ಬಿ.ಸಿ. ನಾಗೇಶ,**
**ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ**
**ಹಾಗೂ ಸಕಾಲ ಸಚಿವರು,**

# ಮುನ್ನುಡಿ



ರಾಷ್ಟ್ರೀಯ ಶಿಕ್ಷಣ ನೀತಿ–2020ರ ಆಶಯದಂತೆ ಮಕ್ಕಳ ಕಲಿಕೆ ಮತ್ತು ಅಭಿವೃದ್ಧಿ ನಮ್ಮೆಲ್ಲರ ಜವಾಬ್ದಾರಿ. ಆದರೆ ಕೋವಿಡ್–19 ಸಾಂಕ್ರಾಮಿಕ ವಿಪತ್ತಿನಿಂದ ಮಕ್ಕಳ ಕಲಿಕೆಯಲ್ಲಿ ವ್ಯತ್ಯಯವಾಗಿ ಕಲಿಕಾ ನಿರಂತರತೆಯನ್ನು ಕಾಪಾಡಿಕೊಳ್ಳಲು ಕಳೆದೆರಡು ವರ್ಷಗಳಿಂದ ಸಾಧ್ಯವಾಗಿರುವುದಿಲ್ಲ. ಸಾಕಷ್ಟು ಕಲಿಕಾ ಅಂತರವಾಗಿರುತ್ತದೆ. ಈ ಅಂತರವನ್ನು ನೀಗಿಸಲು 2022–23ನೇ ಸಾಲಿನಲ್ಲಿ ಕಲಿಕಾ ಚೇತರಿಕೆ ಎಂಬ ವಿನೂತನ ಉಪಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಈ ಉಪಕ್ರಮದ ಮೂಲಕ ಎಲ್ಲಾ ವಿದ್ಯಾರ್ಥಿಗಳಿಗೆ ಬುನಾದಿ ಸಾಕ್ಷರತೆ, ಸಂಖ್ಯಾ ಜ್ಞಾನಕ್ಕೆ ಒತ್ತು ನೀಡಲಾಗುವುದು ಹಾಗೂ ಮಗು ತನ್ನ ಹಿಂದಿನ ತರಗತಿಗಳಲ್ಲಿ ಅತ್ಯಗತ್ಯವಾಗಿ ಗಳಿಸಲೇಬೇಕಿದ್ದ **ಕಲಿಕಾ ಫಲಗಳು** ಹಾಗೂ ಪ್ರಸಕ್ತ ತರಗತಿಯಲ್ಲಿ ಕಲಿಯಲೇಬೇಕಾದ **'ಅತಿ ಮುಖ್ಯ ಕಲಿಕಾ ಫಲ'** ಗಳನ್ನು ಗುರುತಿಸಿ, ಚಟುವಟಿಕೆ ರೂಪಿಸಿ, ಕಲಿಕಾ ಹಾಳೆಗಳನ್ನು ಮತ್ತು ಶಿಕ್ಷಕರ ಕೈಪಿಡಿಯನ್ನು ರೂಪಿಸಲಾಗಿದೆ. ಇವುಗಳಲ್ಲಿ **'ನಿಪುಣ್ ಭಾರತ್', 'ವಿದ್ಯಾಪ್ರವೇಶ್'ನಂತಹ ಉಪಕ್ರಮಗಳನ್ನು ಅಂತರ್ಗತಗೊಳಿಸಲಾಗಿದೆ.** ಈ ಚಟುವಟಿಕೆಗಳು ಶಿಶುಕೇಂದ್ರಿತ, ಕಲಿಕಾ ಹಾಗೂ ಶಿಕ್ಷಕ ಸ್ನೇಹಿಯಾಗಿವೆ. ಚಟುವಟಿಕಾ ಹಾಳೆಗಳ ಜೊತೆಗೆ, ಶಿಕ್ಷಕರಿಗೆ ಅಗತ್ಯ ಮಾರ್ಗದರ್ಶನ ನೀಡುವ 'ಶಿಕ್ಷಕರ ಕೈಪಿಡಿ'ಯನ್ನೂ ಸಿದ್ಧಪಡಿಸಿ ನೀಡಲಾಗುತ್ತಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ಅಂತರ ಸರಿದೂಗಿಸುವ ಕಾರ್ಯವನ್ನು ತಾವೆಲ್ಲರೂ ಜವಾಬ್ದಾರಿಯಿಂದ ನಿರ್ವಹಿಸುತ್ತೀರೆಂಬ ಆಶಯವನ್ನು ಹೊಂದಿರುತ್ತೇನೆ. ಈ ಕಾರ್ಯದಲ್ಲಿ ತೊಡಗಿಸಿಕೊಂಡ ಆಋಇಋಖ ಹಾಗೂ ಖಋಎ ಯ ಅಧಿಕಾರಿಗಳಿಗೆ ಅಭಿನಂದನೆಗಳು. ಈ ಕಾರ್ಯದಲ್ಲಿ ಸಹಕರಿಸಿದ ಅಜೀಂ ಪ್ರೇಮ್ ಜೀ ಫೌಂಡೇಶನ್ ಸಂಸ್ಥೆಗೂ ಇಲಾಖೆಯ ಪರವಾಗಿ ಅಭಿನಂದನೆಗಳು.

**ಡಾ. ಎಸ್. ಸೆಲ್ವಕುಮಾರ್ ಭಾ.ಆ.ಸೇ.**
**ಸರ್ಕಾರದ ಪ್ರಧಾನ ಕಾರ್ಯದರ್ಶಿ,**
**ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ**



# ಆಶಯ ನುಡಿ

ವಿದ್ಯಾರ್ಥಿಯ ಶೈಕ್ಷಣಿಕ ಬದುಕಿನಲ್ಲಿ ಪ್ರತೀ ನಿತ್ಯವೂ ಕಲಿಕಾ ನಿರಂತರತೆ ಅತ್ಯಗತ್ಯ. ಆದರೆ ಕೋವಿಡ್–19 ಸಾಂಕ್ರಾಮಿಕದಿಂದಾಗಿ ಜಾಗತಿಕವಾಗಿ ಕಲಿಕಾ ನಿರಂತರತೆಗೆ ವ್ಯತ್ಯಯ ಉಂಟಾಗಿ ಮಕ್ಕಳಲ್ಲಿ ಕಲಿಕಾ ನಷ್ಟವಾಗಿರುವುದು ವೇದ್ಯ. ಇದನ್ನು ಸರಿದೂಗಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಮ್ಮ ರಾಜ್ಯದಲ್ಲಿ ಕೋವಿಡ್–19 ನಿಂದಾಗಿ ಶಾಲೆಗಳು ಮುಚ್ಚಲ್ಪಟ್ಟಾಗ ವಿದ್ಯಾಗಮ, ಸಂವೇದ, ವಿಶೇಷ ಸೇತುಬಂಧ ಮುಂತಾದ ಪರ್ಯಾಯ ಕಾರ್ಯಕ್ರಮಗಳನ್ನು ರೂಪಿಸಿದರೂ ಮುಖಾಮುಖಿ ತರಗತಿ ಪ್ರಕ್ರಿಯೆಗೆ ಇವೆಲ್ಲಾ ಸಮಾಂತರವಾಗುವುದಿಲ್ಲ. ಪ್ರಸ್ತುತ **ಕಲಿಕಾ ಚೇತರಿಕೆ** ಉಪಕ್ರಮವು ವೈಜ್ಞಾನಿಕ ತಳಹದಿಯ ಮೇಲೆ ಶಿಶು ಕೇಂದ್ರಿತ ಚಟುವಟಿಕೆಗಳನ್ನು ಒಳಗೊಂಡ ಕಲಿಕಾ ಹಾಳೆಗಳನ್ನು ರೂಪಿಸಿ ನೀಡುತ್ತಿರುವ ವಿನೂತನ ಪ್ರಯತ್ನ. ಸರಿಸುಮಾರು ಎರಡು ವರ್ಷಗಳ ಶೈಕ್ಷಣಿಕ ಪ್ರಕ್ರಿಯೆಗಳು ಪೂರ್ಣವಾಗಿ ನಡೆಯದೇ, ಮಕ್ಕಳಲ್ಲಿ ಉಂಟಾಗಿರುವ ಕಲಿಕಾ ಅಂತರವನ್ನು ಸರಿದೂಗಿಸುವ ಸಲುವಾಗಿಯೇ ರೂಪಿಸಿದ ಉಪಕ್ರಮ. ಈ ಕಾರ್ಯವನ್ನು ಒಂದು ವರ್ಷದವರೆಗೆ ರಾಜ್ಯಾದ್ಯಂತ ಅನುಷ್ಠಾನಗೊಳಿಸಿ ಮಕ್ಕಳ ಕಲಿಕಾ ನಷ್ಟವನ್ನು ತಾವೆಲ್ಲರೂ ತುಂಬಿಕೊಡುತ್ತೀರಿ ಎಂದು ಆಶಿಸುತ್ತೇನೆ. ಉಪಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳುವಿರೆಂದು ನಂಬಿದ್ದೇನೆ.

**ಡಾ. ವಿಶಾಲ್ ಆರ್. ಭಾ.ಆ.ಸೇ.**
**ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ**

# ಆರಂಭಿಕ ನುಡಿ



ಆತ್ಮೀಯರೇ,

ಎರಡು ವರ್ಷಗಳ ಕಾಲ ಕೋವಿಡ್–19ರ ಕಾರಣದಿಂದ ಔಪಚಾರಿಕ ತರಗತಿಗಳು ನಿರೀಕ್ಷೆಯಂತೆ ನಡೆಯದೇ ಮಕ್ಕಳಲ್ಲಿ ಕಲಿಕಾ ನಷ್ಟ ಉಂಟಾಗಿರುವುದು ಶೋಚನೀಯ. ಇದರಿಂದಾಗಿ ಕಲಿಕಾ ಅಂತರ, ಸಾಮಾಜಿಕ ಹಾಗೂ ಭಾವನಾತ್ಮಕ ಏರುಪೇರುಗಳೂ ಉಂಟಾಗಿವೆ. ಈ ಎಲ್ಲ ಅಡೆತಡೆಗಳನ್ನು ನಿವಾರಿಸಿ, ಕಲಿಕಾ ನಿರಂತರತೆಯನ್ನು ಕಾಯ್ದುಕೊಳ್ಳಲು 2022–23ನೇ ಶೈಕ್ಷಣಿಕ ವರ್ಷದಲ್ಲಿ **ಕಲಿಕಾ ಚೇತರಿಕೆ ಉಪಕ್ರಮವನ್ನು** ಅನುಷ್ಠಾನಗೊಳಿಸಲಾಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಯು ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನವನ್ನು ಸಾಧಿಸುವುದು ಪ್ರಥಮ ಆದ್ಯತೆಯಾಗಿರುತ್ತದೆ. ಎಲ್ಲಾ ಕಲಿಕೆಗೆ ಮೂಲಭೂತವಾಗಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಅತ್ಯಗತ್ಯ. ಆದ್ದರಿಂದ ಆಯಾ ತರಗತಿಯ ನಿರ್ದಿಷ್ಟ ಕಲಿಕಾ ಫಲಗಳೊಂದಿಗೆ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದ ಕಲಿಕಾ ಚಟುವಟಿಕೆಗಳನ್ನು ಅಂತರ್ಗತಗೊಳಿಸಿ ಕಲಿಕಾ ಚೇತರಿಕೆ ಉಪಕ್ರಮವನ್ನು ರೂಪಿಸಲಾಗಿದೆ. ಇಲ್ಲಿ ನೀಡಿರುವ ಕಲಿಕಾ ಹಾಳೆಗಳನ್ನು ತಾವು ಬಳಸಿಕೊಂಡು ಮಕ್ಕಳಲ್ಲಿ ಬುನಾದಿ ಕಲಿಕಾ ಜ್ಞಾನವನ್ನು ಅನುಕೂಲಿಸುವಿರಿ ಹಾಗೂ ಕಲಿಕಾ ಅಂತರವನ್ನು ಪೂರೈಸುವಿರಿ ಎಂದು ಆಶಿಸುತ್ತೇನೆ. ಇದನ್ನು ಶಾಲಾಧಾರಿತವಾಗಿ ಮೌಲ್ಯಾಂಕನ ಮಾಡುತ್ತಾ ನಿಗದಿತ ಸಾಮರ್ಥ್ಯ ಮತ್ತು ಪರಿಕಲ್ಪನೆ ಗಳಿಕೆಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಿ ಎಂದು ನಂಬಿರುತ್ತೇನೆ. ತಮ್ಮೆಲ್ಲರ ಬೆಂಬಲದಿಂದ ಪರಿಣಾಮಕಾರಿ ಅನುಷ್ಠಾನ ಸಾಧ್ಯ. ಈ ನಿಟ್ಟಿನಲ್ಲಿ ಎಲ್ಲರಿಗೂ ಯಶಸ್ಸನ್ನು ಹಾರೈಸುತ್ತೇನೆ.

**ಶ್ರೀಮತಿ ಪಲ್ಲವಿ ಆಕುರಾತಿ. ಭಾ.ಆ.ಸೇ.**
**ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ**

# ಪ್ರಾಸ್ತಾವಿಕ ನುಡಿ



ಆತ್ಮೀಯರೇ,

ಹೊಸ ಶತಮಾನದ ಆಶಯಗಳನ್ನು ಒಳಗೊಂಡ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಅನುಷ್ಠಾನ ಸಂದರ್ಭದಲ್ಲಿ ಶೈಕ್ಷಣಿಕ ಕ್ಷೇತ್ರದಲ್ಲಿನ ಬದಲಾವಣೆಗೆ ನಾವೆಲ್ಲರೂ ತೆರೆದುಕೊಳ್ಳಬೇಕಿದೆ. ಅದರ ಜೊತೆಗೆ ಕೋವಿಡ್ ಸಂದರ್ಭದಲ್ಲಿ ಉಂಟಾದ ವ್ಯತಿರಿಕ್ತ ಪರಿಣಾಮವನ್ನು ಸರಿಪಡಿಸುವ ಹೊಣೆಗಾರಿಕೆ ಮಹತ್ತ್ವದ್ದಾಗಿದೆ. ಕಳೆದ ಎರಡು ವರ್ಷಗಳಲ್ಲಿ ಬಹು ಮಾಧ್ಯಮಗಳನ್ನು ಬಳಸಿಕೊಂಡು ವಿದ್ಯಾಗಮ, ಸಂವೇದದಂತಹ ಶೈಕ್ಷಣಿಕ ಉಪಕ್ರಮಗಳ ಮೂಲಕ ಮಾಡಿದ ಪ್ರಯತ್ನಗಳ ನಡುವೆಯೂ ವಿದ್ಯಾರ್ಥಿಗಳ ಕಲಿಕೆಯಲ್ಲಿ ಸಾಕಷ್ಟು ಕಲಿಕಾ ಅಂತರ ಉಂಟಾಗಿರುವುದು ವಾಸ್ತವದ ಸಂಗತಿ. ಕಲಿಕಾ ನಷ್ಟ, ಕಲಿಕಾ ಅಂತರ ಪೂರೈಸುವ ಯೋಜನೆಯೇ **'ಕಲಿಕಾ ಚೇತರಿಕೆ'** ಉಪಕ್ರಮ. ಈ ಸಂದರ್ಭೋಚಿತ ಉಪಕ್ರಮದಲ್ಲಿ ಈ ಶೈಕ್ಷಣಿಕ ವರ್ಷದಲ್ಲಿ ಬುನಾದಿ ಸಾಕ್ಷರತೆ ಮತ್ತು ಸಂಖ್ಯಾಜ್ಞಾನ ಸಾಮರ್ಥ್ಯವನ್ನು ಸಾಧಿಸುವುದರೊಂದಿಗೆ, ಹಿಂದಿನ ಎರಡು ಶೈಕ್ಷಣಿಕ ವರ್ಷಗಳ ಆಯ್ದ ಕಲಿಕಾಫಲಗಳು ಹಾಗೂ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಲಿಯಲೇಬೇಕಾದ ಅತ್ಯಗತ್ಯ ಕಲಿಕಾಫಲಗಳನ್ನು ಎಲ್ಲಾ ಮಕ್ಕಳಲ್ಲಿ ಸಾಧಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಈ ಸಾಧನೆಗಾಗಿ ಕಲಿಕಾ ಪ್ರಕ್ರಿಯೆಯ ಸಾಧ್ಯತೆಗಳನ್ನು ಸೂಚಿಸುವ **'ಶಿಕ್ಷಕರ ಕೈಪಿಡಿ'** ಮತ್ತು ಶಿಶುಕೇಂದ್ರಿತ ಕಲಿಕಾ ಪೂರಕ ಚಟುವಟಿಕೆಗಳನ್ನೊಳಗೊಂಡ ವಿದ್ಯಾರ್ಥಿಗಳ 'ಕಲಿಕಾ ಹಾಳೆ'ಗಳ ಪುಸ್ತಕ ಎಂಬ ಎರಡು ಸಾಹಿತ್ಯಗಳನ್ನು ಸೃಜಿಸಲಾಗಿದೆ. ಈ ಕಲಿಕಾ ಹಾಳೆಗಳಲ್ಲಿ ವಿದ್ಯಾರ್ಥಿಗಳು ಕಲಿಯಲೇಬೇಕಾದ ಸಾಮರ್ಥ್ಯ, ಪರಿಕಲ್ಪನೆ ಮತ್ತು ಕಲಿಕಾಫಲಗಳನ್ನು ಕೇಂದ್ರೀಕರಿಸಿದೆ. ಇವುಗಳನ್ನು ಬಳಸಿ ಮಕ್ಕಳ ಕಲಿಕಾ ನಷ್ಟವನ್ನು ಸರಿದೂಗಿಸಲು ಎಲ್ಲಾ ಭಾಗೀದಾರರು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾಗಿ ಈ ಮೂಲಕ ವಿನಂತಿಸುತ್ತೇನೆ. ಈ ಕಾರ್ಯಾಭಿವೃದ್ಧಿಯಲ್ಲಿ ತೊಡಗಿಸಿಕೊಂಡ ಇಲಾಖಾ ಮಿತ್ರರು ಮತ್ತು ಅಜೀಂ ಪ್ರೇಮ್‌ಜೀ ಫೌಂಡೇಶನ್ ಇವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.
ಶುಭವಾಗಲಿ.

**ಶ್ರೀಮತಿ ಸುಮಂಗಲ ವಿ**
**ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬೆಂಗಳೂರು**

<table>
<tr><td colspan="2">ಮಾರ್ಗದರ್ಶನ</td></tr>
<tr><td>ಡಾ. ಸೆಲ್ವಕುಮಾರ್ ಎಸ್. ಭಾ. ಆ. ಸೇ.<br>ಪ್ರಧಾನ ಕಾರ್ಯದರ್ಶಿಗಳು,<br>ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ,<br>ಬೆಂಗಳೂರು.</td><td>ಡಾ. ವಿಶಾಲ್. ಆರ್ ಭಾ. ಆ. ಸೇ.<br>ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,<br>ಬೆಂಗಳೂರು.</td></tr>
<tr><td>ಶ್ರೀಮತಿ. ಪಲ್ಲವಿ ಆಕುರಾತಿ ಭಾ. ಆ. ಸೇ.<br>ರಾಜ್ಯ ಯೋಜನಾ ನಿರ್ದೇಶಕರು,<br>ಸಮಗ್ರ ಶಿಕ್ಷಣ ಕರ್ನಾಟಕ,<br>ಬೆಂಗಳೂರು.</td><td>ಶ್ರೀಮತಿ. ವಿ. ಸುಮಂಗಲ.<br>ನಿರ್ದೇಶಕರು, ಡಿ.ಎಸ್.ಇ.ಆರ್.ಟಿ.<br>ಬೆಂಗಳೂರು.</td></tr>
<tr><td colspan="2">ಸಾಹಿತ್ಯ ರಚನಾ ತಂಡ<br>ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಶಿವಮೊಗ್ಗ ಇವರ ನೇತೃತ್ವದಲ್ಲಿ</td></tr>
<tr><td>ಡಾ. ಹರಿಪ್ರಸಾದ್ ಜಿ.ವಿ<br>ಹಿರಿಯ ಉಪನ್ಯಾಸಕರು ಡಯಟ್ ಶಿವಮೊಗ್ಗ</td><td>ಡಾ ನಾಗೇಶ್ ಕೆ.ಟಿ<br>ಮಂಡ್ಯ.</td></tr>
<tr><td colspan="2">ಓಂ ಪ್ರಕಾಶ್ ಗುಪ್ತಾ ಜಿ.ಪಿ<br>ಬಿಜಾಪುರ</td></tr>
<tr><td colspan="2">ಅಜೀಮ್ ಪ್ರೇಮ್‌ಜಿ ಫೌಂಡೇಶನ್ ತಂಡ</td></tr>
<tr><td colspan="2">ಪರಿಶೀಲನ ತಂಡ</td></tr>
<tr><td>ಡಾ. ಹರಿಪ್ರಸಾದ್ ಜಿ.ವಿ<br>ಹಿರಿಯ ಉಪನ್ಯಾಸಕರು ಡಯಟ್ ಶಿವಮೊಗ್ಗ</td><td>ವಿಜಯ್. ಎಂ.ಈ<br>ಪದವೀಧರ ಪ್ರಾಥಮಿಕ ಶಿಕ್ಷಕರು<br>ಸ.ಹಿ.ಪ್ರಾ.ಶಾಲೆ, ವಿಶ್ವನಗರ,<br>ಭದ್ರಾವತಿ, ಶಿವಮೊಗ್ಗ.</td></tr>
<tr><td colspan="2">ಸಂಯೋಜಕರು</td></tr>
<tr><td colspan="2">ಇ.ವಿ.ಜಿ. ವಿಭಾಗ, ಡಿ.ಎಸ್.ಇ.ಆರ್.ಟಿ</td></tr>
</table>

| ಒಳಪುಟಗಳಲ್ಲಿ | | |
|---|---|---|
| ಕ್ರ.ಸಂ. | ಘಟಕ | ಪುಟ ಸಂಖ್ಯೆ |
| 1 | ಕಲಿಕಾ ಚೇತರಿಕೆ – ಒಂದು ಉಪಕ್ರಮ | 1 |
| 2 | ಕಲಿಕಾ ಚೇತರಿಕೆ ಹೀಗಾಗಬಾರದು – ಹೀಗಾಗಬೇಕು | 2–5 |
| 3 | ಕಲಿಕಾ ಹಾಳೆ ಪುಸ್ತಕದ ಮೊದಲ ಪುಟ, ಮಕ್ಕಳೊಂದಿಗೆ ಮಾತು | 6 |
| 4 | ಇತಿಹಾಸದ ಮೂಲಗಳು | 7 |
| 5 | ಇತಿಹಾಸದ ಕಾಲಗಣನೆ | 8 |
| 6 | ಮಧ್ಯಕಾಲೀನ ಭಾರತದ ಆಧಾರಗಳು | 8–9 |
| 7 | ಮಧ್ಯಕಾಲೀನ ಭಾರತ ಇತಿಹಾಸದ ಕಾಲಗಣನೆ | 9–10 |
| 8 | ಉತ್ತರ ಮತ್ತು ದಕ್ಷಿಣ ಭಾರತದ ಐತಿಹಾಸಿಕ ಘಟನೆಗಳ ನಡುವಿನ ಅಂತರ್–ಸಂಬಂಧ | 10–11 |
| 9 | ಮಧ್ಯಕಾಲೀನ ಆಡಳಿತ ಪದ್ಧತಿಗಳು | 11–13 |
| 10 | ಸಮಾಜೋ–ಧಾರ್ಮಿಕ ಪರಿಸ್ಥಿತಿ | 13–14 |
| 11 | ಯುದ್ಧ ಕಾರಣಗಳು ಮತ್ತು ಪರಿಣಾಮಗಳು | 14–15 |
| 12 | ಜಲಮಾರ್ಗದ ಅನ್ವೇಷಣೆ | 15–16 |
| 13 | ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ವಿಸ್ತರಣೆ | 16–17 |
| 14 | ಬ್ರಿಟಿಷರ ಆಳ್ವಿಕೆಯಲ್ಲಿ ಕೃಷಿಯ ಮೇಲಿನ ಪರಿಣಾಮಗಳು | 17–18 |
| 15 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಬ್ರಿಟಿಷ್ ಆಡಳಿತದ ಸುಧಾರಣೆಗಳು | 18–19 |
| 16 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | 19 |
| 17 | ಗಾಂಧಿಯುಗ | 20 |
| 18 | ಕರ್ನಾಟಕ ಏಕೀಕರಣ ಮತ್ತು ಗಡಿವಿವಾದಗಳು | 21 |
| 19 | ದಿಕ್ಕುಗಳು | 22 |
| 20 | ನಕಾಶೆಗಳು | 23 |
| 21 | ಭೂಖಂಡಗಳು | 24 |
| 22 | ಹವಾಮಾನ ಮತ್ತು ವಾಯುಗುಣ | 25 |
| 23 | ಏಷ್ಯಾ ಖಂಡ | 26 |
| 24 | ಸಂವಿಧಾನದ ಅಗತ್ಯತೆ | 26–27 |
| 25 | ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು | 28 |
| 26 | ರಾಜ್ಯ ನೀತಿ ನಿರ್ದೇಶಕ ತತ್ವಗಳು | 29 |
| 27 | ನಮ್ಮ ರಕ್ಷಣಾ ಪಡೆಗಳು | 29–30 |
| 28 | ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು | 30–33 |

## 1.ಕಲಿಕಾ ಚೇತರಿಕೆ – ಒಂದು ಉಪಕ್ರಮ

ಕಲಿಕಾಫಲಗಳ ಗಳಿಕೆಗೆ ಕಲಿಕಾಂಶ, ಪಠ್ಯಾಂಶಗಳು, ಪಠ್ಯಪುಸ್ತಕಗಳಲ್ಲಿ ಸಮ್ಮಿಳಿತಗೊಳಿಸಿದೆ. ಅಲ್ಲಿಗೆ ಕಲಿಕಾಫಲಗಳು ನಿರೀಕ್ಷಿಸಿದ್ದನ್ನು ಪಠ್ಯಪುಸ್ತಕ ಒಂದು ಕಲಿಕೋಪಕರಣವಾಗಿ ಒದಗಿಸುತ್ತದೆ. ಈ ಕಲಿಕಾಫಲಗಳ ಗಳಿಕೆಯನ್ನು ಮೂಲಭೂತ ಸಾಮರ್ಥ್ಯಗಳು ನಿರ್ಧರಿಸುತ್ತದೆ.

ಕಲಿಕೆ ಎನ್ನುವ ಪ್ರಕ್ರಿಯೆಗೆ ಭಾಷೆಯೇ ಆವರಣ. ಈ ಭಾಷೆಯಲ್ಲಿನ ಅಂತರ ಕ್ರಿಯಾತ್ಮಕತೆ ನಿರಂತರತೆಯ ಮೂಲಕ ಕಲಿಕೆ ಅನುಭವವಾಗಬೇಕಲ್ಲವೆ? ಈ ಕಲಿಕಾನುಭವ ವೇದ್ಯವಾಗುವ ತರಗತಿ ಪ್ರಕ್ರಿಯೆಯಿಂದ ಪ್ರತ್ಯಕ್ಷವಾಗಿ ವಂಚಿತವಾದ ಮಗು ತನ್ನ ಪೂರ್ವಕಲಿಕಾ ಸನ್ನಿವೇಶದಲ್ಲಿ ಕಳೆದುಕೊಂಡಿದ್ದೆಷ್ಟು? ಅವುಗಳನ್ನು ಮತ್ತು ಹೇಗೆ ಸರಿದೂಗಿಸಬೇಕೆಂಬ ಪ್ರಶ್ನೆ ಎದುರಾದಾಗ ನಾವು ನಮ್ಮ ತರಗತಿಯಲ್ಲಿ ನಮ್ಮ ವಿದ್ಯಾರ್ಥಿಗಳೊಂದಿಗೆ ನಾವೇ ರೂಪಿಸಿಕೊಳ್ಳಬಹುದಾದ ಪರಿಹಾರೋಪಾಯವೇ ಕಲಿಕಾಚೇತರಿಕೆ. ಇದು ಕೇವಲ ಒಂದು ಸಾಹಿತ್ಯವಲ್ಲ. ಸೇತುಬಂಧದಂತಹ ಯೋಜನೆಯಲ್ಲ. ಪುನರಾವಲೋಕನ ವಿಧಾನವೂ ಅಲ್ಲ. ಕಲಿಕೆಯನ್ನು ಅಮೂರ್ತದಿಂದ ಮೂರ್ತೀಕರಿಸುವ ಪ್ರಕ್ರಿಯೆಯಾಗಿದೆ.

ಈ ಪ್ರಕ್ರಿಯೆಗೆ ಮಗುವಿಂದ ನಿರೀಕ್ಷಿಸುವ ಎಲ್ಲ ಮನಸ್ಸುಗಳು ಹೊಣೆಗಾರರು. ಈ ಕಾರ್ಯ ತರಗತಿ ಪ್ರಕ್ರಿಯೆಗೆ ಸೀಮಿತವಾಗದಂತೆ ನೋಡಿಕೊಳ್ಳಬೇಕಿದೆ. ಇದು ಪಠ್ಯಾಂತರ್ಗತ ತರಗತಿ ಸಮನ್ವಯೀಕರಣ ಹೊಂದಿದ 'ಕ್ರಿಯಾಶೀಲತೆ'. ಕಳೆದುಕೊಂಡಿದ್ದನ್ನು ಎಲ್ಲಿ ಕಳೆದುಕೊಂಡಿದ್ದೇವೋ ಅಲ್ಲಿಯೇ ಹುಡುಕುವ ಶೋಧನೆ. ಅಲ್ಲಿಯೇ ವಿನಿಯೋಗಿಸುವ ಹೃದಯ. ಈ ಆಶಯಕ್ಕೆ ನಾವೆಲ್ಲರೂ ಭಾಗೀದಾರರಾಗೋಣ. ಇಲ್ಲಿ ನೀಡಿರುವ ಪ್ರಸ್ತುತ ಸಾಹಿತ್ಯದ ವಿಸ್ತೃತ ಉದ್ದೇಶಗಳು ಈ ಕೆಳಗಿವೆ.

- ಸಮಾಜವಿಜ್ಞಾನ ವಿಷಯವನ್ನು ಆಸಕ್ತಿ, ಅಭಿರುಚಿ, ತಾದ್ಯಾತ್ಮದಿಂದ ಓದುವ ಪರಿಷ್ಕೃತ ವಿಧಾನಗಳನ್ನು ಅನ್ವೇಷಿಸುವುದು.
- ಸಮಾಜವಿಜ್ಞಾನ ಕಲಿಕೆಯೊಂದಿಗೆ ಸಾಮಾಜಿಕರಣ, ಮನೋಸಾಮಾಜಿಕ ಮೌಲ್ಯ, ಸಾಂವಿಧಾನಿಕ ಮೌಲ್ಯ, ನೆಲಮೂಲ ಸಂಸ್ಕೃತಿಯ ಶೋಧದಿಂದ ಇತಿಹಾಸ, ಭೌಗೋಳಿಕತೆಯನ್ನು ಅರಿಯುವುದು.
- ನಮ್ಮ ಸುತ್ತಮುತ್ತಲಿನ ಸಂಗತಿಗಳು ನಾಳೆ ಇತಿಹಾಸದಲ್ಲಿ ಗರ್ಭೀಕರಿಸುವುದರಿಂದ ವರ್ತಮಾನವನ್ನು ನಿರಂತರವಾಗಿಸುವುದರ ಮೂಲಕ ನಾವು ನಮ್ಮ ಮಕ್ಕಳು ಮೊದಲು ನನ್ನೂರಿನ ಭೌಗೋಳಿಕತೆ, ಇತಿಹಾಸ, ಸಾಮಾಜಿಕ ಸಂರಚನೆ, ಮೌಲ್ಯ, ಸಂಸ್ಕೃತಿ, ಜನಪದೀಯ ನೆಲೆಗಳು, ಪ್ರಜಾಪ್ರಭುತ್ವದ ಮೌಲ್ಯ, ಆಚಾರ– ವಿಚಾರ, ರೂಢಿ ಸಂಪ್ರದಾಯ ನನ್ನ ಕುಟುಂಬದ ಆರ್ಥಿಕತೆ, ವ್ಯಾವಹಾರಿಕತೆಯನ್ನು ಅರ್ಥೈಸಿಕೊಳ್ಳುವುದರ ಮೂಲಕ ಸಮಾಜ ವಿಜ್ಞಾನವನ್ನು ಆಪ್ತಗೊಳಿಸುವುದು
- ಸಮಾಜವಿಜ್ಞಾನ ವಿಷಯದ ಪರಿಕಲ್ಪನೆಗಳು ನೈಜ ಬದುಕಿನ ವಾಸ್ತವಿಕ ಸಂಗತಿಗಳ ಸಮನ್ವಯಿಕರಣದಿಂದ ಆಧಾರಗಳು, ನಿಜಜೀವನದ ವಿದ್ಯಾಮಾನಗಳಿಂದ ಭೌಗೋಳಿಕ ಪರಿಕಲ್ಪನೆಗಳು ಸರಳವಾಗಿ ಕಲಿಕೆಯಾಗುವುದನ್ನು ಚಟುವಟಿಕೆಯ ಮೂಲಕ ಪ್ರಾಯೋಗಿಕ ಬೋಧನಾ ವಿಧಾನವನ್ನು ಉಜ್ಜೀವನಗೊಳಿಸುವುದು.
- ವಯೋಮಾನಕ್ಕೆ ತಕ್ಕಂತೆ ಕಲಿಕಾನುಭವ ಹೊಂದಬೇಕಾದ ಮಗು ಹಲವು ಕಾರಣಗಳಿಂದ ಪೂರ್ವಜ್ಞಾನ, ಮೂಲಸಾಮರ್ಥ್ಯ, ಕಲಿಕಾ ನಿರಂತರತೆಗಳ ಪೂರ್ವಾನುಭವಗಳ ಕೊರತೆಯನ್ನು ಕಂಡುಕೊಂಡು ಮಗುವನ್ನು ಜ್ಞಾನ ಸಮಕಾಲೀನನನ್ನಾಗಿಸುವುದು.
- ಸಮಾಜವಿಜ್ಞಾನದ ಕಲಿಕೆಯಿಂದ ನೆಲಮೂಲದ ಸಂಸ್ಕೃತಿ ಪರಂಪರೆ, ರೂಢಿ ಸಂಪ್ರದಾಯ, ಅಚಾರ–ವಿಚಾರಗಳನ್ನು ಅರ್ಥೈಸಿಕೊಂಡು ಭಾರತದ ವೈವಿಧ್ಯತೆಯ ಕುರಿತು ಹೆಮ್ಮೆಪಡುವುದು.
- ಕಲಿಕೆಯನ್ನು ಕೃತಕ ಪ್ರಕ್ರಿಯೆಯಾಗಿಸುವ ಬದಲು ವಿವಿಧ ಚಟುವಟಿಕೆಗಳು, ನಾಟಕ, ಹಾಡು, ನೃತ್ಯ, ಪ್ರಾದೇಶಿಕ ಕಲೆ, ಮತ್ತು ಹತ್ತು ಹಲವು ಚಟುವಟಿಕೆಗಳ ಮೂಲಕ ಸಮಾಜವಿಜ್ಞಾನ ಕಲಿಕೆಯನ್ನು ಆಸಕ್ತಿದಾಯಕವಾಗಿಸುವುದು.
- ಭಾರತದ ಇತಿಹಾಸ, ಭೌಗೋಳಿಕತೆ, ಸಾಮಾಜಿಕತೆ, ಆರ್ಥಿಕತೆ, ವ್ಯವಹಾರಿಕ ಪ್ರಜ್ಞೆಗಳನ್ನು ಸಮೂಲವಾಗಿ ಅರ್ಥೈಸಿಕೊಂಡು ಗೌರವಾದರ ಮತ್ತು ಹೆಮ್ಮೆಯನ್ನು ಹೊಂದುವುದು.

**ನಿಖರ ಉದ್ದೇಶಗಳು:**

• ಕೋವಿಡ್–19ರ ಸನ್ನಿವೇಶದಲ್ಲಿ ಉಂಟಾದ ಕಲಿಕಾ ಅಂತರವನ್ನು ಸುಗಮಗೊಳಿಸಲು ಬುನಾದಿ ಕಲಿಕಾ ಸಾಮರ್ಥ್ಯ ಮತ್ತು ಹಿಂದಿನ ಎರಡು ವರ್ಷಗಳಲ್ಲಿ ಮಗು ಕಲಿಯಲೇಬೇಕಾದ ಪರಿಕಲ್ಪನೆಗಳನ್ನು ಸಮನ್ವಯಗೊಳಿಸಿ ಪ್ರಸ್ತುತ ಕಲಿಕಾ ವರ್ಷದ ಕಲಿಕಾ ಫಲಗಳನ್ನು ಮಗು ಸರಳವಾಗಿ ಕಲಿಯಲು ಅನುಕೂಲಿಸುವುದು.

• ಕಲಿಕಾ ಚೇತರಿಕೆಯನ್ನು ಕೇವಲ ವಿದ್ಯಾರ್ಥಿ ಚಟುವಟಿಕೆಗೆ ಸೀಮಿತಗೊಳಿಸದೆ ಮಗುವಿನ ಕಲಿಕಾ ನಿರಂತರತೆಗೆ, ಅನ್ವೇಷಣೆ, ಚೈತನ್ಯದಾಯಕ ಕಲಿಕೆ ಮತ್ತು ಕಲಿಕೆಯ ಹೊಸ ಮಾರ್ಗದ ಅನ್ವೇಷಣೆಗೆ ಪ್ರೇರಕವಾಗಿಸುವುದು.

## 2. ಕಲಿಕಾ ಚೇತರಿಕೆ ಹೀಗಾಗಬಾರದು – ಹೀಗಾಗಬೇಕು

ಯಾವುದೇ ಯೋಜನೆಯ ಕಾರ್ಯಾನುಷ್ಠಾನದಲ್ಲಿ ಹಲವು ಇತಿಮಿತಿಗಳಿರುವುದು ಸಹಜ. ಅಲ್ಲಿನ ಮಿತಿಗಳನ್ನೇ ಮುಂದಿರಿಸಿಕೊಂಡು ಟೀಕಿಸುವ ಪವೃತ್ತಿಯನ್ನೂ ನಾವು ಕಂಡಿರುತ್ತೇವೆ. ಸಮಸ್ಯೆಗಳ ಸುಳಿಯಿಂದ ಹೊರಬರಲು ರೂಪಿಸಿದ ಯೋಜನೆಗೆ ಧನಾತ್ಮಕ ಮನಸ್ಸುಗಳು ಬೇಕು. ಅದು ತಾವೇ ಆಗಿರುತ್ತೀರಿ.

### “ಕಲಿಕಾ ಚೇತರಿಕೆ” ಹೀಗಾಗಬಾರದು!

1. ಇದು ಕೇವಲ ಕಾರ್ಯಕ್ರಮವಲ್ಲ. ದಾಖಲೆ ಮಾಡುವ ದಾಖಲೆಗಳಲ್ಲ. ಈ ಪ್ರಕ್ರಿಯೆಯ ಬಗ್ಗೆ ವಿವರಣೆ ನೀಡಿ ಮಕ್ಕಳೇ ನಿರ್ವಹಿಸುತ್ತಾರೆ ಎಂದು ಭ್ರಮಿಸುವಂತಿಲ್ಲ.
2. ಕಲಿಕಾಹಾಳೆ ಮಗುವಿನ ಮನೆಗೆಲಸವಲ್ಲ. ಮಗು ಅವುಗಳನ್ನು ಬರೆದು ಮುಗಿಸುವಷ್ಟಕ್ಕೆ ಸೀಮಿತವಲ್ಲ.
3. ‘ಕಲಿಕಾಚೇತರಿಕೆ’ಯು ಯಾವ ಸಾಂಪ್ರದಾಯಿಕ ಬೋಧನಾ ವಿಧಾನದಿಂದಲೂ ನಿರೀಕ್ಷಿತ ಫಲ ನೀಡುವುದಿಲ್ಲ.
4. ಈ ಪ್ರಕ್ರಿಯೆಗೆ ಮಗು ಮಾತ್ರ ಹೊಣೆಗಾರನಲ್ಲ.
5. ಮಗುವಿನ ಕಲಿಕಾ ಪರೀಕ್ಷೆಗಷ್ಟೆ ಕಲಿಕಾಹಾಳೆಗಳನ್ನು ಬಳಸುವಂತಿಲ್ಲ.

**ಹೀಗಾದರೆ ಉತ್ತಮ**

1. ಕಲಿಕೆಯ ಸಾಧನ ತಂತ್ರಗಳನ್ನು ಉತ್ತೇಜಿಸೋಣ.
2. ಓದು, ಬರಹ, ಮೌಖಿಕ ಅಭಿವ್ಯಕ್ತಿ ಸುಲಲಿತವಾಗಿರುವಂತೆ ಯೋಜಿಸೋಣ.
3. ಕಲಿಕಾ ಹಾಳೆಗಳನ್ನು ನೀಡುವ ಮೊದಲು ಪರಿಕಲ್ಪನೆಗಳನ್ನು ಮಗುವಿನ ಸ್ವ–ಅನುಭವ, ಪೂರ್ವಾನುಭವ,ಸ್ಥಳೀಯ ಸನ್ನಿವೇಶ, ಆಕರಗಳಿಂದ ವಿವರಿಸೋಣ
4. ಕಲಿಕೆ ಪೂರ್ವಜ್ಞಾನ ಮತ್ತು ವರ್ತಮಾನದ ಅನುಭವಗಳನ್ನು ಸಮನ್ವಯಿಸೋಣ.
5. ಆಟ–ಸ್ಪರ್ಧೆ, ಮೌಖಿಕಾಭಿವ್ಯಕ್ತಿ, ಸ್ಥಳ ಭೇಟಿ, ಸನ್ನಿವೇಶ ನಿರ್ಮಾಣ, ನಿರೂಪಣೆ, ಕಿರುನಾಟಕ ಪಾತ್ರಾಭಿನಯ, ಸಂದರ್ಶನ, ಮೊದಲಾದ ವಿಧಾನಗಳನ್ನು ಬಳಸಿ ಪರಿಕಲ್ಪನೆಯ ಪ್ರತ್ಯಕಾನುಭವ ಒದಗುವಂತೆ ಅವಕಾಶ ಕಲ್ಪಿಸೋಣ.

**• ತರಗತಿ ಸಮನ್ವಯೀಕರಣ**

* ಮಗು ಈ ವರ್ಷ ಕಲಿಯುತ್ತಿರುವ ಕಲಿಕಾಂಶಗಳು ಹಿಂದಿನ ವರ್ಷಗಳ ಕಲಿಕಾನುಭವವನ್ನು ಆಧರಿಸಿದ್ದು, ಬುನಾದಿ ಸಾಮರ್ಥ್ಯಗಳ ಆಧಾರದ ಮೇಲೆ ಪ್ರತಿವರ್ಷದ ಕಲಿಕಾಫಲ ರೂಪಿಸಲ್ಪಟ್ಟಿದೆ. ಈ ಸರಣಿ ಸ್ವರೂಪದ ಕಲಿಕಾ ಪ್ರಕ್ರಿಯೆ ಸುಗಮಗೊಳ್ಳಲು, ಪರಿಕಲ್ಪನೆಯ ಹಿನ್ನೆಲೆ, ಮುನ್ನೆಲೆಗಳನ್ನು ಅರ್ಥೈಸಿಕೊಳ್ಳಬೇಕು. ಈ ಪ್ರಕ್ರಿಯೆಯು ಎರಡು ರೀತಿಗಳಲ್ಲಿ ತರಗತಿಯಲ್ಲಿ ಸಮನ್ವಯೀಕರಣಗೊಳ್ಳುವ ಸಾಧ್ಯತೆಯಿದೆ.

**1. ಪ್ರಧಾನ ಪ್ರಾಶಸ್ತ್ಯ ವಿಧಾನ:** ಕಲಿಕಾ ಚೇತರಿಕೆ ಕಾರ್ಯಯೋಜನೆಯ ನಿಗದಿತ ಅವಧಿಗಳಲ್ಲಿ ಬುನಾದಿ ಸಾಮರ್ಥ್ಯಗಳನ್ನಾಧರಿಸಿದ ಆಯ್ದ ಕಲಿಕಾಂಶಗಳಿಗೆ ಪ್ರಧಾನ ಪ್ರಾಶಸ್ತ್ಯ ನೀಡಿ ಕಲಿಸುವುದು ಮತ್ತು ಮೌಲ್ಯಾಂಕನ ಮಾಡುವುದು.

**2. ಪರೋಕ್ಷ ಪ್ರಾಶಸ್ತ್ಯ ವಿಧಾನ:** ಪಠ್ಯಕಲಿಕೆಯ ಸಂದರ್ಭದಲ್ಲಿ ಒಂದು ಅವಧಿಯನ್ನು ಬುನಾಧಿ ಸಾಮರ್ಥ್ಯ ಕಲಿಕೆಯ ನಂತರ ಪಾಠ ನಿರ್ವಹಿಸಿ ಪ್ರಸ್ತುತ ವರ್ಷದ ಕಲಿಕಾ ಫಲಗಳಿಗೆ ಅಗತ್ಯ ಪಾಠಗಳನ್ನು ನಿರ್ವಹಿಸಿ ಘಟಕ ಪರೀಕ್ಷೆಯ ಮೂಲಕ ಮೌಲ್ಯಮಾಪನ ನಡೆಸುವುದು.

**ಸುಗಮಕಾರರ ಸಿದ್ಧತೆ**

- ಆಯೋಜಿಸುವ ಕಲಿಕಾ ಚಟುವಟಿಕೆ ಮತ್ತು ಅದರ ಯೋಜನೆ.
- ಆಕರಗಳು, ಕಲಿಕೋಪಕರಣಗಳ ಸಿದ್ಧತೆ.
- ಚಟುವಟಿಕೆಯ ಮೂಲಕ ಪರಿಕಲ್ಪನೆಯ ದೃಷ್ಟಾಂತೀಕರಣ, ಪ್ರತ್ಯಕ್ಷಾನುಭವಕ್ಕೆ ಮಕ್ಕಳಿಗೆ ಪ್ರೇರಣೆ.
- ಪರಿಕಲ್ಪನೆಯ ವಿಸ್ತರಣೆ, ವರ್ತಮಾನದ ಕಲಿಕಾಂಶದ ಸಮನ್ವಯೀಕರಣ.
- ಕಲಿಕಾಹಾಳೆಗಳನ್ನು ಪೂರ್ಣಗೊಳಿಸಲು ಅನುಕೂಲಿಸುವುದು.
- ವಿದ್ಯಾರ್ಥಿ ಕಲಿಕಾಪ್ರಗತಿ ಅವಲೋಕನ. ನಾಲ್ಕನೆಯ ಸ್ತರ ತಲುಪಲು ಸಹಾಯ.
- ಶಿಕ್ಷಕರ ಹಿಮ್ಮಾಹಿತಿ ನಮೂದಿಸುವುದು.
- ಕಲಿಕಾ ಹಾಳೆಯ ಪ್ರಗತಿಯಿಂದ ಮೌಲ್ಯಾಂಕನ–ಪುನರಾವಲೋಕನ ಚಟುವಟಿಕೆ.

**ಕಲಿಕಾ ಅವಧಿ ನಿರ್ಧಾರ**

ತಾವು ಕಲಿಕಾರ್ಥಿಗಳ ವೈಯಕ್ತಿಕ ಭಿನ್ನತೆಗಳನ್ನು ಗಮನದಲ್ಲಿಟ್ಟು ಕೊಂಡು ಕಲಿಕಾವಧಿ ನಿರ್ಧರಿಸಿರಿ. ಪ್ರಾದೇಶಿಕ ಭಿನ್ನತೆ, ಕಲಿಕಾಮಟ್ಟ ವಿದ್ಯಾರ್ಥಿಗಳ ಕಲಿಕಾ ಪರಿಸರ ಮೊದಲಾದ ಅಂಶಗಳು ಅವಧಿ ನಿರ್ಧಾರದ ಮಾನಕಗಳಾಗಿರುತ್ತವೆ.

**ಮೌಲ್ಯಾಂಕನ**

ಪ್ರತ್ಯೇಕವಾದ ಸುತ್ತೋಲೆ ಇಲಾಖೆಯಿಂದ ನೀಡಿದೆ. ಅದನ್ನು ಅನುಸರಿಸಿ ಕಲಿಕಾ ಹಾಳೆಗಳಲ್ಲಿನ ಚಟುವಟಿಕೆಗಳನ್ನು ವಿದ್ಯಾರ್ಥಿಗಳು ಮಾಡುತ್ತಾ ತೆರಳುವಾಗ ಅವಲೋಕಿಸಿದ ದತ್ತಾಂಶಗಳನ್ನು ತಾವು ಸಂಗ್ರಹಿಸಬಹುದಾಗಿರುತ್ತದೆ.

ನಾಲ್ಕು ಸ್ತರಗಳಲ್ಲಿ ವಿದ್ಯಾರ್ಥಿಯ ಪ್ರಗತಿ ನಿರೀಕ್ಷಿಲಾಗಿದೆ. ಅದಕ್ಕಾಗಿ ವಿದ್ಯಾರ್ಥಿ ಸ್ವಾವಲೋಕನ ನಮೂನೆಯನ್ನು ಕಲಿಕಾ ಹಾಳೆಯ ಪುಸ್ತಕದಲ್ಲಿ ನೀಡಲಾಗಿದೆ. ನಾಲ್ಕು ಸ್ತರಗಳ ಹೀಗಿವೆ.

**ಅಪೇಕ್ಷಿತ ಕಲಿಕಾ ಫಲ:**

| | | | | |
|---|---|---|---|---|
| ಮುಕ್ತಾಯವಾದ ಕಲಿಕಾಂಶ (ವಿದ್ಯಾರ್ಥಿಗಳು ಬರೆಯುತ್ತಾರೆ) | ತಿಳಿದಿರುತ್ತಾರೆ. (ಶೇ 30 – 49) | ಅರ್ಥೈಸಿ ಕೊಂಡಿರುತ್ತಾರೆ (ಶೇ 50 – 60) | ಅರ್ಥೈಸಿ ಕೊಂಡ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಂಡು ಕಲಿಸುತ್ತಾರೆ (ಶೇ61–90) | ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತಾರೆ (ಶೇ91–100) |

| ಸಾಮರ್ಥ್ಯದ ಹಂತ | ವಿವರಣೆ |
|---|---|
| 1. ತಿಳಿಸುತ್ತೇನೆ | ಕಲಿಕಾಫಲ ಒಳಗೊಳ್ಳುವ ಅಂಶಗಳು ಸಾಧಿಸಿಲ್ಲ/ ಸೀಮಿತವಾದ ಅಂಶಗಳು ಮಾತ್ರ ಪರಿಚಯವಿದೆ/ಶಿಕ್ಷಕರ ಸಂಪೂರ್ಣ, ನಿರಂತರ ಬೆಂಬಲದ ಅವಶ್ಯಕತೆ ಇದೆ. |
| 2. ಅರ್ಥೈಸಿಕೊಂಡಿದ್ದೇನೆ. | ಕಲಿಕಾಫಲದ ಕೆಲವು ಅಂಶಗಳ ಸ್ಪಷ್ಟತೆ ಇದೆ/ ಕೆಲವುದರಲ್ಲಿ ಸ್ಪಷ್ಟತೆಯ ಅವಕಾಶವಿದೆ/<br>ಶಿಕ್ಷಕರ, ಸ್ನೇಹಿತರ ಭಾಗಶಃ ಬೆಂಬಲದ ಅವಶ್ಯಕತೆ ಇದೆ |
| 3. ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಂಡಿದ್ದೇವೆ. | ಕಲಿಕಾಫಲದ ಎಲ್ಲಾ ಅಂಶಗಳ ನಿರೀಕ್ಷಿತ ಸ್ಪಷ್ಟತೆ ಇದೆ/ ಕಲಿತಿದ್ದನ್ನು ತನ್ನ ಸ್ನೇಹಿತರೊಂದಿಗೆ ಹಂಚಿಕೊಳ್ಳುತ್ತಾರೆ/ ಶಿಕ್ಷಕರು ಮಗುವಿಗೆ ಕಲಿಕಾಂಶಗಳಾಧಾರಿತ ಸವಾಲಿನ ಕಾರ್ಯಗಳನ್ನು ನೀಡುವ ಅವಶ್ಯಕತೆಯಿದೆ. |
| 4. ಇದಕ್ಕೆ ಸಂಬಂಧಿಸಿದ ಇತರೇ ಅಂಶಗಳನ್ನು ಸ್ವತಃ ಹೇಳುತ್ತೇವೆ. | ಕಲಿಕಾಫಲದ ಅಂಶಗಳ ಸ್ಪಷ್ಟತೆ ಇದೆ/ಮೀರಿದ ಸ್ಪಷ್ಟತೆಯಿದೆ/ ಶಿಕ್ಷಕರು ಮಗುವಿನ ಮೂಲಕ ಧನಾತ್ಮಕತೆಯನ್ನು ತರಗತಿಯಿಂದ ಹೊರಗೆ ವಿಸ್ತರಿಸುವ ಸಂಪೂರ್ಣ ಅವಕಾಶವಿದೆ. ಮಗುವಿನ ಸ್ವತಃ ಸೃಜನೆಯನ್ನೂ ಅವಲೋಕಿಸಿರಿ |

**ಉದಾಹರಣೆ:**

**ಕಲಿಕಾಫಲ:** ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವರು

- ಇತಿಹಾಸದ ರಚನೆಗೆ ಅಗತ್ಯವಾದ ಮೂಲಾಧಾರಗಳನ್ನು ಬಗೆಗಳನ್ನು ತಿಳಿಯುತ್ತಾರೆ
- ಇತಿಹಾಸದ ಮೂಲಾಧಾರಗಳ ಸಂರಕ್ಷಣೆಯ ಮನೋಭಾವವನ್ನು ಬೆಳೆಸಿಕೊಳ್ಳುವರು

ಮೇಲಿನ ಎರಡು ಮುಖ್ಯ ಉದ್ದೇಶಗಳನ್ನು ಪೂರೈಸಲು ಮಗುವು ಚಟುವಟಿಕೆಯನ್ನು ಅರ್ಥಬದ್ಧವಾಗಿ ಪೂರ್ಣಗೊಳಿಸುವುದು ಅಗತ್ಯವಾಗಿದೆ. ಇಲ್ಲಿ ನೀಡಿರುವ ಕಲಿಕಾಹಾಳೆಗಳಲ್ಲಿ ನೀಡಿರುವ ಚಟುವಟಿಕೆಗಳ ಅಂಶಗಳೇ ಅಂತಿಮವಲ್ಲ. ಮಗುವನ್ನು ಕಲಿಕಾಫಲದ ಹಿನ್ನೆಲೆಯಲ್ಲಿ ಸಮಗ್ರವಾಗಿ ನೋಡಿಕೊಂಡು ಮಗುವಿನ ಕಲಿಕಾ ಮಟ್ಟ ಗುರುತಿಸಿಕೊಳ್ಳುವುದಾಗಿದೆ.

| ಮುಕ್ತಾಯವಾದ ಕಲಿಕಾಂಶ | ಸಾಮರ್ಥ್ಯದ ಹಂತ | ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿಯುವುದು. |
|---|---|---|
| ತಿಳಿದಿರುತ್ತೇನೆ | L1 | ಮಗುವು ಕೆಲವೇ ಕೆಲವು ಆಧಾರಗಳ ಬಗೆಗಳನ್ನು ಗುರುತಿಸಿದ್ದರೆ/ ಯಾವುದೇ ಆಧಾರಗಳನ್ನು ತಿಳಿಯದಿದ್ದರೆ, ಗುರುತಿಸದಿದ್ದರೆ. ಚಿತ್ರಗಳನ್ನು ಕಲ್ಲು, ದೇವಸ್ಥಾನ ಎಂದು ಮಾತ್ರ ಗುರುತಿಸಿ ಹೇಳುತ್ತದೆ. |
| ಅರ್ಥೈಸಿಕೊಂಡಿದ್ದಾನೆ | L2 | ಮಗುವು ಮೂಲಾಧಾರಗಳನ್ನು ಗುರುತಿಸುತ್ತದೆ, ಕೆಲವೊಮ್ಮೆ ಗೊಂದಲಗಳಿರುವಂತೆ ಕಾಣುವುದು. ಸಂರಕ್ಷಣೆಯ ಕುರಿತು ಲಘುವಾದ ಅಭಿಪ್ರಾಯ ವ್ಯಕ್ತಪಡಿಸುತ್ತದೆ. |
| ಅರ್ಥೈಸಿಕೊಂಡಿರುವ ಅಂಶಗಳನ್ನು ಸಹಪಾಠಿಗಳೊಂದಿಗೆ ಹಂಚಿಕೊಳ್ಳುತ್ತೇವೆ. | L3 | ಮಗುವು ಮೂಲಾಧಾರಗಳನ್ನು ಗುರುತಿಸಿ, ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಸಂರಕ್ಷಣೆಗೆ ಸಂಬಂಧಿಸಿದ ಸಮಂಜಸ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ. ತನ್ನ ಸಹಪಾಠಿಗಳೊಂದಿಗೆ ಕಲಿಕಾಂಶಗಳನ್ನು ಹಂಚಿಕೊಳ್ಳುತ್ತದೆ. |

| | | |
|---|---|---|
| ಇದಕ್ಕೆ ಸಂಬಂಧಿಸಿದ ಇತರೆ ಅಂಶಗಳನ್ನು ಸ್ವತಃ ಹೇಳುತ್ತೇನೆ | L4 | ಮಗುವು ಇತಿಹಾಸದ ರಚನೆಯಲ್ಲಿ ಮೂಲಾಧಾರಗಳ ಮಹತ್ವವನ್ನು ತಿಳಿಯುತ್ತದೆ. ಮೂಲಾಧಾರಗಳನ್ನು ಉಳಿಸುವ ವಿಶಾಲ ಮನೋಭಾವವನ್ನು ತಳೆಯುತ್ತದೆ. ಅದರ ಸಂರಕ್ಷಣೆಗೆ ತಾನು ಮಾಡಬಹುದಾದ ಸಣ್ಣ ಕಾರ್ಯಗಳನ್ನು ವ್ಯಕ್ತಪಡಿಸುತ್ತದೆ. ಅವಕಾಶ ಸಿಕ್ಕಾಗ ತನ್ನ ಸುತ್ತಲಿನವರಿಗೆ ಸಂರಕ್ಷಣೆಯ ಮಹತ್ವವನ್ನು ತಿಳಿಸಿ ಅವರನ್ನು ಪ್ರೇರೇಪಿಸುತ್ತದೆ. |

• **ಸುಗಮಕಾರರಿಗೆ (ಶಿಕ್ಷಕರಿಗೆ) ಸೂಚನೆ:** ಕಲಿಕಾ ಫಲಗಳನ್ನು ಸಂಪೂರ್ಣವಾಗಿ ಸಾಧಿಸಲು, ನೀಡಿರುವ ಕಲಿಕಾ ಹಾಳೆಗಳು ಒಂದು ಚಿಕ್ಕ ಸಾಧನ ಅಷ್ಟೆ ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ಕೆಲವೊಮ್ಮೆ ಈ ಕಲಿಕಾಹಾಳೆಗಳು ಕಲಿಕಾಫಲದ ಕೆಲವು ಅಂಶಗಳನ್ನು ಮಾತ್ರ ಸಾಧಿಸಲು ನೆರವಾಗಬಹುದು. ಸುಗಮಕಾರರು ಸಮಗ್ರವಾಗಿ ಕಲಿಕಾ ಫಲಗಳನ್ನು ಮಕ್ಕಳು ಸಾಧಿಸಲು ಇನ್ನೂ ಹೆಚ್ಚಿನ, ವಿಭಿನ್ನವಾದ ಚಟುವಟಿಕೆಗಳನ್ನು ಸ್ವತಂತ್ರವಾಗಿ ಕೈಗೊಳ್ಳುವುದು ಅತಿ ಮುಖ್ಯ. ಅಲ್ಲದೇ ತರಗತಿಯಾಚೆಗೂ ಕೂಡ ಮಕ್ಕಳಿಗೆ ಕಲಿಕಾಫಲದ ಈಡೇರಿಕೆಗೆ ಅವಕಾಶವಿರುವುದು ಸುಗಮಕಾರರ ಚಿಂತನೆಯಲ್ಲಿರುವುದು ಅಗತ್ಯ.

ಈ ಮೌಲ್ಯಮಾಪನವು ಖಡಾಖಂಡಿತವಾಗಿ ಮಕ್ಕಳನ್ನು ಗ್ರೇಡ್ ಮಾಡಲು ಅಥವಾ ಅವರನ್ನು ವಿಭಾಗಿಸಲು ಅಲ್ಲ. ಬದಲಾಗಿ ಸುಗಮಕಾರರು ಮಕ್ಕಳ ಕಲಿಕಾ ಮಟ್ಟವನ್ನು ನಿರ್ದಿಷ್ಟವಾಗಿ ಗುರುತಿಸಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಬಹಳ ಮುಖ್ಯವಾಗಿ ಮಕ್ಕಳ ಕಲಿಕಾಮಟ್ಟವನ್ನು ತಿಳಿದ ನಂತರ ಸುಗಮಕಾರರು ಮಕ್ಕಳನ್ನು ಮುಂದಿನ ಕಲಿಕಾ ಹಂತಕ್ಕೆ ತೆಗೆದುಕೊಂಡು ಹೋಗಲು ನೆರವಾಗುವ ಮೂಲ ಉದ್ದೇಶದೊಂದಿಗೆ ರಚಿಸಲಾಗಿದೆ.

## 3. ಕಲಕಾ ಹಾಳೆ ಪುಸ್ತಕದ ಮೊದಲ ಪುಟ

ಮಕ್ಕಳೊಂದಿಗೆ ಮಾತು

ನಮ್ಮ ಕಲಿಕಾ ಚೇತರಿಕೆ ಸಾಹಿತ್ಯ ಈ ಕೆಳಕಂಡ ಮಾತುಗಳಿಂದ ಆರಂಭವಾಗುತ್ತದೆ. ಇಲ್ಲಿ ಆ ಮಾತುಗಳನ್ನು ನೀಡಲು ಕಾರಣ ಇಲ್ಲಿರುವ ಆಶಯ ತಾವೂ ಓದಿ. ಮಕ್ಕಳನ್ನು ಅರ್ಥೈಸಿಕೊಳ್ಳಿ, ಮಾತಾಡಿಸಿ ಮತ್ತು ಅವರಿಗೆ ಮಾನಸಿಕ ಸುರಕ್ಷತೆ ಒದಗಿಸಿರಿ.

**ಪ್ರೀತಿಯ ಮಕ್ಕಳೇ,**

ಕೋವಿಡ್ 19ರ ಸಾಂಕ್ರಾಮಿಕ ರೋಗದ ಸನ್ನಿವೇಷವನ್ನು ಎದುರಿಸಿ ನೀವು ಈಗ ಏಳನೇ ತರಗತಿಗೆ ಬಂದಿದ್ದೀರಿ. ಎಷ್ಟೋ ದಿನ ನಿಮ್ಮ ಆಟ, ಓದು, ಸಹಜವಾಗಿರೋದನ್ನ ಬಿಟ್ಟು ಮನೆಯಲ್ಲಿರಬೇಕಾದ ಪ್ರಸಂಗವನ್ನು ಸಮರ್ಥರಾಗಿ ಎದುರಿಸಿದ್ದೀರಿ. ಜಾಣ ಮಕ್ಕಳು ನೀವು.

ಏಳನೇ ತರಗತಿಯಲ್ಲಿ ಸಮಾಜ ವಿಜ್ಞಾನ ಕಲಿಯಲು ನಿಮಗೆ ಸ್ವಾಗತ. ಏಳನೇ ತರಗತಿಯ ಮಕ್ಕಳು ಕಲಿಯಬೇಕಾದ, ಮುಂದಿನ ವರ್ಷ ಏಳನೇ ತರಗತಿಗೆ ಹೋದಾಗ ಅರ್ಥವಾಗಬೇಕಾದ ಪರಿಕಲ್ಪನೆಗಳ ಮೂಲವನ್ನು ಈ ಕಲಿಕಾ ಹಾಳೆಗಳ ಪುಸ್ತಕದಲ್ಲಿ ನಿಮಗೆ ನೀಡಿದೆ. ನೀವು ಸ್ವತಃ, ಅಥವಾ ಸ್ನೇಹಿತರ ಜೊತೆಗೆ ಹಾಗೂ ಅಗತ್ಯವಿದ್ದಲ್ಲಿ ಶಿಕ್ಷಕರ ಸಹಾಯದಿಂದ ಈ ಪುಸ್ತಕದಲ್ಲಿ ನೀಡಿದ ಚಟುವಟಿಕೆಗಳನ್ನು ಮಾಡುವಿರಿ. ಹೇಗೂ ಜಾಣರಿದ್ದೀರಿ. ಬೇಕಾದ್ದನ್ನು ಕೇಳಿ ನೀವು ಸ್ವತಃ ಮಾಡುವ ಚಟುವಟಿಕೆಗಳೇ ಇಲ್ಲಿ ಹೆಚ್ಚಿವೆ. ನಿಮ್ಮ ಕಲಿಕೆ ಚೆಂದವಾಗಲು ಹಾರೈಸುತ್ತೇವೆ.

ಈ ಪುಸ್ತಕದ ಕಲಿಕಾ ಹಾಳೆಗಳನ್ನು ಈ ಕೆಳಕಂಡಂತೆ ಬಳಸಿಕೊಳ್ಳಿರಿ.

– ಸ್ವತಃ ಅಥವಾ ನಿಮ್ಮ ಸ್ನೇಹಿತರ ಜೊತೆಗೆ ನೀಡಿರುವ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಿರಿ.

– ನೀಡಿರುವ ವಿಷಯದ ಕುರಿತು ಯೋಚಿಸಿರಿ. ಹೆಚ್ಚು ಹೆಚ್ಚು ನಿಮ್ಮ ಸ್ನೇಹಿತರು, ಅಣ್ಣ, ಅಕ್ಕ, ಶಿಕ್ಷಕರೊಂದಿಗೆ ನೀಡಿರುವ ವಿಷಯದ ಮಾತಾಡಿರಿ.

– ನಿಮ್ಮ ಪಠ್ಯ ಪುಸ್ತಕದ ಜೊತೆಗೆ ಇಲ್ಲಿ ನೀಡಿರುವ ಸಾಹಿತ್ಯವನ್ನು ಓದಿರಿ.

– ಕಲಿಕಾ ಹಾಳೆಯಲ್ಲಿ ಮಾಡಿರುವ ಚಟುವಟಿಕೆಗಳನ್ನು ಮಾಡಿರಿ.

– ಏನಾದರೂ ಹೆಚ್ಚಿನ ಅಗತ್ಯಬೇಕಾದಲ್ಲಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ. ಹಾಗೂ ಮುಖ ಪಟದಲ್ಲಿ ನೀಡಿರುವ ಡಿ.ಎಸ್.ಇ.ಆರ್.ಟಿ ವಿಳಾಸಕ್ಕೆ ಪತ್ರ, ಇ ಮೇಲ್ ಮೂಲಕ ಸಂಪರ್ಕಿಸಿರಿ.

ಖುಷಿಯಾಗಿ ಕಲಿಯಿರಿ. ಸಂತೋಷದಿಂದ ಬೆಳೆಯಿರಿ

## ಕಲಿಕಾಂಶ 1

## ಇತಿಹಾಸದ ಮೂಲಾಧಾರಗಳು.

**ಕಲಿಕಾ ಫಲ:** ಇತಿಹಾಸದ ಮೂಲಾಧಾರಗಳ ಬಗ್ಗೆ ಅರಿತುಕೊಳ್ಳುತ್ತಾರೆ.

**ಉದ್ದೇಶಗಳು:**

- ಇತಿಹಾಸದ ರಚನೆಗೆ ಅವಶ್ಯಕವಾದಂತಹ ಮೂಲಾಧಾರಗಳ ಬಗ್ಗೆ ಅರಿವು ಮೂಡಿಸುವುದು.
- ಅವುಗಳ ಸಂರಕ್ಷಣೆಯ ಮಹತ್ವವನ್ನು ತಿಳಿಸುವುದು.
- ತಮ್ಮ ದೈನಂದಿನ ಜೀವನದಲ್ಲಿ ಉಪಯೋಗಿಸುವ ವಸ್ತುಗಳ ಮೇಲೆ ಇತಿಹಾಸವನ್ನು ರಚಿಸುವ ಕೌಶಲ್ಯವನ್ನು ಬೆಳೆಸುವುದು.

**ಕಲಿಕಾ ಸಾಮಾಗ್ರಿಗಳು:** ಶಾಲೆಯ ಮೂಲದ ದಾಖಲೆಗಳು, ಇತಿಹಾಸದ ಆಧಾರಗಳ ಚಿತ್ರಗಳು, ಪಠ್ಯ ಪುಸ್ತಕ.

ಪ್ರಕ್ರಿಯೆ: ಸುಗಮಕಾರರು ಮಕ್ಕಳಿಗೆ ಇತಿಹಾಸದ ಮೂಲಾಧಾರ ಬಗ್ಗೆ ಪರಿಚಯಿಸಲು ಶಾಲೆಯ ಮೂಲ ಇತಿಹಾಸವನ್ನು ತೆಗೆದುಕೊಂಡು ಅರ್ಥೈಸುವುದು. ಮೊದಲಿಗೆ ಮಕ್ಕಳಿಂದ ತಮ್ಮ ಶಾಲೆಯ ಚಿತ್ರವನ್ನು ಬರೆಸುವುದು. ನಂತರ ಶಾಲೆಯ ಇಂದಿನ ಸ್ಥಿತಿ ಹೇಗಿದೆ ಎಂಬುದನ್ನು ಮಕ್ಕಳಿಂದಲೇ ಹೇಳಿಸುವುದು. ತದ ನಂತರ ಶಾಲೆಯ ಆರಂಭದ ಬಗ್ಗೆ ಅರಿಯಲು ಮುಖ್ಯಶಿಕ್ಷಕರು ಅಥವಾ ಊರಿನ ಹಿರಿಯರಿಂದ ಮಾಹಿತಿಗಳನ್ನು ಸಂಗ್ರಹಿಸಿಕೊಳ್ಳಲು ಅವಕಾಶ ನೀಡಬೇಕು. ಸಂಗ್ರಹಿದ ಮಾಹಿತಿ ಮೇಲೆ ಚರ್ಚಿಸುತ್ತ ಶಾಲೆಯ ಇತಿಹಾಸ ತಿಳಿಯಲು ಯಾವೆಲ್ಲಾ ನಮಗೆ ಆಧಾರಗಳಾಗಿವೆ ಎಂಬುದನ್ನು ಅರ್ಥೈಸುವುದು. ನಂತರ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಮಾರ್ಗದರ್ಶನ ಮಾಡುತ್ತಾ ಇತಿಹಾಸ ರಚನೆಗೆ ಯಾವೆಲ್ಲಾ ಆಧಾರಗಳಾಗಿವೆ ಮತ್ತು ಅವು ಇತಿಹಾಸ ರಚನೆಗೆ ಹೇಗೆ ಸಹಕಾರಿಯಾಗಿವೆ ಎಂಬುದನ್ನು ಅರ್ಥೈಸುವುದು ಮತ್ತು ಅವುಗಳ ಸಂರಕ್ಷಣೆಯ ಮಹತ್ವವನ್ನು ಮಕ್ಕಳೇ ಅರಿಯುವಂತೆ ಮಾಡುವುದು. ಕಲಿಕಾ ಹಾಳೆಯ ಚಟುವಟಿಕೆಗಳನ್ನು ಸ್ವತಃ ಮಕ್ಕಳಿಂದಲೇ ಮಾಡಿಸುವುದು ಅಗತ್ಯವಿರುವ ಕಡೆ ಸುಗಮಕಾರರು ಮಾರ್ಗದರ್ಶನವನ್ನು ನಿಡುವುದು.

### ಕಲಿಕಾ ಹಾಳೆ–1

1. **ಚಟುವಟಿಕೆ:** ನನ್ನ ಶಾಲೆಯ ಬಗ್ಗೆ ನನಗೆಷ್ಟು ಗೊತ್ತು?
2. **ಚಟುವಟಿಕೆ:** ಶಾಲೆಯ ಇತಿಹಾಸದ ಮೂಲಗಳನ್ನು ಹುಡುಕೋಣ?
3. **ಚಟುವಟಿಕೆ:** ಶಾಲೆಯ ಇತಿಹಾಸದ ಮೇಲೆ ಚರ್ಚಿಸೋಣ.

1, 2 ಮತ್ತು 3 ಕ್ಕೆ ಮಾಹಿತಿ ಸಂಗ್ರಹಿಸಲು ಅವಕಾಶ ನೀಡುವುದು ಅಗತ್ಯವಿದ್ದಲ್ಲಿ ತಾವೇ ಮಾಹಿತಿ ಒದಗಿಸುವುದು.

**ಗುಂಪು ಚರ್ಚೆ:** ಮಕ್ಕಳನ್ನು ಎರಡು ಅಥವಾ ಅಗತ್ಯಕ್ಕೆ ತಕ್ಕಂತೆ ಗುಪುಗಳಾಗಿ ಮಾಡಿ ಮೇಲಿನ 3 ಚಟುವಟಿಕೆಗಳ ಬಗ್ಗೆ ಚರ್ಚಿಸಿ ಮಂಡನೆ ಮಾಡಲು ಅವಕಾಶ ಒದಗಿಸುವುದು.

ಮಕ್ಕಳ ನಡುವಿನ ಚರ್ಚೆಯಲ್ಲಿ ಅಂಶಗಳನ್ನು ಕ್ರೂಢೀಕರಿಸಿ ಇತಿಹಾಸ ರಚನೆಯಲ್ಲಿ ದಾಖಲೆಗಳು ಹೇಗೆ ಮಹತ್ವದ ಪಾತ್ರ ವಹಿಸುತ್ತವೆ ಎಂಬುದನ್ನು ಮನದಟ್ಟು ಮಾಡಿಸಿ ಕಲಿಕಾ ಹಾಳೆ 2 ರಲ್ಲಿ ಇತಿಹಾಸದ ಆಧಾರಗಳನ್ನು ಅರ್ಥಮಾಡಿಸಲು ಪ್ರಯತ್ನಿಸುವುದು.

### ಕಲಿಕಾ ಹಾಳೆ–2

**1. ಚಟುವಟಿಕೆ:** ಚಿತ್ರ ನೋಡಿ ಗುರುತಿಸೋಣ ಮತ್ತು ಹೆಸರಿಸೋಣ.

ಈ ಚಟುವಟಿಕೆಯಲ್ಲಿ ನೀಡಿರುವ ಚಿತ್ರಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಗುರುತಿಸಲು ಹೇಳುವುದು. ಇಲ್ಲಿ ಕೆಲವೇ ಮೂಲಾಧಾರಗಳ ಚಿತ್ರಗಳನ್ನು ನೀಡಲಾಗಿದ್ದು ಇತರ ಆಧಾರಗಳ ಚಿತ್ರಗಳನ್ನು ಬಳಸಿಕೊಳ್ಳುವುದು. ಆಧಾರಗಳನ್ನು ಪರಿಚಯಿಸುವಾಗ ಪ್ರಸ್ತುತಕ್ಕೆ ಹೋಲಿಸಿ ಅರ್ಥೈಸುವುದು ಉದಾ: ಶಾಸನಗಳನ್ನು ಪರಿಚಯಿಸುವಾಗ ಇಂದಿನ ಶಿಲಾನ್ಯಾಸಗಳನ್ನ (ಶಾಲೆ/ಕಟಡಗಳ ಶಿಲನ್ಯಾಸಗಳು) ಹೋಲಿಸುವುದು. ಜೊತೆಗೆ ಇವುಗಳು ಹೇಗೆ ಇತಿಹಾಸ ರಚನೆಗೆ ಸಹಕಾರಿಯಾಗಿವೆ ಎಂಬುದನ್ನು ಅರ್ಥೈಸುವುದು.

**2. ಚಟುವಟಿಕೆ:** ಇತಿಹಾಸ ರಚನೆಗೆ ಸಹಕಾರಿಯಾಗಿರುವ ನಿಮ್ಮ ಸುತ್ತಮುತ್ತಲಿನ ಸ್ಮಾರಕಗಳನ್ನು ಪಟ್ಟಿಮಾಡಿ.

ಸ್ಥಳಿಯ ಸ್ಮಾರಕಗಳನ್ನ ಮಕ್ಕಳೇ ಗುರುತಿಸಿ ಪಟ್ಟಿಮಾಡಲು ಅವಕಾಶ ಮಾಡಿಕೊಡುವುದು ಇದಕ್ಕೆ ಅಗತ್ಯ ಮಾರ್ಗದರ್ಶನ

ನೀಡುವುದು. ನಂತರ ಪ್ರಸ್ತುತಪಡಿಸಲು ಅವಕಾಶ ನೀಡಿ ಅವುಗಳ ಮೇಲೆ ಗುಂಪು ಚರ್ಚೆಮಾಡಿಸಿ ಇವುಗಳು ಇತಿಹಾಸ ರಚನೆಗೆ ಏನು ಕೊಡುಗೆ ನೀಡಿವೆ ಎಂಬುದನ್ನು ಅರ್ಥೈಸುವುದು. ಈ ಮೋಲಕ ಮಕ್ಕಳು ಇತಿಹಾಸದ ಆಧಾರಗಳನ್ನ ಸಂರಕ್ಷಣೆಯ ಮಹತ್ವನ್ನು ಅರಿಯುವಂತೆ ಮಾಡುವುದು.

3. **ಚಟುವಟಿಕೆ:** ನಮ್ಮ ಸುತ್ತಮುತ್ತಲು ಹಲವಾರು ಸ್ಮಾರಕಗಳು (ಕೋಟೆ/ ಪುರಾತನಕಟ್ಟಡ), ಶಾಸನಗಳು ಹಾಗೂ ಇತರೆ ಅವಶೇಷಗಳನ್ನು ಕಾಣುತ್ತೇವೆ. ಇವುಗಳನ್ನು ನಾವೇಕೆ ರಕ್ಷಿಸಬೇಕು ಯೋಚಿಸಿ ಚರ್ಚಿಸಿ.

ಸ್ಮಾರಕಗಳ ಸಂರಕ್ಷಣೆಗೆ ನಾವೇನು ಮಾಡಬೇಕು ಮತ್ತು ಮಾಡಬಾರದು ಎಂಬುದನ್ನು ಮಕ್ಕಳೇ ಪಟ್ಟಿ ಮಾಡಲು ಅವಕಾಶ ಮಾಡಿಕೊಡುವುದು. ನಂತರ ಎಲ್ಲರೂ ಪ್ರಸ್ತುತಪಡಿಸಲು ಅವಕಾಶ ನೀಡುವುದು. ಸಂರಕ್ಷಣೆಯನ್ನು ಹೇಗೆ ಮಾಡಬಹುದು ಮತ್ತು ಅದರ ಮಹತ್ವ ಏನು ಎಂಬುದನ್ನು ಅರಿಯುವಂತೆ ಮಾಡುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 2 ರ ಚಟುವಟಿಕೆ 1 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

### ಕಲಿಕಾ ಹಾಳೆ 3

1. **ಚಟುವಟಿಕೆ:** ಶತಮಾನವನ್ನು ಅರ್ಥ ಮಾಡಿಕೊಳ್ಳೋಣ

ಈ ಚಟುವಟಿಕೆಯ ಮೂಲಕ ಮಕ್ಕಳಿಗೆ ಪ್ರಶ್ನೆಗಳನ್ನು ಕೇಳುತ್ತಾ ಶತಮಾನದ ಪರಿಕಲ್ಪನೆಯನ್ನ ಅರ್ಥೈಸುವುದು

2. **ಚಟುವಟಿಕೆ:** ಕೆಳಗಿನ ಕೋಷ್ಟಕದಲ್ಲಿ ವರ್ಷಗಳನ್ನು ನೀಡಲಾಗಿದೆ ಇವು ಯಾವ ಶತಮಾನದಲ್ಲಿ ಬರುತ್ತವೆ ಎಂಬುದನ್ನು ಕಂಡು ಹಿಡಿಯೋಣ.

ನೀಡಿರುವ ಕೋಷ್ಠಕವನ್ನು ಮಕ್ಕಳೇ ಭರ್ತಿಮಾಡಲು ಅವಕಾಶ ಮಾಡಿಕೊಡುವುದು.

3. **ಚಟುವಟಿಕೆ:** ಕಾಲಾನುಕ್ರಮದಲ್ಲಿ ಬರೆಯೋಣ.

ಮಾರ್ಗದರ್ಶನದೊಂದಿಗೆ ಮಕ್ಕಳಿಂದಲೇ ಸ್ವತಃ ಮಾಡಿಸಿ ಕಾಲಾನುಕ್ರಮ ಮತ್ತು ಕಾಲರೇಖೆಯ ಅಗತ್ಯತೆಯನ್ನು ಸ್ಪಷ್ಟಪಡಸುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 3 ರ ಚಟುವಟಿಕೆ 3 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

### ಕಲಿಕಾಂಶ 4

### ಮಧ್ಯಕಾಲೀನ ಭಾರತದ ಇತಿಹಾಸದ ಆಧಾರಗಳು

**ಕಲಿಕಾ ಫಲ :** ಮಧ್ಯಕಾಲೀನ ಭಾರತದ ಇತಿಹಾಸ ಪುನರ್‌ರಚಿಸಲು ಸಹಾಯಕವಾಗುವ ಮೂಲ ಆಕರಗಳನ್ನು ಗುರುತಿಸುವರು.

**ಉದ್ದೇಶಗಳು:**

- ಮಧ್ಯಕಾಲೀನ ಭಾರತ ಇತಿಹಾಸದ ಪ್ರಮುಖ ಆಧಾರಗಳನ್ನು ಗುರುತಿಸುವುದು.
- ವಾಸ್ತುಶಿಲ್ಪಗಳ ಆಧಾರಗಳ ಆಧಾರದ ಮೇಲೆ ಇತಿಹಾಸದ ರಚನೆಯ ಕೌಶಲ್ಯವನ್ನು ಬೆಳೆಸುವುದು.
- ಅಂದಿನ ರಾಜಮನೆತನಗಳ ವಾಸ್ತುಶಿಲ್ಪದ ಪ್ರಕಾರಗಳು ವ್ಯತ್ಯಾಸಗಳನ್ನು ಮನದಟ್ಟು ಮಾಡಿಸುವುದು.
- ತನ್ನ ಸ್ಥಳೀಯ ಸ್ಮಾರಕಗಳ ಪ್ರಕಾರಗಳು, ಶೈಲಿಯನ್ನು ಪರಿಚಯ ಮಾಡಿಸಿ ವ್ಯತ್ಯಾಸ ಮತ್ತು ಬದಲಾವಣೆಯನ್ನು ತಿಳಿಸುವುದು.

ಈ ಕಲಿಕಾಂಶದಲ್ಲಿ ಸಾಹಿತ್ಯಾಧಾರಗಳು ಮತ್ತು ಪ್ರಾಕ್ತಾನಾಧಾರಗಳು ಎಲ್ಲವನ್ನೂ ತೆಗೆದುಕೊಳ್ಳದೇ ವಾಸ್ತುಶಿಲ್ಪವನ್ನು ಮಾತ್ರ ಉದಾಹರಣೆಯಾಗಿಟ್ಟುಕೊಂಡು ಇತಿಹಾಸದ ರಚನೆಯನ್ನು ಹೇಗೆ ಮಾಡಬಹುದು ಎಂಬುದನ್ನು ಮಾತ್ರ ಗಮನಿಸಲಾಗಿದೆ. ಇತರೆ ಆಧಾರಗಳನ್ನೂ ಸಹ ಬಳಸಿಕೊಂಡು ಇದೇ ಮಾದರಿಯಲ್ಲಿ ಇತಿಹಾಸವನ್ನೂ ರಚಿಸಬಹುದೆಂಬುದನ್ನು ಸುಗಮಕಾರರು ಮಕ್ಕಳಿಗೆ ಮನದಟ್ಟು ಮಾಡಬೇಕು.

**ಕಲಿಕಾ ಸಾಮಾಗ್ರಿಗಳು:** ಪಠ್ಯಪುಸ್ತಕ, ವಿವಿಧ ರಾಜಮನೆತಗಳ ವಾಸ್ತುಶಿಲ್ಪದ ಚಿತ್ರಗಳು,

**ಪ್ರಕ್ರಿಯೆ:** ಮಧ್ಯಕಾಲೀನ ಭಾರತ ಇತಹಾಸದ ಪ್ರಮುಖ ಆಧಾರಗಳನ್ನು ಪರಿಚಯಿಸುವುದು.ಇತಿಹಾಸದ ಆಧಾರಗಳಲ್ಲಿ ವಾಸುಶಿಲ್ಪ ಪ್ರಾಮುಖ್ಯತೆಯನ್ನು ಸ್ಥಳಿಯ ಸನ್ನಿವೇಶಗಳೊಂದಿಗೆ ಸಂಬಂಧೀಕರಿಸಿ ಅದರ ಮಹತ್ವವನ್ನು ಪರಿಚಯಿಸುತ್ತಾ ಇತಿಹಾಸ ರಚನೆಗೆ ಅವು ಹೇಗೆ ಸಹಾಯ ಮಾಡುತ್ತವೆ ಎಂಬುದನ್ನು ಮನದಟ್ಟು ಮಾಡಿಸುವುದು.ಮಕ್ಕಳ ಗುಂಪುಗಳನ್ನು ರಚಿಸಿ ಒಂದೊಂದು ಗುಂಪಿಗೆ ಒಂದೊಂದು ರಾಜಮನೆತದ ವಾಸ್ತುಶಿಲ್ಪದ ಚಿತ್ರಗಳನ್ನು ಗಮನಿಸಲು ಹೇಳಿ ಅವರ ಆಭಿಪ್ರಾಯವನ್ನು ಕೇಳಿ ಕ್ರೂಢೀಕರಿಸುವುದು.

**ಕಲಿಕಾ ಹಾಳೆ 4**

1. **ಚಟುವಟಿಕೆ:** ಮಕ್ಕಳೆ, ಈ ಕೆಳಗೆ ನಿಮಗೆ ಹಳೇಬೀಡಿನ ಹೊಯ್ಸಳ ದೇವಾಲಯಗಳಲ್ಲಿರುವ ಕೆಲವು ಶಿಲ್ಪಗಳ ಚಿತ್ರಗಳನ್ನು ಕೊಟ್ಟಿದ್ದೇವೆ. ನೀವು ಅದನ್ನು ಗಮನಿಸಿ, ನೀವು ಗಮನಿಸಿದ ಕೆಲವು ಪ್ರಮುಖ ಅಂಶಗಳನ್ನು ಬರೆಯುವಿರಾ?

ಮಕ್ಕಳ ಉತ್ತರಗಳನ್ನು ಕ್ರೂಢೀಕರಿಸಿ ಚಿತ್ರಗಳನ್ನು ತೋರಿಸುತ್ತಾ ಪ್ರತಿಯೊಂದಕ್ಕೂ ಸ್ಪಷ್ಟೀಕರಣ ನೀಡಬೇಕು.

**ಕಲಿಕಾ ಹಾಳೆ 5**

1. **ಚಟುವಟಿಕೆ:** ನಿಮ್ಮ ಪುಸ್ತಕದಲ್ಲಿ ವಾಸ್ತುಶಿಲ್ಪಗಳ ಪ್ರಕಾರವನ್ನು ನೀಡಿದೆ. ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿರಿ.

ಮಕ್ಕಳು ಸಂಗ್ರಹಿಸಿದ ಮಾಹಿತಿಯನ್ನು ಕ್ರೂಢೀಕರಿಸಿ ವ್ಯತ್ಯಾಸಗಳನ್ನು ತಿಳಿಸುವುದು.

2. **ಚಟುವಟಿಕೆ:** ವಿಜಯನಗರ, ಬಹಮನಿ ಮತ್ತು ಆದಿಲ್ ಶಾಹಿ ಮನೆತನಗಳಿಗೆ ಸಂಬಂಧಿಸಿದ ಕೆಲವು ಸ್ಮಾರಕಗಳನ್ನು ಕೊಡಲಾಗಿದೆ. ಈ ಸ್ಮಾರಕಗಳನ್ನು ಗುರುತಿಸಿ. ಅವುಗಳು ಇತಿಹಾಸದ ರಚನೆಗೆ ಹೇಗೆ ಸಹಾಯಕವಾಗುತ್ತವೆ ಎಂಬುದನ್ನು ತರಗತಿಯಲ್ಲಿ ಚರ್ಚೆ ಮಾಡಿ ಎಂಬ ಮಕ್ಕಳಿಗೆ ಸೂಚಿಸಿದೆ.

ಮಕ್ಕಳು ಚಿತ್ರಗಳನ್ನು ಗುರುತಿಸಲು ಪಠ್ಯಪುಸ್ತಕ ಅಥವಾ ಇನ್ನಿತರ ಸಂಪನ್ಮೂಲಗಳ ಶೋಧನೆಗೆ ಅವಕಾಶ ಮಾಡಿಕೊಡುವುದು. ವಾಸ್ತುಶಿಲ್ಪದಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳ ಮಾಹಿತಿ ನೀಡುವುದು. ಮಾಹಿತಿ ಆಧಾರದ ಮೇಲೆ ಇತಿಹಾಸವನ್ನು ಬರೆಯುವ ಕ್ರಮವನ್ನು ತಿಳಿಸುವುದು. ಉದಾಹರಣೆಗೆ ಕಾಲ, ಸ್ಥಳ, ಸನ್ನಿವೇಶ, ರಾಜಮನೆತನ ಇತ್ಯಾದಿ.

3. **ಚಟುವಟಿಕೆ:** ಮಧ್ಯಯುಗದ ರಾಜಮನೆತನಗಳ ಆಳ್ವಿಕೆಯಲ್ಲಿ ಹಿಂದೂ ಶೈಲಿಯನ್ನು ಮುಸಲ್ಮಾನ ರಾಜರು ಮತ್ತು ಇಸ್ಲಾಮಿಕ್ ಶೈಲಿಯನ್ನು ಹಿಂದೂ ರಾಜರುಗಳು ತಮ್ಮ ಕಟ್ಟಡಗಳ ನಿರ್ಮಾಣದಲ್ಲಿ ಮಿಶ್ರಣ ಮಾಡಿ ಬಳಸಿಕೊಂಡಿದ್ದಾರೆ. ಈ ಅಂಶದಿಂದ ನಾವು ಏನನ್ನು ಕಲಿಯಬಹುದು. ಇದಕ್ಕೆ ಸಂಬಂಧಿಸಿದಂತೆ ತರಗತಿಯಲ್ಲಿ ಒಂದು ಚರ್ಚೆಯನ್ನು ಮಾಡಿರಿ.

ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಮಕ್ಕಳೇ ಚರ್ಚೆ ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು. ನಂತರ ತರಗತಿಯಲ್ಲಿ ಪ್ರತಿಗುಂಪಿನ ಅಭಿಪ್ರಾಯವನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕು. ಅಂತಿಮವಾಗಿ ಮಕ್ಕಳ ಚರ್ಚೆಯನ್ನೂ ಕ್ರೂಢೀಕರಸಿ ಧಾರ್ಮಿಕ ಸಾಮರಸ್ಯವನ್ನು ಈ ಶೈಲಿಗಳು ಸೂಚಿಸುವುದನ್ನು ಹಾಗೂ ಅದನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಮನದಟ್ಟು ಮಾಡಬೇಕು

4. **ಚಟುವಟಿಕೆ:** ನಿಮ್ಮ ಊರು ಅಥವಾ ಸುತ್ತಮತ್ತಲಿನ ಪ್ರದೇಶದಲ್ಲಿರುವ ಯಾವುದಾದರೊಂದು ಸ್ಮಾರಕದ ಚಿತ್ರವನ್ನು ಸಂಗ್ರಹಿಸಿ, ಅಂಟಿಸಿ ಹಾಗೂ ಮತ್ತು ಅದಕ್ಕೆ ಸಂಬಂಧಿಸಿದಂತೆ ವಾಸ್ತುಶಿಲ್ಪ, ಕಾಲ, ಯಾರು ನಿರ್ಮಿಸಿದರು? ಇನ್ನಿತ್ಯಾದಿ ಅಂಶಗಳ ಕುರಿತು ಬರೆಯಿರಿ

ಇಲ್ಲಿ ಮಕ್ಕಳಿಗೆ ಸಂಶೋಧನಾತ್ಮಕ ಮನೋಭಾವವನ್ನು ಬೆಳಸೆಸುವ ಸಲುವಾಗಿ ಮಕ್ಕಳೇ ಸ್ಮಾರಕಗಳ ಚಿತ್ರಗಳನ್ನು, ಅದರ ಮಾಹಿತಿಗಳನ್ನು ಸಂಗ್ರಹಿಸಲು ಪ್ರೇರೇಪಿಸಬೇಕು. ಒಂದು ವೇಳೆ ಶಾಲೆಯಿರುವ ಪ್ರದೇಶದಲ್ಲೇ ಯಾವುದಾದರೂ ಸ್ಮಾರಕಗಳಿದ್ದರೆ ಮಕ್ಕಳನ್ನು ಅಲ್ಲಿಗೇ ಕರೆದುಕೊಂಡು ಹೋಗಿ ನೈಜ ಚಿತ್ರಣದ ಜೊತೆಗೆ ಮಾಹಿತಿಯನ್ನೊದಗಿಸಲು ಸುಗಮಕಾರರು ಸಹಾಯ ಮಾಡಬೇಕು.

ಒಟ್ಟಿನಲ್ಲಿ, ಮಕ್ಕಳು ಇತಿಹಾಸಕ್ಕೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಧಾರಗಳನ್ನು ನೋಡಿದರೆ ಸ್ವತಃ ಮಕ್ಕಳೇ ಅದರ ಇತಿಹಾಸವನ್ನು ಹೇಳುವ ಮತ್ತು ಬರೆಯುವ ಕೌಶಲವನ್ನು ವೃದ್ದಿಸಿಕೊಳ್ಳಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 2 ರ, ಚಟುವಟಿಕೆ 1 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಕಲಿಕಾಂಶ 4**

**ಮಧ್ಯಕಾಲೀನ ಭಾರತದ ಕಾಲಗಣನೆ**

**ಕಲಿಕಾ ಫಲ:** ಉತ್ತರ ಮತ್ತು ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ಕಾಲಗಣನೆಯನ್ನು ಅರ್ಥೈಸಿಕೊಳ್ಳುವರು .

**ಉದ್ದೇಶಗಳು:**

- ಮಧ್ಯಕಾಲೀನ ಭಾರತ ಇತಿಹಾಸದ ಘಟನೆಗಳ ಆಧಾರದ ಮೇಲೆ ಕ್ರಮಾನುಗತವಾಗಿ ಗುರುತಿಸುವ ಕೌಶಲ್ಯವನ್ನು ವೃದ್ಧಿಸುವುದು.

- ಸಮಕಾಲೀನ ರಾಜಮನೆತನಗಳು ಮತ್ತು ಅವುಗಳ ಕಾಲಘಟ್ಟಗಳನ್ನು ತಿಳಿಯುವುದು.

**ಪ್ರಕ್ರಿಯೆ:** ಮಕ್ಕಳ ಕುಟುಂಬದ ಕಾಲರೇಖೆಯನ್ನು ತಯಾರಿಸಲು ಪ್ರೇರೇಪಿಸಿ ಅದರ ಮೂಲಕ ಇತಿಹಾಸದಲ್ಲಿ ಕಾಲರೇಖೆಯ ಮಹತ್ವವನ್ನು ಮನದಟ್ಟು ಮಾಡಿಸಬೇಕು.ಮಧ್ಯಕಾಲೀನ ಭಾರತದ ಇತಿಹಾಸವನ್ನು ಪರಿಚಯಿಸಿ ಮಕ್ಕಳಿಂದಲೇ ಕಾಲರೇಖೆಯನ್ನು ತಯಾರಿಸುವುದು.ಕಾಲ ರೇಖೆಯ ಆಧಾರದ ಮೇಲೆ ಪ್ರತಿಯೊಂದು ಕಾಲಘಟ್ಟ ಅಥವಾ ಘಟನೆಗಳ ಕುರಿತು ಮಾಹಿತಿಯೊಂದಿಗೆ ಮಕ್ಕಳ ಜೊತೆ ಚರ್ಚೆ ಮಾಡುವುದು.

### ಕಲಿಕಾ ಹಾಳೆ 6

1. **ಚಟುವಟಿಕೆ:** ನಿಮ್ಮ ಕುಟುಂಬದಲ್ಲಿ ನಡೆದ ಪ್ರಮುಖ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯುತ್ತೀರಾ? ನಾನು ನಿಮಗೆ ಸಹಾಯ ಮಾಡ್ತೀನಿ. ನೋಡೋಣ ಬರೆಯಿರಿ. (ಉದಾಹರಣೆಗೆ ನಿಮ್ಮ ಕಟುಂಬದ ಸದಸ್ಯರ ಜನನ, ಮನೆಯಲ್ಲಿ ನಡೆದಿರುವ ಸಮಾರಂಭಗಳು ಇತ್ಯಾದಿ)

ಕಾಲಾನುಕ್ರಮದ ಅಗತ್ಯತೆಯನ್ನು ಮನದಟ್ಟು ಮಾಡಿಸಬೇಕು.

**ಸೂಚನೆ:** ಮಧ್ಯಕಾಲೀನಯುಗದಕಾಲಾನುಕ್ರಮ ಪಟ್ಟಿಯಲ್ಲಿ ನೀಡಿರುವ ವರ್ಷಗಳು ಘಟನೆಗಳನ್ನು ಕಾಲಾನುಕ್ರಮದಲ್ಲಿ ತಿಳಿದುಕೊಳ್ಳಲು ಮಾತ್ರ ಬಳಸಲಾಗಿದೆ. ಹಾಗಾಗಿ ಇದರಲ್ಲಿ ಬರುವ ವರ್ಷಗಳನ್ನು ಮೌಲ್ಯಮಾಪನ ಅಥವಾ ಇತರ ನೆನಪಿಟ್ಟುಕೊಂಡು ಉತ್ತರಿಸುವಂತಹ ಚಟುವಟಿಕೆಗಳಿಗೆ ಬಳಸುವ ಅಗತ್ಯವಿಲ್ಲ.

### ಕಲಿಕಾ ಹಾಳೆ 7

1. **ಚಟುವಟಿಕೆ:** ಕೆಳಗಿನ ಘಟನೆಗಳನ್ನು ಕೊಟ್ಟಿರುವ ಖಾಲಿ ಜಾಗದಲ್ಲಿ ಕಾಲಾನುಕ್ರಮದಲ್ಲಿ ಜೋಡಿಸಿ ಬರೆಯಿರಿ

ಕಾಲಾನುಕ್ರಮವನ್ನಿಟ್ಟುಕೊಂಡು ಮಕ್ಕಳೊಂದಿಗೆ ಏಕೆ ಮತ್ತು ಹೇಗೆ ಎಂಬ ಪ್ರಶ್ನೆಗಳನ್ನಿಟ್ಟುಕೊಂಡು ಚರ್ಚಿಸಿ.

2. **ಚಟುವಟಿಕೆ:** ಕಾಲಗಣನೆಯ ಪಟ್ಟಿಯ ಮೇಲೆ ಕೊಟ್ಟಿರುವ ಘಟನೆಗಳನ್ನು ಸೂಕ್ತವಾದ ಸ್ಥಳದಲ್ಲಿ ಗುರುತಿಸಿ.

ಕಾಲಾನುಕ್ರಮ ರೇಖೆಯಲ್ಲಿ ಕಾಲವನ್ನು ಗುರುತಿಸಲು ಮಾರ್ಗದರ್ಶನ ನೀಡಬೇಕು ಮತ್ತು ಇದೇ ಮಾದರಿಯ ಬೇರೆ ಬೇರೆ ಕಾಲರೇಖೆಗಳನ್ನು ಬೇರೆ ಬೇರೆ ಸನ್ನಿವೇಶಗಳಲ್ಲಿ ಬಳಕೆ ಮಾಡಿಕೊಳ್ಳಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 7 ರ ಚಟುವಟಿಕೆ 1 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು

## ಕಲಿಕಾಂಶ 5

## ಉತ್ತರ ಮತ್ತು ದಕ್ಷಿಣ ಭಾರತದ ಐತಿಹಾಸಿಕ ಘಟನೆಗಳ ನಡುವಿನ ಅಂತರ್– ಸಂಬಂಧ

**ಕಲಿಕಾ ಫಲ :** ಉತ್ತರ ಮತ್ತು ದಕ್ಷಿಣ ಭಾರತಕ್ಕೆ ಸಂಬಂಧಿಸಿದ ಐತಿಹಾಸಿಕ ಘಟನೆಗಳ ನಡುವಿನ ಅಂತರ್–ಸಂಬಂಧವನ್ನು ವಿವರಿಸುವರು

**ಉದ್ದೇಶಗಳು:**

- ಮಧ್ಯಕಾಲೀನ ಭಾರತದಲ್ಲಿ ಉತ್ತರ ಮತ್ತು ದಕ್ಷಿಣ ಭಾರತದ ರಾಜಮನೆತನಗಳ ನಡುವಿನ ಸಂಬಂಧವನ್ನು ಅರ್ಥ ಮಾಡಿಕೊಂಡು ವಿಶ್ಲೇಷಿಸುವರು.
- ಪ್ರಸ್ತುತ ಸನ್ನಿವೇಶದಲ್ಲಿ ಪರಸ್ಪರ ಸಬಂಧಗಳು ಎಷ್ಟು ಮುಖ್ಯ ಎಂಬುದನ್ನು ಮನದಟ್ಟು ಮಾಡಿಸುವುದು.

**ಪ್ರಕ್ರಿಯೆ:** ಮಕ್ಕಳನ್ನು ವಿವಿಧ ಗುಂಪುಗಳನ್ನಾಗಿ ಮಾಡಿ ಪ್ರತಿಯೊಂದು ಗುಂಪಿಗೂ ಒಂದೊಂದು ವಿಷಯವನ್ನು ನೀಡಿ ಪಠ್ಯಪುಸ್ತಕದ ಸಹಾಯದಿಂದ ಚರ್ಚೆ ಮಾಡಿ ಮಂಡಿಸಲು ಅವಕಾಶ ನೀಡುವುದು. ಉಧಾಹರಣೆಗೆ: ವೈವಾಹಿಕ ಸಂಬಂಧ, ರಾಜಕೀಯ ಸಂಬಂಧ, ಯುದ್ಧ ಸಂಬಂಧ, ವ್ಯಾಪಾರ ಮತ್ತು ವಾಣಿಜ್ಯ ಸಂಬಂಧ ಇತ್ಯಾದಿ.

### ಕಲಿಕಾ ಹಾಳೆ 8

1. **ಚಟುವಟಿಕೆ:** ನಿಮ್ಮ ಪಠ್ಯಪುಸ್ತಕದ ಸಹಾಯವನ್ನು ಪಡೆದುಕೊಂಡು ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಯಾವಯಾವರಾಜರು, ದಕ್ಷಿಣ ಭಾರತದ ಯಾವಯಾವ ರಾಜರ ಜೊತೆ, ಯಾವ ರೀತಿಯ ಸಂಬಂಧವನ್ನು ಹೊಂದಿದ್ದರು ಎಂದು ತಿಳಿಸುವಿರಾ?

ಪಠ್ಯಪುಸ್ತಕದ ಸಹಾಯದಿಂದ ಮಕ್ಕಳೆ ಉತ್ತರಗಳನ್ನು ಬರೆಯಲು ಪ್ರೇರೇಪಿಸುವುದು ನಂತರ ಪ್ರಕ್ರಿಯೆಯಲ್ಲಿ ಹೇಳಿದ ರೀತಿಯಲ್ಲಿ ವಿವಿಧ ರೀತಿಯ ಸಂಬಂಧಗಳನ್ನು ತಿಳಿಸಿ ಮಕ್ಕಳಲ್ಲಿನ ಗೊಂದಲಗಳನ್ನು ಪರಿಹರಿಸುವುದು.

**2. ಚಟುವಟಿಕೆ:** ನಿಮ್ಮ ಊರು ಮತ್ತು ಅಕ್ಕಪಕ್ಕದ ಊರುಗಳು ಯಾವ ರೀತಿಯ ಸಂಬಂಧವನ್ನು ಹೊಂದಿವೆ ಅನ್ನೋದನ್ನ ಕೇಳಿ ತಿಳಿದುಕೊಂಡು ಬನ್ನಿ, ನಂತರ ತರಗತಿಯಲ್ಲಿ ಎಲ್ಲರೊಂದಿಗೆ ಚರ್ಚೆ ಮಾಡಿ.

ತರಗತಿಯಲ್ಲಿ ಮಕ್ಕಳಿಗೆ ಸಂಬಂಧಗಳ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಮುಕ್ತ ಅವಕಾಶವನ್ನು ನೀಡಿ ಪರಸ್ಪರ ಸಹಕಾರ ಮತ್ತು ಹೊಂದಾಣಿಕೆಯ ಜೀವನ ಸಮಾಜದ ಸ್ವಾಸ್ಥ್ಯ ಕಾಪಾಡಲು ಹೇಗೆ ಸಹಾಯ ಮಾಡುತ್ತದೆ ಎಂಬುದರ ಅರಿವನ್ನು ಮೂಡಿಸಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 8 ರ, ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 6

## ಮಧ್ಯಕಾಲೀನ ಆಡಳಿತ ಪದ್ದತಿಗಳು

**ಕಲಿಕಾ ಫಲ :** ಅಂದಿನ ಕಾಲದ ಆಡಳಿತ ಪದ್ದತಿಗಳನ್ನು ಪಟ್ಟಿ ಮಾಡಿ ವ್ಯಾಖ್ಯಾನಿಸುವುದು.

**ಉದ್ದೇಶಗಳು:**

- ಮಧ್ಯಕಾಲೀನ ಭಾರತದ ವಿವಿಧ ಆಡಳಿತ ಪದ್ದತಿಗಳನ್ನು ಹೋಲಿಕಾತ್ಮಕವಾಗಿ ಅಧ್ಯಯನ ಮಾಡುವುದು
- ಆಡಳಿತ ಪದ್ದತಿಯಲ್ಲಿನ ಅನುಕೂಲ ಮತ್ತು ಅನಾನುಕೂಲಗಳನ್ನು ಅರ್ಥಮಾಡಿಕೊಂಡು ಪ್ರಸ್ತುತ ಸನ್ನಿವೇಶಕ್ಕೆ ಅಗತ್ಯವಿರುವ ಅಂಶಗಳನ್ನು ಗುರುತಿಸುವುದು.

**ಕಲಿಕಾ ಸಾಮಗ್ರಿಗಳು:** ಪಠ್ಯ ಪುಸ್ತಕ, ನಕಾಶೆಗಳು, ನಕಲು ಭೂದಾಖಲೆ

### ಕಲಿಕಾ ಹಾಳೆ–9

1. **ಚಟುವಟಿಕೆ:** ನಿಮ್ಮ ಊರಿನ ಅಥವಾ ನಗರದಲ್ಲಿರುವ ಗ್ರಾಮಲೆಕ್ಕಾಧಿಕಾರಿ, ಮುಖ್ಯಾಧಿಕಾರಿ, ಬಿಲ್ ಕಲೆಕ್ಟರ್, ಪಿ. ಡಿ. ಓ ಇವರಲ್ಲಿ ಯಾರನ್ನಾದರೂ ಒಬ್ಬರನ್ನು ಸಂಪರ್ಕಿಸಿ ಅವರು ಏನು ಕೆಲಸ ಮಾಡುತ್ತಾರೆ, ಆಡಳಿತ ಹೇಗೆ ನಡೆಸುತ್ತಾರೆ ಎಂಬುದರ ಬಗ್ಗೆ ಸಂದರ್ಶನ ಮಾಡಿಕೊಂಡು ಬಂದು ತರಗತಿಯಲ್ಲಿ ಹೇಳೋಣವಾ?

ಚರ್ಚೆಗೆ ಅವಕಾಶ ಮಾಡಿಕೊಟ್ಟು ಆಡಳಿತದಲ್ಲಿ ಶ್ರೇಣಿ ಪದ್ದತಿಯನ್ನು ಹಾಗೂ ಪ್ರತಿಯೊಬ್ಬರ ಜವಬ್ದಾರಿಗಳನ್ನು ತಿಳಿಸುವುದು.

### ಕಲಿಕಾ ಹಾಳೆ 10

1. **ಚಟುವಟಿಕೆ:** ಮೇಲೆ ಓದಿ ತಿಳಿದುಕೊಂಡ ಆಡಳಿತ ಪದ್ದತಿಗಳು ಜಾರಿಯಲ್ಲಿದ್ದ ಪ್ರದೇಶಗಳ ನಕ್ಷೆಯನ್ನು ಈ ಕೆಳಗೆ ನೀಡಲಾಗಿದೆ ಅವುಗಳನ್ನು ನಾವು ಗಮನಿಸೋಣ. ಚೆನ್ನಾಗಿ ಗಮನಿಸಿ ಅರ್ಥೈಸಿಕೊಳ್ಳೋಣ.

2. **ಚಟುವಟಿಕೆ:** ಮೇಲಿನ ನಕ್ಷೆಗಳಲ್ಲಿ ಗಮನಿಸಿದಿರಾ. ಈಗ ಭಾರತದ ನಕಾಶೆಯ ಮೇಲೆ ಇಕ್ತಾ, ಮನ್‌ಸಬ್ದಾರಿ ಮತ್ತು ನಾಯಂಕಾರ ಪದ್ದತಿಗಳು ಚಾಲ್ತಿಯಲ್ಲಿದ್ದ ಪ್ರದೇಶಗಳನ್ನು ಗುರುತಿಸಿ.

1 ಮತ್ತು 2 ನೇ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಪಠ್ಯಪುಸ್ತಕ/ಚಟುವಟಿಕೆ ಪುಸ್ತಕದಲ್ಲಿರುವ ನಕ್ಷೆಯ ಜೊತೆಗೆ ಶಾಲೆಯಲ್ಲಿರುವ ಭಾರತದ ನಕಾಶೆಯನ್ನು ನೀಡಿ ಗಮನಿಸಲು ಸೂಚಿಸುವುದು ನಂತರ 2 ನೇ ಚಟುವಟಿಕೆಯನ್ನು ಮಾಡಿಸುವುದು. ಸಾಧ್ಯವಾದಷ್ಟು ಮಕ್ಕಳಿಂದಲೇ ಸ್ಥಳಗಳನ್ನು ಗುರುತಿಸಲು ಪ್ರೋತ್ಸಾಹಿಸಬೇಕು ಸುಗಮಕಾರರು ಮಾರ್ಗದರ್ಶನ ಮಾಡುತ್ತಾ ಮಕ್ಕಳಿಗೆ ಸೂಚನೆಗಳನ್ನು ಒದಗಿಸಬಹುದು **ಉದಾ:** ಮಕ್ಕಳಿಗೆ ಸ್ಥಳ ಗುರುತಿಸುವಿಕೆ ಕಷವಾಗುತಿದ್ದರೆ ಅದು ಯಾವ ರಾಜ್ಯ/ಜಿಲ್ಲೆಯಲ್ಲಿ ಬರುತ್ತದೆ ಇತ್ಯಾದಿ.

3. **ಚಟುವಟಿಕೆ:** ಇಕ್ತಾ, ಮನ್‌ಸಬ್ದಾರಿ ಹಾಗೂ ನಾಯಂಕಾರ ಪದ್ದತಿಗಳಲ್ಲಿ ಕಂಡುಬರುವ ಸಾಮ್ಯತೆಗಳನ್ನು ಪಟ್ಟಿಮಾಡೋಣ.

ಮಕ್ಕಳ ಉತ್ತರಗಳನ್ನು ಕ್ರೋಢೀಕರಿಸಿ ಇಂದಿನ ಆಡಳಿತ ಪದ್ದತಿಯಲ್ಲಿ ಕಂಡುಬರುವ ಅಂಶಗಳನ್ನು ಹೋಲಿಕೆ ಮಾಡುತ್ತಾ ಯಾವುದು ಸೂಕ್ತ ಎಂಬುದನ್ನು ಮಕ್ಕಳ ನಿರ್ಧಾರಕ್ಕೆ ಬಿಡಬೇಕು.

### ಕಲಿಕಾ ಹಾಳೆ 11

1. **ಚಟುವಟಿಕೆ:** ನಾವು ಅಲ್ಲಾವುದ್ದೀನ್ ಖಿಲ್ಜಿಯ ಮಾರುಕಟ್ಟೆಯ ವ್ಯವಸ್ಥೆ ಬಗ್ಗೆ ತಿಳಿದುಕೊಂಡಿದೀವಿ ಅಲ್ವಾ, ಈಗ ನಾವು ಅವನ ಮಾರುಕಟ್ಟೆ ವ್ಯವಸ್ಥೆ ಹಾಗೂ ಇಂದಿನ ಮಾರುಕಟ್ಟೆ ವ್ಯವಸ್ಥೆಯಕುರಿತು ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಬರೆಯೋಣ.

ಎರಡರ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಕ್ರೋಢೀಕರಿಸಿ ಈ ಎರಡರಲ್ಲಿ ಯಾವೆಲ್ಲಾ ಉತ್ತಮ ಅಂಶಗಳನ್ನು ಇಂದಿನ ಮಾರುಕಟ್ಟೆ ವ್ಯವಸ್ಥೆಯಲ್ಲಿ ನಾವು ಅಳವಡಿಸಿಕೊಂಡಿದ್ದೇವೆ/ಅಳವಡಿಸಿಕೊಳ್ಳಬಹುದು ಎಂಬ ಪ್ರಮುಖಾಂಶಗಳನ್ನು ಪಟ್ಟಿ ಮಾಡುತ್ತಾ ಮಾರುಕಟ್ಟೆಯಲ್ಲಾಗಬೇಕಾದ ಸುಧಾರಣೆಗಳ ಬಗ್ಗೆ ಚರ್ಚೆ ಮಾಡುವುದು.

2. **ಚಟುವಟಿಕೆ:** ಮಾರುಕಟ್ಟೆ ವ್ಯವಸ್ಥೆಯಲ್ಲಿ ಕನಿಷ್ಠ ಬೆಂಬಲ ಬೆಲೆ ನಿಗದಿ ಕುರಿತು ಶಿಕ್ಷಕರ ಸಹಾಯದೊಂದಿಗೆ ತರಗತಿಯಲ್ಲಿ ಚರ್ಚೆ ಮಾಡಿ.

ಚಟುವಟಿಕೆಗೂ ಮುನ್ನ ಬೆಂಬಲ ಬೆಲೆ ಎಂದರೇನು ಎಂಬುದನ್ನು ತಿಳಿಸಬೇಕು ಇದರ ಆಧಾರದ ಮೇಲೆ ಅದರ ಸಾಧಕ–ಭಾಧಕಗಳನ್ನು ಕುರಿತು ಗುಂಪು ಚರ್ಚೆ ಏರ್ಪಡಿಸಿ. ನಂತರ ಮಕ್ಕಳ ಚರ್ಚೆಯ ಅಂಶಗಳನ್ನು ಪರಿಗಣಿಸುತ್ತಾ ಬೆಂಬಲ ಬೆಲೆಯ ಅಗತ್ಯತೆಯ ಬಗ್ಗೆ ಮಕ್ಕಳಿಗೆ ಮನವರಿಕೆ ಮಾಡಿಕೊಡಬೇಕು.

3. **ಚಟುವಟಿಕೆ:** ಯೋಚಿಸಿ ಉತ್ತರಿಸೋಣ?

ವ್ಯಾಪಾರ ಮಾಡಲು ತೂಕ ಮತ್ತು ಅಳತೆ ಅವಶ್ಯಕವೇ? ಏಕೆ? ಯೋಚಿಸಿ ಉತ್ತರಿಸೋಣ

ವಿವಿಧ ಮಾದರಿಯ ತೂಕ ಯಂತ್ರಗಳನ್ನು ಪರಿಚಯಿಸಿ. ಹಿಂದಿನ ತೂಕ ಪದ್ಧತಿಗೂ ಇಂದಿನ ತೂಕ ಪದ್ಧತಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಬೇಕು ಮತ್ತು ಅದರಿಂದಾಗುವ ಪ್ರಯೋಜನಗಳನ್ನು ಮಕ್ಕಳಿಗೆ ಸ್ಪಷ್ಟಪಡಿಬೇಕು.

4. **ಚಟುವಟಿಕೆ:** ನಿಮ್ಮ ಊರಿನ ನ್ಯಾಯ ಬೆಲೆ ಅಂಗಡಿಯಲ್ಲಿ ಜೀವನಾವಶ್ಯಕ ವಸ್ತುಗಳನ್ನು ಕನಿಷ್ಠ ಬೆಲೆಗೆ ಸಿಗುವಂತೆ ಮಾರಾಟ ಮಾಡುತ್ತಾರೆ? ಏಕೆ? ತರಗತಿಯಲ್ಲಿ ನಿಮ್ಮ ಸ್ನೇಹಿತರೊಂದಿಗೆ ಚರ್ಚೆ ಮಾಡಿ.

ಮಾರ್ಗದರ್ಶನದೊಂದಿಗೆ ಗುಂಪು ಚರ್ಚೆ ಮಾಡಿಸಿ

5. **ಚಟುವಟಿಕೆ:** ಈ ಕೆಳಗೆ ಕೊಟ್ಟಿರುವ ಕೆಲವು ವಸ್ತುಗಳಿಗೆ ಸಾಮಾನ್ಯ ಮಾರುಕಟ್ಟೆ ಮತ್ತು ನ್ಯಾಯಬೆಲೆ ಅಂಗಡಿಯಲ್ಲಿನ ಬೆಲೆಯನ್ನು ತಿಳಿದು ಬೆಲೆಯನ್ನು ಬರೆಯಿರಿ.

ಒಂದೇ ರೀತಿಯ ವಸ್ತುಗಳಿಗೆ ಬೇರೆ ಬೇರೆ ರೀತಿಯ ಬೆಲೆ ನಿಗದಿ ಮಾಡಲು ಕಾರಣವೇನು ಎಂಬ ಅಂಶವನ್ನು ಮಕ್ಕಳಿಂದ ಮೌಖಿಕವಾಗಿ ಕೇಳಿ ಕ್ರೂಢೀಕರಿಸಿ ಕಾರಣಗಳನ್ನು ಮನದಟ್ಟು ಮಾಡಿಸಿ.

6. **ಚಟುವಟಿಕೆ:** ನಿನ್ನ ಊರಿನ  ಹಿರಿಯರನ್ನು, ವ್ಯಾಪಾರಿಗಳನ್ನು ಅಥವಾ ಅಕ್ಕಪಕ್ಕದ ಸಂತೆ ಅಥವಾ ಮಾರುಕಟ್ಟೆಗೆ ಭೇಟಿ ನೀಡಿ ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳ ಜೊತೆ ಮಾತುಕತೆ ನಡೆಸಿ, ತಿಳಿದುಕೊಂಡು ಅದರ ಬಗ್ಗೆ ನಿನ್ನ ಅಭಿಪ್ರಾಯಗಳನ್ನು ತಿಳಿಸು.

ಯಾರಾದರೂ ವ್ಯಾಪಾರಕ್ಕೆ ಸಂಬಂದಿಸಿದವರನ್ನು ದಲ್ಲಾಳಿಗಳನ್ನು ಶಾಲೆಗೆ ಕರದು ಮಕ್ಕಳೊಂದಿಗೆ ಚರ್ಚಿಸಲು ಅವಕಾಶ ಕಲ್ಪಿಸಿ. ವ್ಯಾಪಕ ದಲ್ಲಾಳಿಗಳ ಸಾಧಕ ಭಾದಕಗಳನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಡಿ.

## ಕಲಿಕಾ ಹಾಳೆ 12

1. **ಚಟುವಟಿಕೆ:** ಫಿರೋಜ್ ಷಾ ತುಘಲಕ್ ಹಾಗೂ ಇಂದಿನ ರೈತ ಯೋಜನೆಗಳ ನಡುವಿನ ಸಾಮ್ಯತೆಗಳನ್ನು ಪಟ್ಟಿ ಮಾಡುವಿರಾ.

2. **ಚಟುವಟಿಕೆ:** ರೈತ ಸಾಲ ಮನ್ನಾ ಮಾಡುವುದರ ಉದ್ದೇಶ ಮತ್ತು ಅದರ ಪರಿಣಾಮಗಳನ್ನುತರಗತಿಯಲ್ಲಿ ಶಿಕ್ಷಕರ ಸಹಾಯದೊಂದಿಗೆ ನಿಮ್ಮ ಸ್ನೇಹಿತರೊಂದಿಗೆ ಚರ್ಚೆ ಮಾಡಿ

ಮಕ್ಕಳಿಗೆ ತಮ್ಮ ಪೋಷಕರು ಅಥವಾ ಹಿರಿಯರೊಂದಿಗೆ ಮಾಹಿತಿಯನ್ನು ತಿಳಿದು ತರಗತಿಯಲ್ಲಿ ಚರ್ಚೆ ಮಾಡಲು ಮುಕ್ತ ಅವಕಾಶ ನೀಡುವುದು. ಸುಗಮಕಾರರು ರೈತರ ಸಾಲಮನ್ನಾ ಯೋಜನೆಯ ಸಾಧಕ ಭಾದಕಗಳ ಬಗ್ಗೆ ಮಾಹಿತಿ ಒದಗಿಸಿ ಅಂತಿಮ ನಿರ್ಧಾರವನ್ನು ಮಕ್ಕಳ ವಿವೇಚನೆಗೆ ಬಿಡುವುದು.

3. **ಚಟುವಟಿಕೆ:** ಭೂಮಿಯ ಅಳತೆಯನ್ನು ಏಕೆ ಮಾಡುತ್ತಾರೆ? ನಿಮ್ಮ ಮನೆ, ಹೊಲ, ಗದ್ದೆಗಳನ್ನು ಹೇಗೆ ಅಳತೆ ಮಾಡುತ್ತಾರೆ ಎಂಬುದನ್ನು ಹಿರಿಯರೊಂದಿಗೆ ಚರ್ಚಿಸಿ ತಿಳಿದುಕೊಳ್ಳಿ ಮತ್ತು ಅದನ್ನು ತರಗತಿಯಲ್ಲಿ ಹಂಚಿಕೊಳ್ಳಿ.

1,2, ಮತ್ತು 3 ನೇ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಗತಕಾಲದಲ್ಲಿನ ರೈತ ಕಲ್ಯಾಣ ಯೋಜನೆಗಳು ಇಂದಿಗೂ ಸಣ್ಣ ಪುಟ್ಟ ಬದಲಾವಣೆಗಳೊಂದಿಗೆ ಅಸ್ತಿತ್ವದಲ್ಲಿದೆ ಎಂಬುದು ಮನವರಿಕೆಯಾಗಬೇಕು. ಯಾವುದೇ ಯೋಜನೆಗಳು ಜನಪರವಾಗಿದ್ದರೆ ಅದು ಧೀರ್ಘಕಾಲದ ಅನುಕೂಲವನ್ನು ಹೊಂದಿರುತ್ತದೆ ಎಂಬುದನ್ನು ತಿಳಿಸಬೇಕು.

4. **ಚಟುವಟಿಕೆ:** ನಿಮ್ಮ ಊರಿನ ಕಂದಾಯ ಅಧಿಕಾರಿಯವರನ್ನು ಭೇಟಿ ಮಾಡಿ ಭೇಟಿ, ಕಂದಾಯ ವಸೂಲಾತಿಯ ಬಗ್ಗೆ ತಿಳಿದುಕೊಂಡು ಬರೆಯಿರಿ.

ಸುಗಮಕಾರರು ಕಂದಾಯವನ್ನು ಏಕೆ ವಿಧಿಸುತ್ತಾರೆ, ಅದು ಹೇಗೆ ವಿನಿಯೋಗವಾಗುತ್ತದೆ ಎಂಬುದನ್ನು ತಿಳಿಸಬೇಕು.

**ಆಲೋಚಿಸಿ:** ಒಂದು ವೇಳೆ ನೀರಾವರಿ ಯೋಜನೆಗಳು ಇಲ್ಲವಾಗಿದ್ದರೆ ಏನಾಗುತಿತ್ತು? ತರಗತಿಯಲ್ಲಿ ಚರ್ಚಿಸಿ.

ಗುಂಪು ಚರ್ಚೆಗೆ ಅವಕಾಶ ನೀಡಿ ಅದನ್ನು ತಮ್ಮ ಸ್ಥಳೀಯ ಸನ್ನಿವೇಶಗಳೊಂದಿಗೆ ಹೊಂದಿಸಿ ಪರಿಣಾಮಗಳನ್ನು ಪಟ್ಟಿ ಮಾಡುವುದು.ನೀರಾವರಿ ಯೋಜನೆಗೆ ಸಲಹೆಗಳನ್ನು ನೀಡಲು ಅವಕಾಶ ನೀಡುವುದು. ಅಂತರ್ ನದಿ ಜೋಡಣೆ ಬಗ್ಗೆ ತಿಳಿಸಿ ಅದರ ಸಾಧಕ ಭಾದಕಗಳ ಬಗ್ಗೆ ತಿಳಿಸುವುದು.

**ಕಲಿಕಾ ಹಾಳೆ 13**

1. **ಚಟುವಟಿಕೆ :** ಇಂದು ಭೂದಾಖಲೆಗಳನ್ನು ಯಾರು ಸಂಗ್ರಹಿಸುತ್ತಾರೆ? ಅದರಿಂದ ಏನು ಪ್ರಯೋಜನ? ಇದರ ಕುರಿತು ಚರ್ಚೆ ಮಾಡಿ.

ಸ್ಥಳಿಯ ಪಿ.ಡಿ.ಓ ಅಥವಾ ಕಾರ್ಯದರ್ಶಿಗಳನ್ನು ಶಾಲೆಗೆ ಕರೆದು ಅವರೊಂದಿಗೆ ಚರ್ಚೆ ಏರ್ಪಡಿಸಿ ಭೂದಾಖಲೆಗಳ ಮಹತ್ವವನ್ನು ಅರ್ಥ ಮಾಡಿಸಬೇಕು.

2. **ಚಟುವಟಿಕೆ :** ನಿಮ್ಮ ಪೋಷಕರೊಂದಿಗೆ ಅವರ ಆಸ್ತಿಯ ಯಾವುದಾದರೂ ದಾಖಲೆ ಹೇಗೆ ಮಾಡಿಸುತ್ತಾರೆ ಎಂದು ಚರ್ಚಿಸಿ.

ಪೋಷಕರೊಂದಿಗಿನ ಚರ್ಚೆಯನ್ನು ತರಗತಿಯಲಿ ಹಂಚಿಕೊಳ್ಳಲು ಅವಕಾಶ ಮಾಡಿಕೊಡಬೇಕು.

3. **ಚಟುವಟಿಕೆ :** ಶಿಕ್ಷಕರು ನಿಮಗೆ ಒಂದು ಭೂದಾಖಲೆಯನ್ನು ಒದಗಿಸುತ್ತಾರೆ. ಅದನ್ನು ಗಮನಿಸಿ ಅದರಲ್ಲಿರುವ ಪ್ರಮುಖ ಅಂಶಗಳನ್ನು ಪಟ್ಟಿ ಮಾಡಿ.

ಯಾವುದಾದರೊಂದು ಭೂದಾಖಲೆಯ ನಕಲು ಪ್ರತಿಯನ್ನು ಮಕ್ಕಳಿಗೆ ಒದಗಿಸಿಕೊಡುವುದು. ದಾಖಲೆಯಲ್ಲಿ ಗಮನಿಸಬೇಕಾದ ಅಂಶಗಳ ಬಗ್ಗೆ ಮಾಹಿತಿ ಒದಗಿಸುವುದು. **ಉದಾ:** ಸ್ಥಳ, ಮಾಲೀಕರ ಹೆಸರು, ಒಟ್ಟು ಎಷ್ಟಿದೆ ಇತ್ಯಾದಿ.

**ಮೌಲ್ಯಮಾಪನ:** ಕಲಿಕಾ ಹಾಳೆ 10 ರ ಚಟುವಟಿಕೆ 3 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಕಲಿಕಾಂಶ 7**

**ಸಮಾಜೋ-ಧಾರ್ಮಿಕ ಪರಿಸ್ಥಿತಿ**

**ಕಲಿಕಾ ಫಲ:** ಮಧ್ಯಯುಗೀನ ಕಾಲದಲ್ಲಾದ ಸಮಾಜೋ-ಧಾರ್ಮಿಕ ಬದಲಾವಣೆಗಳನ್ನು ವಿವರಿಸುವರು.

**ಉದ್ದೇಶಗಳು:**

- ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗೆ ಕಾರಣರಾದ ಭಕ್ತಿ ಮತ್ತು ಸೂಫಿ ಸಂತರ ಬಗ್ಗೆ ತಿಳಿದುಕೊಳ್ಳುವರು.
- ಭಕ್ತಿ ಮತಗ್ತು ಸೂಫಿ ಸಂತರ ತತ್ವಗಳು, ಆದರ್ಶಗಳು ಮತ್ತು ಅನುಸರಿಸಿದ ವಿಧಾನಗಳ ಬಗ್ಗೆ ಅರ್ಥಮಾಡಿಕೊಳ್ಳುವುರು.
- ಸಮಾಜೋ-ಧಾರ್ಮಿಕ ಬದಲಾವಣೆಗಳನ್ನು ಅವಲೋಕನ ಮಾಡುವರು

**ಕಲಿಕಾ ಹಾಳೆ 14**

1. **ಚಟುವಟಿಕೆ:** ಸೂಫಿ ಸಂತರು ಯಾವ ಯಾವ ಸಮಾಜದ ನ್ಯೂನ್ಯತೆಗಳನ್ನು ಸರಿಪಡಿಸಲು ಪ್ರಯತ್ನಿಸಿದ್ದರು? ಪಟ್ಟಿ ಮಾಡುವಿರಾ.

ಮಕ್ಕಳು ಪಟ್ಟಿ ಮಾಡಿದ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಇಂದಿನ ಕಾಲದಲ್ಲಿನ ಸಾಮಾಜಿಕ ನ್ಯೂನ್ಯತೆಗಳ ಬಗ್ಗ ತಿಳಿಸಿ ಪರಿಹಾರಗಳ ಬಗ್ಗೆ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸಿ ಮಕ್ಕಳಲ್ಲಿ ಹೋಲಿಕಾತ್ಮಕ ಅಧ್ಯಯನದ ಮನೋಭಾವವನ್ನು ಬೆಳೆಸುವುದು.

2. **ಚಟುವಟಿಕೆ :** ಕೆಳಗೆ ನೀಡಲಾಗಿರುವ ಚಿತ್ರಗಳು ಸೂಫಿ ಸಂತರಿಗೆ ಸಂಬಂಧಿಸಿವೆ, ನೀವು ಅವುಗಳಿರುವ ಸ್ಥಳ ಹಾಗೂ ಅವುಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಂಡು ನಿಮ್ಮ ಸ್ನೇಹಿತರೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳಿ.

ನಕ್ಷೆಗಳ ಮೂಲಕ ಸ್ಥಳಾನ್ವೇಷಣೆ ಹಾಗೂ ಅವುಗಳ ಇತಿಹಾಸವನ್ನು ಅರಿಯುವಂತೆ ಮಾಡುವುದು. ಸ್ಥಳಗಳಿಗೆ ಸಂಬಂಧಿಸಿದಂತೆ ಇತರ ಕಲಿಕಾಂಶಗಳಲ್ಲಿಯೂ ಈ ಚಟುವಟಿಕೆಯನ್ನು ಮಾಡಿಸಬಹುದು.

**3. ಚಟುವಟಿಕೆ :** ಕೆಳಗೆ ನೀಡಲಾಗಿರುವ ಚಿತ್ರವನ್ನು ಸೂಕ್ಷ್ಮವಾಗಿ ಗಮನಿಸಿ ಉತ್ತರಿಸಿ.

ಚಿತ್ರಗಳ ಮೂಲಕ ಇತಿಹಾಸವನ್ನು ತಿಳಿಸುವ ಪ್ರಯತ್ನವನ್ನು ಮಾಡಬಹುದು. ಇದಕ್ಕಾಗಿ ಇನ್ನಿತರ ಚಿತ್ರಗಳನ್ನೂ ಬಳಕೆ ಮಾಡಿಕೊರ್ಳಳಬಹುದು ಹಾಗೂ ಇತರ ಕಲಿಕಾಂಶಗಳಲ್ಲಿಯೂ ಇದನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಬಹುದು ಮತ್ತು ಚಿತ್ರ ನೋಡಿ ಇತಿಹಾಸ ರಚನಾ ಚಟುವಟಿಕೆಯನ್ನೂ ಮಾಡಿಸಬಹುದು.

**4. ಚಟುವಟಿಕೆ:** ಕೆಳಗಿನ ಪಟ್ಟಿಯಲ್ಲಿ ಭಕ್ತಿಪಂಥದ ದಾರ್ಶನಿಕರು ಹಾಗೂ ಅವರು ಪ್ರತಿಪಾದಿಸಿದ ತತ್ವಗಳನ್ನು ನೀಡಲಾಗಿದೆ. ಅವುಗಳನ್ನು ಸರಿ ಹೊಂದಿಸಿ ಬರೆಯಿರಿ.

**5. ಚಟುವಟಿಕೆ :** ಕೊಟ್ಟಿರುವ ದಾರ್ಶನಿಕರ ತತ್ವಗಳ ಬಗ್ಗೆ ನೀವೇನು ತಿಳಿದುಕೊಂಡಿದ್ದೀರಿ ತಿಳಿಸುವಿರಾ?

ದಾರ್ಶನಿಕರ ತತ್ವಗಳನ್ನು ಅರ್ಥಮಾಡಿಕೊಂಡಿದ್ದಾರೆಯೇ ಎಂಬುದನ್ನು ಉಪ ಪ್ರಶ್ನೆಗಳ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸುವುದು ಹಾಗೂ ಎಲ್ಲಾ ದಾರ್ಶನಿಕರ ತತ್ವಭೋಧನೆಗಳು ಬೇರೆ ಬೇರೆಯಾಗಿದ್ದರೂ ಸಹ ಅವರ ಪ್ರಮುಖ ಉದ್ದೇಶ ಸಾಮಾಜಿಕ ಸುಧಾರಣೆ ಮಾತ್ರ ಆಗಿತ್ತು ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ತರಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 14ರ ಚಟುವಟಿಕೆ5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 8

## ಯುದ್ಧದ ಕಾರಣಗಳು ಮತ್ತು ಪರಿಣಾಮಗಳು.

**ಕಲಿಕಾ ಫಲ :** ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಅರ್ಥೈಸಿಕೊಳ್ಳುತ್ತಾರೆ.

**ಉದ್ದೇಶಗಳು:**

- ರಾಜಮನೆತನಗಳ ನಡುವೆ ನಡೆಯುತ್ತಿದ್ದ ಯುದ್ಧದ ಕಾರಣ ಮತ್ತು ಪರಿಣಾಮಗಳನ್ನು ಅರ್ಥ ಮಾಡಿಸುವುದು.
- ಯುದ್ಧದಿಂದಾದ ಬದಲಾವಣೆಗಳನ್ನು ಗಮನಿಸುವುದು.
- ಮಧ್ಯಯುಗದ ಕಾಲದಲ್ಲಿನ ರಾಜಮನೆತನಗಳ ನಡುವಿನ ಯುದ್ಧ ಮತ್ತು ಇಂದು ನಡೆಯುತ್ತಿರುವ ಯುದ್ಧಗಳ ಬಗ್ಗೆ ಹೋಲಿಕೆ ಮಾಡವುದು.

## ಕಲಿಕಾ ಹಾಳೆ 15

**1. ಚಟುವಟಿಕೆ:** ಈಗ ನೀವು ಮಾಹಿತಿಯನ್ನು ಓದಿದ್ದೀರಾ ಅಲ್ಲವಾ ಹಾಗಾದರೆ ಕೆಳಗಿನ ಚಿತ್ರಗಳನ್ನು ಗಮನಿಸಿ ಯೋಚಿಸಿ! ಉತ್ತರಿಸಿ.

ಚಿತ್ರಗಳನ್ನು ಗಮನಿಸಿ ರಾಜಮನೆತನಗಳ ಕಾಲದ ಯುದ್ಧ ಮತ್ತು ಇಂದು ನಡೆಯುತ್ತಿರುವ ಯುದ್ಧಗಳ ಬಗ್ಗೆ ಮಕ್ಕಳಿಗೆ ಪೂರ್ವಜ್ಞಾನ ಇದೆಯಾ ಅಥವಾ ಅರಿವಿದೆಯಾ ಎಂಬುದರ ಬಗ್ಗೆ ತಿಳಿದುಕೊಂಡು ಚಿತ್ರಗಳ ಮೂಲಕ ಯುದ್ಧದ ಪರಿಣಾಮಗಳನ್ನು ಪರಿಣಾಮಕಾರಿಯಾಗಿ ಮಾಡುವುದು. ಇದಕ್ಕೆ ಸಂಬಂಧಿಸಿದಂತೆ ಮೊದಲನೇ ಮಹಾಯುದ್ಧ, ಎರಡನೇ ಮಹಾಯುದ್ಧ, ಇತ್ತೀಚಿನ ಯಾವುದಾದರೂ ಯುದ್ಧಗಳ ವೀಡಿಯೋಗಳನ್ನು ಪ್ರದರ್ಶಿಸಿ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸಿ ವಾಸ್ತವಾಂಶಗಳನ್ನು ಮಕ್ಕಳಿಗೆ ತಿಳಿಸಿ ನಿರ್ಧಾರಗಳನ್ನು ಮಕ್ಕಳ ವಿವೇಚನೆಗೆ ಬಿಡುವುದು.

**2. ಚಟುವಟಿಕೆ:** ಮಕ್ಕಳೇ ಪುಸ್ತಕದಲ್ಲಿರುವ ನಕ್ಷೆಗಳ ಸಹಾಯದಿಂದ ಭಾರತದ ರೇಖಾನಕ್ಷೆಯ ಮೇಲೆ ಅಲ್ಲಾವುದ್ದೀನ್ ಖಿಲ್ಜಿಯು ದಕ್ಷಿಣ ಭಾರತದ ಮೇಲೆ ಮಾಡಿದ ದಾಳಿಯ ಮಾರ್ಗವನ್ನು ಮತ್ತು ಪ್ರಮುಖ ಸ್ಥಳಗಳನ್ನು ಗುರುತಿಸೋಣ.

ನಕ್ಷಾ ಚಟುವಟಿಕೆಯ ಮೂಲಕ ಅಲ್ಲಾವುದ್ದೀನ್ ಖಿಲ್ಜಿಯ ದಂಡಯಾತ್ರೆ ಮತ್ತು ಇತಿಹಾಸವನ್ನು ತಿಳಿಸುವುದು.

**3. ಚಟುವಟಿಕೆ:** ಬಾಬರ್ ಪಾಣಿಪತ್ ಕದನದಲ್ಲಿ ತನ್ನ ಸೈನ್ಯಕ್ಕಿಂತ ಬಹಳ ದೊಡ್ಡದಾದ ಸೈನ್ಯವನ್ನು ಸೋಲಿಸಿದುದರ ಕುರಿತು ಚರ್ಚಿಸಿ.

ಸೈನ್ಯಬಲಗಳ ಬಗ್ಗೆ ಮಾಹಿತಿ ಒದಗಿಸುವುದು ಮತ್ತು ಮಕ್ಕಳ ಅಭಿಪ್ರಾಯಗಳಿಗೆ ಹೆಚ್ಚಿನ ಆದ್ಯತೆ ನೀಡಿ ಯುದ್ಧದ ವಾಸ್ತವಾಂಶಗಳನ್ನು ಮಕ್ಕಳಿಗೆ ವಿವರಿಸುವುದು.

**4. ಚಟುವಟಿಕೆ:** ವಿಜಯನಗರದ ಅವನತಿಗೆ ಕಾರಣವಾದ ತಾಳಿಕೋಟೆ ಕದನದ ಕುರಿತು ಟಿಪ್ಪಣಿ ಬರೆಯಿರಿ.

ಇದನ್ನು ಮಾದರಿಯಾಗಿಟ್ಟುಕೊಂಡು ರಾಜಮನೆತಗಳ ಅಥವಾ ಯಾವುದೇ ರಾಜ್ಯದ ಅವನತಿಗೆ ಯುದ್ದವೂ ಸಹ ಒಂದು ಕಾರಣ ಎಂಬುದನ್ನು ತಿಳಿಸಬೇಕು.

**5. ಚಟುವಟಿಕೆ:** ಯುದ್ದಗಳು ಸಂಭವಿಸಲು ಕಾರಣಗಳೇನು? ಅದನ್ನು ಹೇಗೆ ತಡೆಗಟ್ಟಬಹುದು? ನಿನ್ನ ಅಭಿಪ್ರಾಯಗಳನ್ನು ತಿಳಿಸು

ರಾಜ್ಯದ ವಿಸ್ತರಣೆ, ಸಂಪನ್ಮೂಲಗಳು, ನಾಯಕರ ನಿರ್ಧಾರಗಳು ಮುಂತಾದ ಅಂಶಗಳು ಯುದ್ದದ ಕಾರಣಗಳೆಂಬುದನ್ನು ಮಕ್ಕಳಿಗೆ ಅರಿವು ಮೂಡಿಸಿ ಯುದ್ದಕ್ಕೆ ಪರ್ಯಾಯ ಮಾರ್ಗಗಳಾದ ಶಾಂತಿಯುತ ಮಾತುಕತೆ, ಹೊಂದಾಣಿಕೆ, ಸಹಕಾರ ಎಂಬ ಅಂಶಗಳು ಮುಖ್ಯ ಎಂಬ ಭಾವನೆ ಮಕ್ಕಳಲ್ಲಿ ಚಿಗುರೊಡೆಯಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 15 ರ ಚಟುವಟಿಕೆ 1 ಮತ್ತು 5 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 9

## ಜಲಮಾರ್ಗದ ಅನ್ವೇಷಣೆ

**ಕಲಿಕಾ ಫಲ:** ಸಮುದ್ರ ಮಾರ್ಗಗಳ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಪರಿಗಣಿಸಿ ಅರ್ಥಮಾಡಿಕೊಳ್ಳುವರು

**ಉದ್ದೇಶಗಳು:**

- ಹೊಸ ಜಲಮಾರ್ಗಗಳ ಅನ್ವೇಷಣೆಗೆ ಮುಂದಾಗಲು ಪ್ರಮುಖವಾದ ಕಾರಣಗಳನ್ನು ಅರಿತುಕೊಳ್ಳುವುದು.
- ಜಲಮಾರ್ಗದ ಅನ್ವೇಷಣೆಯಿಂದಾದ ಪರಿಣಾಮಗಳನ್ನು ಅರ್ಥಮಾಡಿ ಕೊಳ್ಳುವುದು. ಕ್ಯಾಲಿಕೋಬಟ್ಟೆ (ಅಂದಿನ ಕಾಟನ್ ಬಟ್ಟೆ) ಮತ್ತು ಮಸಾಲೆಗಳ ಮಾತುಕತೆಯನ್ನು ಮಕ್ಕಳಿಂದ ಪ್ರಹಸನ ಮಾಡಿಸವುದು ಮತ್ತು ಮಕ್ಕಳೆ ಓದಿ ಅರ್ಥಗ್ರಹಿಕೆ ಮಾಡಿಕೊಳ್ಳಲು ಅವಕಾಶ ಮಾಡಿಕೊಡುವುದು.

## ಕಲಿಕಾ ಹಾಳೆ 16

**1. ಚಟುವಟಿಕೆ:** ಚಟುವಟಿಕೆಯಲ್ಲಿ ನೀಡಿದ ಮಾತುಕತೆ ನಡೆಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಬೇಕು.

ಕ್ಯಾಲಿಕೋ ಬಟ್ಟೆ (ಅಂದಿನ ಕಾಟನ್ ಬಟ್ಟೆ) ಮತ್ತು ಮಸಾಲೆಗಳ ಪಧಾರ್ಥಗಳ ವಿಷಯದ ಮೇಲಿನ ಮಾತುಕತೆಯಿಂದ ಮಕ್ಕಳಿಗೆ ಜಲಮಾರ್ಗದ ಹುಡುಕಾಟ ಪ್ರಾರಂಭಿಸಲು ಕಾರಣವೇನು ಎಂಬುದನ್ನು ತಿಳಿಸಲು ಪ್ರಯತ್ನಿಸಬೇಕು. ಈ ಚಟುವಟಿಕೆಯಲ್ಲಿ ನೀಡಲಾಗಿರುವ ಉಪಪ್ರಶ್ನೆಗಳ ಮೂಲಕ ಮಕ್ಕಳ ಅರ್ಥಗ್ರಹಿಕೆಯನ್ನು ತಿಳಿದುಕೊಂಡು ಯುರೋಪಿಯನ್ನರು ಜಲಮಾರ್ಗದ ಶೋಧನೆಗೆ ಮುಂದಾಗಲು ಕಾರಣವಾದ ಪ್ರಮುಖ ಅಂಶವನ್ನು ತಿಳಿಸುವುದು.

**2. ಚಟುವಟಿಕೆ:** ಇಂದು ಭಾರತದಿಂದ ಬೇರೆ ದೇಶಗಳಿಗೆ ರಫ್ತಾಗುವ ಮತ್ತು ಬೇರೆ ದೇಶದಿಂದ ಭಾರತಕ್ಕೆ ಆಮದಾಗುವ ವಸ್ತುಗಳನ್ನು ಪಟ್ಟಿ ಮಾಡಿ.

ಭಾರತದ ವಿದೇಶಿ ವ್ಯಾಪರದ ಹಿಂದಿನ ಮತ್ತು ಇಂದಿನ ಸ್ಥಿತಗತಿಗಳು, ಆಮದು ಮತ್ತು ರಫ್ತಾಗುತ್ತಿರುವ ವಸ್ತುಗಳ, ಇದರಿಂದ ವಿದೇಶಗಳೊಂದಿಗೆ ವ್ಯಾಪಾರ ಸಂಬಂಧ ವೃದ್ಧಿಯಾಗಿ ಆರ್ಥಿಕ ಚಟುವಟಿಕೆಗಳು, ಉದ್ಯೂಗಗಳ ಸೃಷ್ಠಿ ಮುಂತಾದ ಅಂಶಗಳ ಬಗ್ಗೆ ಬೆಳಕು ಚೆಲ್ಲುವುದು.

ಮಸಾಲೆಯ ಮಸಲತ್ತು ಬಲ್ಲಿರಾ? ಬನ್ನಿ ತಿಳಿಯೋಣ.

ಮಕ್ಕಳೇ ಓದಿ ಅರ್ಥಮಡಿಕೊಳ್ಳಲು ಅವಕಾಶ ನೀಡುವುದು ಮತ್ತು ಜಲಮಾರ್ಗವು ಹೇಗೆ ಶೋಧನೆಯಾಯಿತು ಎಂಬುದನ್ನು ಅರ್ಥ ಮಾಡಿಸುವುದು.

## ಕಲಿಕಾ ಹಾಳೆ 17

**1. ಚಟುವಟಿಕೆ:** ಮೇಲಿನ ಕಥೆಯನ್ನು ಓದಿ, ಯೋಚಿಸಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

ಸ್ವ–ಓದು ಮತ್ತು ಸ್ವ–ಅರ್ಥಗ್ರಹಿಕೆಗೆ ಆದ್ಯತೆ ನೀಡಿ, ಮಕ್ಕಳೇ ಉಪ ಪ್ರಶ್ನೆಗಳಿಗೆ ಉತ್ತರಿಸುವಂತೆ ಪ್ರೇರೇಪಿಸಬೇಕು.

ಯಾವುದೇ ವ್ಯಕ್ತಿ ಅಥವಾ ದೇಶ ಅವಲಂಬಿತವಾಗಿರುವ ವೃತ್ತಿ ಅಥವಾ ವ್ಯಾಪಾರ ವಹಿವಾಟಿಗೆ ಧಕ್ಕೆ ಉಂಟಾದರೆ ಅದರಿಂದಾಗುವ ಪರಿಣಾಮಗಳನ್ನು ಅರ್ಥಮಾಡಿಸುವುದು, ತಮ್ಮ ದೈನಂದಿನ ಜೀವನದ ಅಥವಾ ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಈ ರೀತಿಯ ಸನ್ನವೇಶಗಳು ಸಂಭವಿಸಿದ್ದರೆ ಮಕ್ಕಳ ಅಭಿಪ್ರಾಯವನ್ನು ಸಂಗ್ರಹಿಸಿ ಸ್ಥಳೀಯ ಉದಾಹರಣೆಗಳನ್ನು ಮಕ್ಕಳಿಗೆ ನೀಡುವುದು.ಯುರೋಪಿಯನ್ನರಿಗೆ ಭಾರತ ಮತ್ತು ಏಷ್ಯಾದ ವಸ್ತಗಳ ಮೇಲೆ ಇದ್ದ ವ್ಯಾಮೋಹ, ಅವುಗಳ ಅಗತ್ಯತೆ ಮತ್ತು ಅದರ ಪರಿಣಾಮವನ್ನು ಸ್ಪಷ್ಟಪಡಿಸುವುದು.ಕಾನ್‌ಸ್ಟಂಟಿನೋಪಲ್ ನಗರವನ್ನು ವಶಪಡಿಸಿಕೊಂಡಿದ್ದರ ಹಿಂದಿನ ಕಥನವನ್ನು ತಿಳಿಸಿ ಭೂಪಟವನ್ನು ಉಪಯೋಗಿಸಿ ಸ್ಪಷ್ಟ ಚಿತ್ರಣ ನೀಡುವುದು.

**ಕಲಿಕಾ ಹಾಳೆ 18**

1. **ಚಟುವಟಿಕೆ:** ಕೆಳಗೆ ಕೊಟ್ಟಿರುವ ಸ್ಥಳಗಳನ್ನು ವಿಶ್ವ ಭೂಪಟದಲ್ಲಿ ಗುರುತಿಸೋಣವೇ?

2. **ಚಟುವಟಿಕೆ:** ಕೊಟ್ಟಿರುವ ನಕ್ಷೆಯಲ್ಲಿ ವಾಸ್ಕೋ-ಡ-ಗಾಮ ಭಾರತಕ್ಕೆ ಬಂದ ಜಲಮಾರ್ಗವನ್ನು ಗೆರೆ ಎಳೆದು ಗುರುತಿಸು.

ಮಕ್ಕಳಿಂದ ನಕ್ಷಾ ಚಟುವಟಿಕೆ ಮಾಡಿಸುವುದು ಇದರ ಜೊತೆಗೆ ಭಾರತದಿಂದ ಇತರ ದೇಶಗಳಿಗೆ ಇರುವ ಜಲಮಾರ್ಗ ಮತ್ತು ಭೂ ಮಾರ್ಗಗಳನ್ನು ಪರಿಚಯಿಸುತ್ತಾ ಮಕ್ಕಳೇ ಹೆಚ್ಚಿನ ಮಾರ್ಗಗಳನ್ನು ಹುಡುಕಲು ಪ್ರೋತ್ಸಾಹ ನೀಡಬೇಕು. ಕಲಿಕಾಂಶ 15 ರಲ್ಲಿ ತಿಳಿಸಿರುವ ಅಂಶಗಳನ್ನು ಇಲ್ಲಿ ಪರಿಗಣಿಸಬಹುದು. ರಸ್ತೆ ಮಾರ್ಗ ಮತ್ತು ಜಲಮಾರ್ಗಗಳ ಪ್ರತ್ಯೇಕ ನಕ್ಷೆಯನ್ನು ಬಳಸಿಕೊಳ್ಳಬಹುದು

3. **ಚಟುವಟಿಕೆ:** ಕೆಳಗೆ ಕೆಲವು ಸ್ಥಳಗಳ ಹಿಂದಿನ ಹೆಸರನ್ನು ನೀಡಲಾಗಿದೆ. ಅವುಗಳ ಇಂದಿನ ಹೆಸರನ್ನು ಹುಡುಕಿ ಬರೆಯೋಣವೇ?

ಸಮಯ ಸನ್ನಿವೇಶಗಳೊಂದಿಗೆ ಕೆಲವು ಸ್ಥಳಗಳ ಹೆಸರು ಬದಲಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸಬೇಕು. ಉದಾ ಮೈಸೂರು ಸಂಸ್ಥಾನವು ಕರ್ನಾಟಕ ಎಂದು ಬದಲಾಗಿರುವುದನ್ನು ತಿಳಿಸಿ ತಮ್ಮ ಊರಿನ ಹೆಸರುಗಳಿಗೆ ಈ ಹಿಂದೆ ಯಾವುದಾದರೂ ಬೇರೆ ಹೆಸರಿತ್ತೆ ಎಂಬುವ ಸ್ಥಳನಾಮದ ಇತಿಹಾಸವನ್ನು ಪರಿಚಯಿಸಬೇಕು.

4. **ಚಟುವಟಿಕೆ:** ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ:

ಈಗಾಗಲೆ ತಿಳಿದಿರುವ ಮಾಹಿತಿಯ ಆಧಾರದ ಮೇಲೆ ಮಕ್ಕಳ ಗ್ರಹಿಕೆಯನ್ನು ಅರ್ಥಮಾಡಿಕೊಳ್ಳುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 17 ರ ಚಟುವಟಿಕೆ 1 ನ್ನುಮತ್ತು ಕಲಿಕಾ ಹಾಳೆ 18 ರ ಚಟುವಟಿಕೆ 1ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 10

## ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ವಿಸ್ತರಣೆ

**ಕಲಿಕಾ ಫಲ:** ಈಸ್ಟ್‌ಇಂಡಿಯಾ ಕಂಪನಿ ತನ್ನ ನಿಯಂತ್ರಣವನ್ನು ಭಾರತದಾದ್ಯಂತ ವಿಸ್ತರಿಸಿಕೊಂಡಿದ್ದನ್ನು ವಿವರಿಸುವರು .

**ಉದ್ದೇಶ :** ಈಸ್ಟ್ ಇಂಡಿಯಾ ಕಂಪನಿ ತನ್ನ ಆಡಳಿತವನ್ನು ಹಂತಹಂತವಾಗಿ ಹೇಗೆ ಭಾರತದಾದ್ಯಂತ ವಿಸ್ತರಿಸಿಕೊಂಡಿತು ಎಂಬುದನ್ನು ಅರ್ಥಮಾಡಿಕೊಳ್ಳುವುದು

### ಕಲಿಕಾ ಹಾಳೆ 19

1. **ಚಟುವಟಿಕೆ:** ಕೆಳಗಿನ ಪಟ್ಟಿಯಲ್ಲಿ ಕೆಲವು ಪ್ರಮುಖ ಘಟನೆಗಳನ್ನು ನೀಡಲಾಗಿದೆ ಅವುಗಳಿಗೆ ಸರಿಯಾದ ಕಾರಣಗಳನ್ನು ನೀಡಿ ಪರಿಣಾಮಗಳನ್ನು ತಿಳಿಸು.

ಪಠ್ಯ ಪುಸ್ತಕದ ಸಹಾಯದಿಂದ ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ವಿಸ್ತರಣೆಗೆ ಕಾರಣವಾದ ಪ್ರಮುಖ ಯುದ್ಧಗಳನ್ನು ಪಠ್ಯ ಪುಸ್ತಕದ ಸಹಾಯದಿಂದ ಮಕ್ಕಳೇ ಸ್ವತಃ ಕಾರಣ ಮತ್ತು ಪರಿಣಾಮಗಳನ್ನು ಗುರುತಿಸಲು ಮಾರ್ಗದರ್ಶನ ಮಾಡುವುದು

2. **ಚಟುವಟಿಕೆ:** ಅತ್ಯಂತ ಪ್ರಬಲರಾದ ನವಾಬರು, ಮರಾಠರು, ಮೈಸೂರಿನ ಅರಸರು ಮತ್ತು ಸಿಖ್‌ರನ್ನು ಬ್ರಿಟಿಷರು ಸರಳವಾಗಿ ಸೋಲಿಸಿದ್ದಕ್ಕೆ ಕಾರಣಗಳನ್ನು ಹುಡುಕಿ ಬರೆಯೋಣ.

ಬಲಿಷ್ಠ ಸೈನ್ಯವನ್ನು ಹೊಂದಿದ್ದರೂ ಭಾರತದ ರಾಜಮನೆತನಗಳು ಈಸ್ಟ್ ಇಂಡಿಯಾ ಕಂಪನಿಯ ಎದುರು ಸೋತ ಬಗೆಯನ್ನು ಮಕ್ಕಳಿಗೆ ತಿಳಿಸುತ್ತಾ ಬ್ರಿಟಿಷರ ಒಡೆದು ಆಳುವ ನೀತಿಯ ಕುರಿತು ತಿಳಿಸುವುದು. ಜೊತೆಗೆ ಭಾರತದ ರಾಜಮನೆತನಗಳ ನಡುವೆ ಇದ್ದಂತಹ ವೈ-ಮನಸ್ಸುಗಳು ಕೂಡ ಈಸ್ಟ್ ಇಂಡಿಯ ಕಂಪನಿ ಸುಲಭವಾಗಿ ರಾಜ್ಯಗಳನ್ನು ವಶಪಡಿಸಿಕೊಳ್ಳಲು ಕಾರಣವಾಯಿತು ಎಂಬುದನ್ನು ಸ್ಪಷ್ಟಪಡಿಸಬೇಕು. ಇವುಗಳು ಹೇಗೆ ಅವರ ಅಧಿಕಾರ ವಿಸ್ತರಣೆಗೆ ಕಾರಣವಾಯಿತು ಎಂಬುದನ್ನು ಅರ್ಥಮಾಡಿಸುವುದು.

3. **ಚಟುವಟಿಕೆ:** 20ನೇ ಶತಮಾನದಲ್ಲಿ ನಡೆದ ಯಾವುದಾದರೊಂದು ಯುದ್ಧದ ಮಾಹಿತಿಯನ್ನು ಸಂಗ್ರಹಿಸಿ ಹಾಗೂ ಅದರ ಕಾರಣ ಮತ್ತು ಪರಿಣಾಮಗಳನ್ನು ಬರೆಯಿರಿ.

ಮಕ್ಕಳಿಗೆ ಗತಕಾಲದ ಯುದ್ಧಗಳ ಪರಿಚಯವಿರುವುದರಿಂದ ಇಂದಿನ ದಿನಗಳಲ್ಲಿ ನಡೆಯುತ್ತಿರುವ ಯುದ್ಧಗಳ ಬಗ್ಗೆ ಪತ್ರಿಕೆಗಳು, ಟಿವಿ, ಅಂತರ್ಜಾಲ ಇನ್ನಿತರ ಮಾಧ್ಯಮಗಳ ಮೂಲಕ ಮಾಹಿತಿಯನ್ನು ಸಂಗ್ರಹಿಸಿ ಉತ್ತರಗಳನ್ನು ಬರೆಯಲು ಪ್ರೇರೇಪಿಸಬೇಕು. ಇತ್ತೀಚೆಗೆ ನಡೆದ ರಶಿಯಾ ಮತ್ತು ಉಕ್ರೇನ್ ನಡುವಿನ ಯುದ್ದದ ವಿಡಿಯೋ ದೃಶ್ಯಗಳನ್ನು ತೋರಿಸಿ ಯುದ್ಧಗಳಿಂದ ಆಗುವ ಪರಿಣಾಮಗಳ ಬಗ್ಗೆ ಚರ್ಚೆ ಮಾಡಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 19 ರ, ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 11

## ಬ್ರಿಟಿಷರ ಆಳ್ವಿಕೆಯಲ್ಲಿ ಕೃಷಿಯ ಮೇಲಿನ ಪರಿಣಾಮಗಳು

**ಕಲಿಕಾ ಫಲ:** ಕೃಷಿ ಕ್ಷೇತ್ರದ ಮೇಲೆ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳನ್ನು ವಿಶ್ಲೇಷಿಸುವರು

**ಉದ್ದೇಶಗಳು:**

- ಬ್ರಿಟಿಷರ ಆಳ್ವಿಕೆಯಲ್ಲಿ ಕೃಷಿ ಕ್ಷೇತ್ರದ ಮೇಲೆ ಆದಂತಹ ಪರಿಣಾಮಗಳನ್ನು ತೆಗೆದುಕೊಳ್ಳುವುದು.
- ತೆರಿಗೆಯ ಮೂಲಕ ರೈತರ ಶೋಷಣೆ ಹೇಗಾಗುತ್ತಿತ್ತು ಎಂಬುದನ್ನು ಅರ್ಥಮಾಡಿಕೊಳ್ಳುವುದು
- ಇಂದಿನ ಆಡಳಿತದಲ್ಲಿ ಕೃಷಿಕ್ಷೇತ್ರದ ಮೇಲೆ ಇರುವ ತೆರಿಗೆ ಪದ್ಧತಿಗಳನ್ನು ತಿಳಿದುಕೊಳ್ಳುವುದು

### ಕಲಿಕಾ ಹಾಳೆ 20

1. **ಚಟುವಟಿಕೆ:** ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಗುರುತಿಸೋಣ

ರೈತವಾರಿ, ಜಮೀನ್ದಾರಿ ಮತ್ತು ಮಹಲ್‌ವಾರಿ ಪದ್ದತಿಗಳ ನಡುವೆ ಇರುವ ಸಾಮ್ಯತೆಗಳು ಹಾಗೂ ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು.

ಬ್ರಿಟಿಷರ ಆಳ್ವಿಕೆಯಲ್ಲಿ ಇದ್ದಂತಹ ವಿವಿಧ ರೀತಿಯ ಕೃಷಿ ನೀತಿಗಳ ಪರಿಚಯವನ್ನು ಮಾಡಿಸಿ, ಮಕ್ಕಳಿಂದಲೇ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಪಟ್ಟಿ ಮಾಡಿಸುವುದು

2. **ಚಟುವಟಿಕೆ:** ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಮದ್ರಾಸ್, ಬಂಗಾಲ ಮತ್ತು ಮಧ್ಯ ಭಾರತದ ಪ್ರಾಂತ್ಯಗಳನ್ನು ಗುರುತಿಸಿ

ನಕ್ಷೆಯ ಚಟುವಟಿಕೆ ಮಾಡಿಸುವುದು ಮತ್ತು ಸ್ಥಳಗಳನ್ನು ಗುರುತಿಸಲು ಮಕ್ಕಳಿಗೆ ಮಾರ್ಗದರ್ಶನ ಮಾಡುವುದು. ಇದಕ್ಕಿಂತ ಮೊದಲು ಭಾರತದ ನಕ್ಷೆಯಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಮುಖ ಸ್ಥಳಗಳನ್ನು ಗಮನಿಸಲು ಅವಕಾಶ ಮಾಡಿ ಕೊಡುವುದು

3. **ಚಟುವಟಿಕೆ :** ಶಿಕ್ಷಕರ ಸಹಾಯವನ್ನು ಪಡೆದು ಮಾದರಿ ಪಹಣಿಯನ್ನು ಗಮನಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಹುಡುಕಿ ಬರೆಯಿರಿ.

ತಮಗೆ ಲಭ್ಯವಿರುವ ಯಾವುದಾದರೊಂದು ನಕಲು ಭೂ ದಾಖಲೆಯನ್ನು ಮಕ್ಕಳಿಗೆ ಒದಗಿಸುವುದು. ಅದರಲ್ಲಿರುವ ಪ್ರಮುಖ ಅಂಶಗಳನ್ನು ಪಟ್ಟಿಮಾಡಲು ಮಕ್ಕಳಿಗೆ ಅವಕಾಶ ಕೊಡುವುದು. ಯಾವುದೇ ದಾಖಲೆಯಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶಗಳನ್ನು ಮಕ್ಕಳಿಗೆ ತಿಳಿಸಿಕೊಡುವುದು. ಉದಾಹರಣೆಗೆ ಮಾಲೀಕನ ಹೆಸರು, ಸ್ಥಳ, ಅವಧಿ ಇತ್ಯಾದಿ.

4. **ಚಟುವಟಿಕೆ:** ನಿಮ್ಮ ಕುಟುಂಬದವರು, ರೈತರನ್ನು ಅಥವಾ ನಿಮ್ಮ ಊರಿನ ಗ್ರಾಮ ಲೆಕ್ಕಾಧಿಕಾರಿಯನ್ನು ಭೇಟಿ ಮಾಡಿ ವಿವಿಧ ರೀತಿಯ ಭೂ ದಾಖಲೆಗಳ ಹೆಸರನ್ನು ಸಂಗ್ರಹಿಸಿ ಪಟ್ಟಿ ಮಾಡಿ.

ಮಕ್ಕಳಿಗೆ ರೈತರು, ಗ್ರಾಮ ಲೆಕ್ಕಾಧಿಕಾರಿ, ಪಿಡಿಓ ಅವರನ್ನು ಭೇಟಿ ಮಾಡಲು ಅವಕಾಶ ಕಲ್ಪಿಸುವುದು. ಇಲ್ಲವಾದಲ್ಲಿಭೂ ದಾಖಲೆಗಳ ಬಗ್ಗೆ ಮಾಹಿತಿಯನ್ನು ತಿಳಿದಿರುವ ಯಾರಾದರೂ ಅಧಿಕಾರಿಗಳನ್ನು ಶಾಲೆಗೆ ಕರೆದು ಭೂ ದಾಖಲೆಗಳ ಬಗ್ಗೆ ಮಕ್ಕಳೊಂದಿಗೆ ಚರ್ಚಿಸಲು ಅವಕಾಶ ಮಾಡಿಕೊಡುವುದು.

5. **ಚಟುವಟಿಕೆ:** ಇತ್ತೀಚಿಗೆ ರೈತರ ಆತ್ಮಹತ್ಯೆಗಳ ಬಗ್ಗೆ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಅದಕ್ಕೆ ಸಂಬಂಧಿಸಿದಂತೆ ಯಾರಾದರೂ ರೈತರನ್ನು ಭೇಟಿ ಮಾಡಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ. ಅದನ್ನು ತಡೆಯಲು ಪರಿಹಾರಗಳನ್ನು ಸೂಚಿಸಿ.

ರೈತರನ್ನು ಭೇಟಿ ಮಾಡಿ ರೈತರ ಆತ್ಮಹತ್ಯೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಲು ಅವಕಾಶ ಕಲ್ಪಿಸಿ ಕೊಡುವುದು ಅಥವಾ ಸ್ಥಳೀಯ ರೈತರೊಂದಿಗೆ ಸಂವಾದವನ್ನು ಏರ್ಪಡಿಸುವುದು. ನಂತರ ಮಕ್ಕಳಿಗೆ ಚರ್ಚೆಯ ಆಧಾರದ ಮೇಲೆ ತಮ್ಮ ಅಭಿಪ್ರಾಯಗಳನ್ನು ಬರೆಯಲು ಮಾರ್ಗದರ್ಶನ ಮಾಡುವುದು.

**6. ಚಟುವಟಿಕೆ:** ಒಂದು ವೇಳೆ ಬ್ರಿಟಿಷರ ಕಾಲದಲ್ಲಿ ನೀನು ರೈತನಾಗಿದ್ದರೆ ಏನು ಮಾಡುತ್ತಿದ್ದೆ? ನಿನ್ನ ಸ್ವಂತ ಅಭಿಪ್ರಾಯವನ್ನು ತಿಳಿಸು.

ಈ ಕಲಿಕಾಂಶದ ಮಾಹಿತಿ ಮತ್ತು ಚರ್ಚೆಗಳ ಆಧಾರದ ಮೇಲೆ ರೈತರ ಕುರಿತು ಮಕ್ಕಳ ತಾರ್ಕಿಕ ಆಲೋಚನೆ ಮತ್ತು ಚಿಂತನೆಗಳನ್ನು ಹಂಚಿಕೊಳ್ಳಲು ಮುಕ್ತ ಅವಕಾಶ ನೀಡುವುದು

**ಮೌಲ್ಯಮಾಪನ:** ಕಲಿಕಾ ಹಾಳೆ 20 ರ, ಚಟುವಟಿಕೆ 1 ಮತ್ತು 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 12

## ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಮತ್ತು ಬ್ರಿಟಿಷ್ ಆಡಳಿತದ ಸುಧಾರಣೆಗಳು

**ಕಲಿಕಾ ಫಲ:** ಬ್ರಿಟೀಷ್ ಆಡಳಿತದ ಸುಧಾರಣೆಗಳು ಮತ್ತು ಭಾರತೀಯರ ಪ್ರತಿಕ್ರಿಯೆಗಳನ್ನು ವಿಶ್ಲೇಷಿಸುವರು .

**ಉದ್ದೇಶಗಳು:**

- ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣಗಳನ್ನು ತಿಳಿದುಕೊಳ್ಳುವರು.
- ಪ್ರಥಮ ಸ್ವಾತಂತ್ರ್ಯದಿಂದ ಉಂಟಾದ ಬದಲಾವಣೆಗಳನ್ನು ಅರ್ಥೈಸಿಕೊಳ್ಳುವರು

### ಕಲಿಕಾ ಹಾಳೆ 21

1. **ಚಟುವಟಿಕೆ:** ಪಠ್ಯ ಪುಸ್ತಕದಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ತಿಳಿದುಕೊಂಡಿದ್ದೀರಲ್ಲವೇ? ಹಾಗಿದ್ದರೆ ಅದರ ಆಧಾರದ ಮೇಲೆ ಕೊಟ್ಟಿರುವ ಖಾಲಿ ಜಾಗದಲ್ಲಿ ಒಂದು ಸಣ್ಣ ಕಥೆಯನ್ನು ಬರೆಯೋಣ.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಮಾಹಿತಿಯ ಆಧಾರದ ಮೇಲೆ ಮಕ್ಕಳು ತಾವೇ ಸ್ವತಃ ಕಥೆಯಿಂದ ರಚಿಸಲು ಪ್ರೇರೇಪಿಸುವುದು. ಕಥೆಯ ರಚನೆಗೆ ಬೇಕಾದ ಸೂಕ್ತ ಮಾರ್ಗದರ್ಶನವನ್ನು ಮಾಡುವುದು.

2. **ಚಟುವಟಿಕೆ:** ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿನಗೆ ಇಷ್ಟವಾದ ಅಂಶಗಳು ಯಾವುದು ಮತ್ತು ಏಕೆ? ನಿನ್ನ ಅಭಿಪ್ರಾಯಗಳನ್ನು ತರಗತಿಯಲ್ಲಿ ಎಲ್ಲರೊಂದಿಗೆ ಹಂಚಿಕೊಳ್ಳಿ ಮತ್ತು ಚರ್ಚಿಸಿ

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಕ್ಕಳಿಗೆ ಇಷ್ಟವಾದ ಸಂಗತಿಗಳನ್ನು ಅಥವಾ ಘಟನೆಗಳನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು ಮತ್ತು ಆ ಸಂಗತಿಗಳು ಮಕ್ಕಳಿಗೆ ಏಕೆ ಇಷ್ಟವಾಯಿತು ಎಂಬುದನ್ನು ಕೇಳುವುದು. ಮಕ್ಕಳ ಅಭಿಪ್ರಾಯಗಳನ್ನು ಗೌರವಿಸಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ವಾಸ್ತವಾಂಶಗಳನ್ನು ಸ್ಪಷ್ಟಪಡಿಸುವುದು.

3. **ಚಟುವಟಿಕೆ:** ಭಾರತದಲ್ಲಿ ಬ್ರಿಟಿಷರು ಮಾಡಿದ ಸುಧಾರಣೆಗಳು ಹಾಗೂ ಅದಕ್ಕೆ ಸಂಬಂಧಿಸಿದ ಕೆಲವು ಪ್ರಮುಖ ಬದಲಾವಣೆಗಳನ್ನು ಕೊಡಲಾಗಿದೆ. ಅವುಗಳನ್ನು ಸರಿಯಾದ ಜಾಗದಲ್ಲಿ ಹೊಂದಿಸಿ ಬರೆಯಿರಿ,

ಹೊಂದಿಸಿ ಬರೆಯಲು ಸೂಕ್ತ ಮಾರ್ಗದರ್ಶನ ನೀಡುವುದು ಮತ್ತು ಪ್ರತಿಯೊಂದು ಸುಧಾರಣೆಗಳನ್ನು ಮಕ್ಕಳೊಂದಿಗೆ ಮಾಹಿತಿಯೊಂದಿಗೆ ಚರ್ಚಿಸಿ ಬ್ರಿಟಿಷರ ಕಾಲದ ಸುಧಾರಣೆಗಳು ಇಂದಿಗೂ ಅಸ್ತಿತ್ವದಲ್ಲಿದೆಯೇ ಎಂಬುದನ್ನು ತಿಳಿಸಬೇಕು ಹಾಗೂ ಯಾವ ಸುಧಾರಣೆಗಳು ಮಕ್ಕಳಿಗೆ ಇಷ್ಟವಾಯಿತು ಮತ್ತು ಏಕೆ ಎಂಬುದನ್ನು ತಿಳಿಸಲು ಅವಕಾಶ ನೀಡುವುದು. ಕೊನೆಯಲ್ಲಿ ಅಂದಿನ ಸುಧಾರಣೆಗಳು ಅದರ ಪರಿಣಾಮಗಳ ಬಗ್ಗೆ ಶಿಕ್ಷಕರು ಕ್ರೂಢೀಕರಿಸುವುದು.

### ಕಲಿಕಾ ಹಾಳೆ 22

1. **ಚಟುವಟಿಕೆ:** ಕೆಳಗೆ ಕೊಟ್ಟಿರುವ ಪಟ್ಟಿಯಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳನ್ನು ಗುರುತಿಸಿ ವಿಂಗಡಿಸಿ ಬರೆಯಿರಿ.

2. ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ಹೋರಾಟದಿಂದ ಆದ ಬದಲಾವಣೆಗಳು ಮತ್ತು ಸುಧಾರಣೆಗಳನ್ನು ಪಠ್ಯಪುಸ್ತಕದ ಸಹಾಯವನ್ನು ಪಡೆದು ಪಟ್ಟಿ ಮಾಡಿ.

3. **ಚಟುವಟಿಕೆ:** ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಇವರಿಬ್ಬರ ಉದ್ದೇಶ, ಸ್ವಾತಂತ್ರಪಡೆಯುವುದೇ ಆಗಿತ್ತು ಹಾಗಿದ್ದರೂ ಇಬ್ಬರೂ ಬೇರೆ ಬೇರೆ ವಿಧಾನದ ಹೋರಾಟಗಳನ್ನು ಮಾಡಿದ್ದೇಕೆ? ಯೋಚಿಸಿ ತರಗತಿಯಲ್ಲಿ ಇದರ ಬಗ್ಗೆ ಶಿಕ್ಷಕರ ಸಹಾಯದಿಂದ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಿ, ಶಾಂತಿಯುತವಾದ ಭಾರತಕ್ಕೆ ಯಾವ ಮಾರ್ಗ ಸೂಕ್ತ ಎಂಬುದನ್ನು ಹೇಳಿ.

4. ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ನಡೆದ ಯಾವುದಾದರೂ ಒಂದು ಹೋರಾಟ/ಬಂದ್/ಚಳುವಳಿಯ ಬಗ್ಗೆ ಮಾಹಿತಿಯನ್ನು ಸಂಗ್ರಹಿಸು ಮತ್ತು ಅದರ ಉದ್ದೇಶ ಮತ್ತು ಪರಿಣಾಮಗಳನ್ನು ಬರೆದು. ನಿನ್ನ ಅಭಿಪ್ರಾಯವನ್ನು ತಿಳಿಸು

**ಮೌಲ್ಯಮಾಪನ:** ಕಲಿಕಾ ಹಾಳೆ 21ರ, ಚಟುವಟಿಕೆ 1ನ್ನು ಮತ್ತು ಕಲಿಕಾ ಹಾಳೆ 22 ರ ಚಟುವಟಿಕೆ 3ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 13

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**ಕಲಿಕಾ ಫಲ:** ಬ್ರಿಟಿಷರ ಆಡಳಿತಾವಧಿಯಲ್ಲಿ ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರ ಬಗ್ಗೆ ತಿಳಿದುಕೊಳ್ಳುವರು

**ಉದ್ದೇಶಗಳು:**

- ಬ್ರಿಟಿಷರ ಕಾಲದಲ್ಲಿದ್ದ ಸಾಮಾಜಿಕ ಮತ್ತು ಧಾರ್ಮಿಕ ಮೌಢ್ಯತೆಗಳನ್ನು ತಿಳಿದುಕೊಳ್ಳುವುದು
- ಸಾಮಾಜಿಕ ಮತ್ತು ಧಾರ್ಮಿಕ ಸುಧಾರಕರ ಪರಿಶ್ರಮ ಮತ್ತು ಸುಧಾರಣೆಗಳನ್ನು ಅರ್ಥ ಮಾಡಿಕೊಳ್ಳುವುದು.
- ಪ್ರಸ್ತುತ ದಿನಗಳಲ್ಲಿನ ಸಾಮಾಜಿಕ ಮತ್ತು ಧಾರ್ಮಿಕ ಮೌಢ್ಯತೆಗಳ ಬಗ್ಗೆ ಅಭಿಪ್ರಾಯ ಹಂಚಿಕೊಳ್ಳುವರು.

### ಕಲಿಕಾ ಹಾಳೆ 23

1. **ಚಟುವಟಿಕೆ:** ಕೆಳಗೆ ಕೊಟ್ಟಿರುವ ಖಾಲಿ ಜಾಗದಲ್ಲಿ ಬ್ರಿಟಿಷರ ಆಡಳಿತಾವಧಿಯಲ್ಲಿನ ಪ್ರಮುಖ ಸಾಮಾಜಿಕ ಸುಧಾರಕರ ಚಿತ್ರಗಳನ್ನು ಸಂಗ್ರಹಿಸಿ ಅಂಟಿಸಿ. ಅವರ ಹೆಸರನ್ನು ಬರೆಯಿರಿ.

ಚಿತ್ರಗಳ ಸಂಗ್ರಹಕ್ಕೆ ಕಾಲಾವಕಾಶ ನೀಡುವುದು. ಚಿತ್ರಗಳ ಜೊತೆಗೆ ಪುಸ್ತಕಗಳ ಸಹಾಯದಿಂದ ಮಕ್ಕಳೇ ಮಾಹಿತಿಯನ್ನು ಕಲೆಹಾಕಲು ಉತ್ತೇಜನ ನೀಡಬೇಕು. ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿನಿಂದ ಒಬ್ಬೊಬ್ಬರ ಬಗ್ಗೆ ಅಭಿಪ್ರಾಯ ಹಂಚಿಕೊಳ್ಳಲು ಸಮಯ ಮತ್ತು ಅವಕಾಶ ಒದಗಿಸಬೇಕು.

2. **ಚಟುವಟಿಕೆ:** ಕೆಳಗೆ ಕೆಲವು ಸಮಾಜ ಸುಧಾರಕರಿಗೆ ಸಂಬಂಧಿಸಿದ ಸಂಸ್ಥೆಗಳ ಹೆಸರನ್ನು ನೀಡಲಾಗಿದೆ. ನೀವು ಅದು ಯಾವ ಸಮಾಜ ಸುಧಾರಕರಿಗೆ ಸಂಬಂಧಿಸಿದ್ದು, ಅದರ ಪ್ರಮುಖ ತತ್ವವೇನು ಹಾಗೂ ಆ ಸಂಸ್ಥೆಯ ಸುಧಾರಣೆಗಳನ್ನು ಪಟ್ಟಿ ಮಾಡುವಿರಾ?

ಸಮಾಜ ಸುಧಾರಕರು ಸ್ಥಾಪಿಸಿದ ಸಂಸ್ಥೆಗಳ ಉದ್ದೇಶ ಮತ್ತು ಮಹತ್ವವನ್ನು ಅರ್ಥ ಮಾಡಿಸುವುದು.

ಅವರ ತತ್ವಗಳು ಇಂದಿಗೆ ಹೇಗೆ ಪ್ರಯೋಜನಕಾರಿ ಎಂಬುದನ್ನು ತಿಳಿಸಿಕೊಡಬೇಕು ಮತ್ತು ಅವರ ತತ್ವಾದರ್ಶಗಳನ್ನು ಅರ್ಥಮಾಡಿಸಿ ಮಕ್ಕಳ ತಾರ್ಕಿಕ ಆಲೋಚನೆಗಳನ್ನು ತಿಳಿದು ತತ್ವಾದರ್ಶಗಳ ಪಾಲನೆಯನ್ನು ಮಕ್ಕಳ ವಿವೇಚನೆಗೆ ಬಿಡುವುದು.

3. **ಚಟುವಟಿಕೆ:** ಮಕ್ಕಳೇ, ಇಂದಿನ ಕಾಲದಲ್ಲಿಯೂ ನಮ್ಮ ಸುತ್ತಮುತ್ತಲಿನ ಅನೇಕ ಸಾಮಾಜಿಕ, ಧಾರ್ಮಿಕ, ರಾಜಕೀಯ ಮುಂತಾದ ಅನೇಕ ಕ್ಷೇತ್ರಗಳಲ್ಲಿ ಸುಧಾರಣೆಯನ್ನು ತರುವ ಸಲುವಾಗಿ ಅನೇಕ ಸಂಘಟನೆಗಳು ಕಾರ್ಯನಿರ್ವಹಿಸುತ್ತಿವೆ ಅಲ್ಲವೇ, ಹಾಗಾದರೆ ನೀವು ಯಾವುದಾದರೂ 5 ಪ್ರಮುಖ ಸಂಸ್ಥೆಗಳ ಹೆಸರನ್ನು ತಿಳಿದು ಮಾಹಿತಿಯನ್ನು ಸಂಗ್ರಹಿಸಿ ಅದರ ಪ್ರಮುಖ ಉದ್ದೇಶವನ್ನು ಬರೆಯುವಿರಾ?

ಸಾಮಾಜಿಕ ಮತ್ತು ಧಾರ್ಮಿಕ ಮೌಢ್ಯತೆಗಳು ಮತ್ತು ಆಚರಣೆಗಳು ಎಲ್ಲಾ ಕಾಲದಲ್ಲಿಯೂ ಅಸ್ತಿತ್ವದಲ್ಲಿವೆ ಎಂಬುದನ್ನು ಮನದಟ್ಟು ಮಾಡಿಸಬೇಕು. ಇವುಗಳ ಸುಧಾರಣೆಗಾಗಿ ಇಂದು ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳ ಪರಿಚಯ ಮಾಡಿಸಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 23 ರ ಚಟುವಟಿಕೆ 2ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 14

## ಗಾಂಧಿಯುಗ

**ಕಲಿಕಾ ಫಲ:** ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಅಹಿಂಸಾ ಮಾರ್ಗವನ್ನು ಅರಿತುಕೊಳ್ಳುವರು.

**ಉದ್ದೇಶಗಳು:**

- ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಪಾತ್ರವನ್ನು ವಿಶ್ಲೇಷಿಸುವುದು
- ಗಾಂಧೀಜಿಯವರ ಸತ್ಯ ಮತ್ತು ಅಹಿಂಸಾ ಮಾರ್ಗಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಹೇಗೆ ಪ್ರಭಾವ ಬೀರಿದವು ಎಂಬುದನ್ನು ಅರ್ಥ ಮಾಡಿಕೊಂಡು ತಮ್ಮ ದೈನಂದಿನ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುವುದು.

ಸ್ವಾತಂತ್ರ್ಯ ಚಳುವಳಿಯಲ್ಲಿ ಗಾಂಧೀಜಿಯವರ ಪಾತ್ರ ಬಹಳ ಮುಖ್ಯವಾದುದು. ಸತ್ಯ ಮತ್ತು ಅಹಿಂಸೆ ಎಂಬ ಎರಡು ಅಸ್ತ್ರಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ಬಹಳ ಪ್ರಭಾವ ಬೀರದವು. ಇಲ್ಲಿ ಗಾಂಧೀಜಿಯವರ ಜೀವನ, ಹೋರಾಟಗಳನ್ನು ಅರಿಯುವುದಷ್ಟೇ ನಮ್ಮ ಗುರಿಯಾಗಿರದೇ ಅವರ ತತ್ವಾದರ್ಶಗಳನ್ನು ನಮ್ಮ ದೈನಂದಿನ ಜೀವನಗಳಲ್ಲಿ ಅಳವಡಿಸಿಕೊಳ್ಳುವಂತಾಗಬೇಕೆಂಬುದು ಈ ಕಲಿಕಾ ಫಲದ ಆಶಯವಾಗಿದೆ.

## ಕಲಿಕಾ ಹಾಳೆ 24

1. ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾತ್ಮ ಗಾಂಧೀಜಿಯವರು ಅಹಿಂಸಾ ಮಾರ್ಗವನ್ನು ಅನುಸರಿಸಲು ಕಾರಣವೇನು? ಕೇಳಿ ತಿಳಿದು ನಿನ್ನ ಅಭಿಪ್ರಾಯವನ್ನು ತಿಳಿಸು.

ಗಾಂಧೀಜಿಯವರು ಅಹಿಂಸಾ ಮಾರ್ಗವನ್ನು ಅನುಸರಿಸಲು ಕಾರಣವಾದ ಘಟನೆಗಳನ್ನು, ಸನ್ನಿವೇಶಗಳನ್ನು ತಿಳಿಸಿಕೊಡುವುದು ಮತ್ತು ಮಕ್ಕಳ ಅಭಿಪ್ರಾಯಗಳ ಆಧಾರದ ಮೇಲೆ ಚರ್ಚೆ ಮಾಡಿ ಅಹಿಂಸಾ ಮಾರ್ಗದ ಮಹತ್ವವನ್ನು ತಿಳಿಸಿಕೊಡುವುದು.

2. ಭಾರತವು ಸ್ವಾತಂತ್ರ್ಯ ಪಡೆಯುವಲ್ಲಿ ಈ ಕೆಳಗೆ ನೀಡಲಾದ ಚಳುವಳಿಗಳ ಕೊಡುಗೆಗಳೇನು ಎಂಬುದನ್ನು ತಿಳಿಸುವೆಯಾ?

ಚಟುವಟಿಕೆ ನಂತರ ಅಸಹಕಾರ ಮತ್ತು ಕಾನೂನುಭಂಗ ಚಳುವಳಿಗಳ ತಂತ್ರಗಳ ಬಗ್ಗೆ ವಿಶ್ಲೇಷಣೆ ಮಾಡುವುದು ಮತ್ತು ಇಂದಿನ ಹೋರಾಟಗಳಲ್ಲಿ ಅಥವಾ ಚಳುವಳಿಗಳಲ್ಲಿ ಈ ತಂತ್ರಗಳು ಎಷ್ಟು ಸೂಕ್ತ ಎಂದು ಚರ್ಚೆ ಮಾಡುವುದು.

3. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಕರ್ನಾಟಕದ ಪ್ರಮುಖ ವ್ಯಕ್ತಿಗಳ ಚಿತ್ರಗಳನ್ನು ಸಂಗ್ರಹಿಸಿ, ಕೊಟ್ಟಿರುವ ಖಾಲಿ ಜಾಗದಲ್ಲಿ ಅಂಟಿಸಿ ಮತ್ತು ಶಿಕ್ಷಕರ ಸಹಾಯವನ್ನು ಪಡೆದುಕೊಂಡು ಅವರ ಹೋರಾಟದ ಇತಿಹಾಸವನ್ನು ಸಂಕ್ಷಿಪ್ತವಾಗಿ ಬರೆದು ಚಾರ್ಟ್ ಮಾಡಿ ಗೋಡೆಯಲ್ಲಿ ಹಾಕಿ ಪ್ರದರ್ಶಿಸಿ.

ಭಾರತದ ಸ್ವಾತಂತ್ರ ಹೋರಾಟದಲ್ಲಿ ವಿವಿಧ ಪ್ರಾಂತ್ಯಗಳ ನಾಯಕರುಗಳು ಭಾಗವಹಿಸಿದ್ದರು ಎಂಬುದು ತಿಳಿಯಬೇಕು. ಇದರ ಜೊತೆಗೆ ಅವರ ವಿಷಯವನ್ನು ಚಿತ್ರಸಹಿತ ಚಾರ್ಟ್ ಮಾಡಿಸಿ ಅವರ ಹಿನ್ನೆಲೆ ಮತ್ತು ಇತಿಹಾಸವನ್ನು ತಿಳಿಸಿಕೊಡಬೇಕು. ಇಂತಹ ನಾಯಕರು ಮತ್ತು ಲಕ್ಷಾಂತರ ಸಾರ್ವಜನಿಕರು, ಹೇಗೆ ಈ ಹೋರಾಟದಲ್ಲಿ ಭಾಗಿಯಾಗಿದ್ದರು ಎಂಬ ಅಂಶವನ್ನು ಸಹ ತಿಳಿಸಬೇಕು.

ಈ ಕಲಿಕಾಂಶದಲ್ಲಿ ಗಾಂಧೀಜಿಯವರ ಜೀವನ ಚರಿತ್ರೆ ಮತ್ತು ಚಳುವಳಿಗೆ ಸಂಬಂಧಿಸಿದ ಡಾಕ್ಯುಮೆಂಟರಿ ಅಥವಾ ವಿಡಿಯೋಗಳನ್ನು ಪ್ರದರ್ಶಿಸಬೇಕು.

ಇಂದು ನಡೆಯುತ್ತಿರುವ ಅನೇಕ ರೈತ ಚಳುವಳಿಗಳು, ವಿದ್ಯಾರ್ಥಿ ಚಳುವಳಿಗಳು, ಕಾರ್ಮಿಕ ಚಳುವಳಿಗಳು ಜನರ ದಿನನಿತ್ಯದ ಜೀವನದ ಮೇಲೆ ಹೇಗೆ ಪರಿಣಾಮ ಬೀರುತ್ತದೆ? ಗಾಂಧೀಜಿಯವರು ಅನುಸರಿಸಿದ ಸತ್ಯಾಗ್ರಹದ ತಂತ್ರಗಳು, ಶಾಂತಿ, ಅಹಿಂಸಾ ಮಾರ್ಗವು ಯಾವುದೇ ರೀತಿಯ ಹೋರಾಟಗಳಲ್ಲಿ ಹೆಚ್ಚು ಪ್ರಭಾವಶಾಲಿ ಎಂಬುದನ್ನು ಅರ್ಥಮಾಡಿಸುವುದು

**ಮೌಲ್ಯಮಾಪನ:** ಕಲಿಕಾ ಹಾಳೆ 24 ರ ಚಟುವಟಿಕೆ 2 ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 15

## ಕರ್ನಾಟಕ ಏಕೀಕರಣ ಮತ್ತು ಗಡಿವಿವಾದಗಳು

**ಕಲಿಕಾ ಫಲ:** ಕರ್ನಾಟಕದ ಏಕೀಕರಣದ ಚಳುವಳಿಯ ಇತಿಹಾಸ ಮತ್ತು ಗಡಿವಿವಾದಗಳ ಬಗ್ಗೆ ತಿಳಿದುಕೊಳ್ಳುವರು

**ಉದ್ದೇಶಗಳು:**

- ಇಂದಿನ ಕರ್ನಾಟಕ ರಾಜ್ಯ ರೂಪುಗೊಳ್ಳಲು ಕಾರಣವಾದ ಚಳುವಳಿಯ ಇತಿಹಾಸವನ್ನು ತಿಳಿದುಕೊಳ್ಳುವುದು.
- ಗಡಿ ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳಬೇಕು ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ಬೆಳೆಸುವುದು.

ಕರ್ನಾಟಕವು ಭಾಷಾ ಆಧಾರದ ಮೇಲೆ ರಚಿತವಾಗಿದ್ದರೂ ಸಹ ಉದ್ಯೋಗ ಅಥವಾ ಇನ್ನಿತರ ಕಾರಣಗಳಿಂದಾಗಿ ಕರ್ನಾಟಕದಲ್ಲಿ ಇಂದಿಗೂ ವಿವಿಧ ಭಾಷೆ, ಧರ್ಮಗಳಿಂದ ಕೂಡಿದ ಜನರು ವಾಸ ಮಾಡುತಿದ್ದಾರೆ. ಕನ್ನಡ ಭಾಷಿಗರು ಸಹ ಬೇರೆ ಬೇರೆ ರಾಜ್ಯಗಳಲ್ಲಿ ವಾಸಿಸುತ್ತಿದ್ದಾರೆ. ಹಾಗಾಗಿ ಭಾಷೆ ಆಧಾರದ ಮೇಲೆ ಪರಸ್ಪರ ಸಂಘರ್ಷಗಳನ್ನು ಮಾಡಿಕೊಳ್ಳದೇ ಶಾಂತಿಯುತ ಮತ್ತು ಸಹಬಾಳ್ವೆಯ ಮೂಲಕ ಸಂವಿಧಾನದ ಆಶಯಗಳಾದ ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವಗಳನ್ನು ಅಳವಡಿಸಿಕೊಳ್ಳಲು ಈ ಕಲಿಕಾಂಶವು ಆದ್ಯತೆ ನೀಡಬೇಕು.

## ಕಲಿಕಾ ಹಾಳೆ 25

1. **ಚಟುವಟಿಕೆ:** ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಭಾಗವಹಿಸಿದ ಪ್ರಮುಖ ವ್ಯಕ್ತಿಗಳು ಹಾಗೂ ಸಂಘ ಸಂಸ್ಥೆಗಳ ಹೆಸರನ್ನು ಪಟ್ಟಿ ಮಾಡುವಿರಾ?

ಪಠ್ಯ ಪುಸ್ತಕದ ಸಹಾಯದಿಂದ ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದ ಪ್ರಮುಖ ವ್ಯಕ್ತಿಗಳು ಮತ್ತು ಸಂಘ-ಸಂಸ್ಥೆಗಳನ್ನು ಪಟ್ಟಿ ಮಾಡಿಸುವುದು. ಇಂದು ಕರ್ನಾಟಕದಲ್ಲಿರುವ ಭಾಷಾ ಸಂಘಟನೆಗಳನ್ನು ಪಟ್ಟಿ ಮಾಡಿಸಿ ಭಾಷಾ ಉಳಿವಿಗಾಗಿ ಈ ಸಂಘಟನೆಗಳು ಮಾಡುತ್ತಿರುವ ಕಾರ್ಯಗಳ ಬಗ್ಗೆ ಮಕ್ಕಳೊಂದಿಗೆ ಮಾತುಕತೆ ನಡೆಸುವುದು

2. ಕರ್ನಾಟಕ ಏಕೀಕರಣ ಚಳುವಳಿಯ ಬಗ್ಗೆ ಒಂದು ಕಥೆಯನ್ನು ರಚಿಸಿ.

ಕರ್ನಾಟಕ ಏಕೀಕರಣದ ಕುರಿತು ಪಠ್ಯ ಪುಸ್ತಕದ ಮಾಹಿತಿ ಆಧಾರದ ಮೇಲೆ ಮಕ್ಕಳೇ ಸ್ವತಃ ಕಥೆಯನ್ನು ಬರೆಯಲು ಪ್ರೇರೇಪಿಸುವುದು. ಕಥೆಯನ್ನು ಹೇಗೆ ಪ್ರಾರಂಭಿಸಬೇಕು, ಮುಂದುವರಿಸಬೇಕು ಮತ್ತು ಅಂತ್ಯ ಮಾಡಬೇಕು ಎಂಬ ಮಾರ್ಗದರ್ಶನವನ್ನು ಮಕ್ಕಳಿಗೆ ಒದಗಿಸಿಕೊಡಬೇಕು.

3. ಭಾರತದ ನಕ್ಷೆಯನ್ನು ಬರೆದು 1956 ಕ್ಕಿಂತ ಮೊದಲು ಅಸ್ಥಿತ್ವದಲ್ಲಿದ್ದ ಮುಂಬೈ, ಮದ್ರಾಸ್, ಮೈಸೂರು, ಹೈದರಾಬಾದ್ ಮತ್ತು ಕೊಡಗು ಪ್ರಾಂತ್ಯಗಳನ್ನು ಗುರುತಿಸಿ ಬರೆಯಿರಿ.

ನಕ್ಷೆಯ ಚಟುವಟಿಕೆಯಲ್ಲಿ ಸ್ಥಳಗಳನ್ನು ಗುರುತಿಸಲು ಸಹಾಯ ಮಾಡುವುದು ಮತ್ತು 1956 ಕಿಂತ ಮೊದಲು, 1956 ನಂತರ ಮತ್ತು ಪ್ರಸ್ತುತ ಕರ್ನಾಟಕದ ನಕ್ಷೆಗಳನ್ನು ಬಳಸಿ ಬದಲಾವಣೆಗಳನ್ನು ಗುರುತಿಸಲು ಸಹಾಯ ಮಾಡುವುದು.

4. **ಚಟುವಟಿಕೆ:** ಕರ್ನಾಟಕ ರಾಜ್ಯವು ಗಡಿ ವಿವಾದವನ್ನು ಹೊಂದಿರುವ ರಾಜ್ಯಗಳು ಮತ್ತು ಸ್ಥಳಗಳ ಹೆಸರನ್ನು ಪಟ್ಟಿ ಮಾಡು. ಆ ಸ್ಥಳಗಳನ್ನು ಭಾರತದ ನಕಾಶೆಯಲ್ಲಿ ಸ್ನೇಹಿತರೊಂದಿಗೆ ಗುರುತಿಸಿ ತಿಳಿದುಕೊಳ್ಳಿ.

ಭಾರತದ ನಕ್ಷೆಯಲ್ಲಿ ವಿವಿಧ ರಾಜ್ಯಗಳ ಗಡಿವಿವಾದಗಳಿರುವ ಪ್ರದೇಶಗಳನ್ನು ಗುರುತಿಸಿ, ಸಮಸ್ಯೆಗೆ ಕಾರಣಗಳು ಮತ್ತು ಪರಿಹಾರಗಳ ಬಗ್ಗೆ ಚರ್ಚಿಸುವುದು.

5. ನಿನ್ನ ಕುಟುಂಬದ ಹಿರಿಯರು ಮತ್ತು ಶಿಕ್ಷಕರ ಜೊತೆ ಚರ್ಚೆ ಮಾಡಿ ನಂತರ ಕರ್ನಾಟಕದ ಗಡಿ ವಿವಾದಗಳನ್ನು ಹೇಗೆ ಬಗೆಹರಿಸಲು ನಿನ್ನ ಸಲಹೆಗಳನ್ನು ನೀಡು.

ತರಗತಿಯಲ್ಲಿ ಗಡಿ ವಿವಾದದ ಸಮಸ್ಯೆಗಳ ಪರಿಹಾರಕ್ಕೆ ಇರುವ ಮಾರ್ಗಗಳ ಬಗ್ಗೆ ಮಕ್ಕಳ ಸಲಹೆಯನ್ನು ಪಡೆಯುವುದು ಅವುಗಳನ್ನು ಕ್ರೂಢೀಕರಿಸಿ ಮಾತುಕತೆ, ಅಹಿಂಸೆ ಮಾರ್ಗಗಳು ಸೂಕ್ತ ಎಂಬುದನ್ನು ಮನದಟ್ಟು ಮಾಡಿಸುವುದು. ಮತ್ತು ನಮ್ಮ ದೈನಂದಿನ ಜೀವನದಲ್ಲಿ ನಡೆಯುವ ಭೂ ವಿವಾದಗಳು, ವೈಯಕ್ತಿಕ ಸಂಘರ್ಷಗಳು ಮುಂತಾದವುಗಳಿಗೆ ಶಾಂತಿಯುತ ಮಾತುಕತೆಯೇ ಸರಳ ಉಪಾಯವೆಂಬುದು ಮಕ್ಕಳಿಗೆ ಮನವರಿಕೆಯಾಗಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 25 ರ ಚಟುವಟಿಕೆ 2 ಮತ್ತು 4ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಭೂಗೋಳಶಾಸ್ತ್ರ

### ಕಲಿಕಾಂಶ 16–ದಿಕ್ಕುಗಳು

**ಕಲಿಕಾ ಫಲ:** ದಿಕ್ಕುಗಳ ಬಗ್ಗೆ ಅರಿಯುತ್ತಾರೆ ಮತ್ತು ದಿನ ನಿತ್ಯದ ಜೀವನದಲ್ಲಿ ಅನ್ವಯಿಸಿಕೊಳ್ಳುತ್ತಾರೆ.

**ಉದ್ದೇಶ:** ದಿಕ್ಕುಗಳನ್ನು ಗುರುತಿಸುವರು ಮತ್ತು ದಿನನಿತ್ಯದ ಜೀವನದಲ್ಲಿ ಬಳಸುವರು

**ಕಲಿಕಾ ಸಾಮಗ್ರಿಗಳು:** ಭೂಪಟಗಳು, ದಿಕ್ಸೂಚಿ

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ದಿಕ್ಕುಗಳ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆದು ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು. ನಂತರ ದಿಕ್ಕುಗಳನ್ನು ಗುರುತಿಸುವ ಚಟುವಟಿಕೆಯ ಮೂಲಕ ದಿಕ್ಕುಗಳನ್ನು ಪರಿಚಯಿಸುವುದು. ತದನಂತರ ದಿಕ್ಸೂಚಿ ಬಳಸಿ ದಿಕ್ಕುಗಳನ್ನ ಗುರುತಿಸುವುದನ್ನು ಅರ್ಥೈಸುವುದು. ಮಕ್ಕಳಿಗೆ ದಿಕ್ಕುಗಳ ಆಟವನ್ನು ಆಡಿಸುವುದು ಮತ್ತು ಭೂಪಟಬಳಸಿ, ಸ್ಥಳಗಳನ್ನು ಹೇಳಿ, ದಿಕ್ಕುಗಳನ್ನು ಗುರುತಿಸುವ ಚಟುವಟಿಕೆ ಮಾಡಿಸುವುದು. ಶಾಲೆ ಮತ್ತು ತನ್ನ ಮನೆಯ ಸುತ್ತಮುತ್ತಲಿನ ಸ್ಥಳಗಳ ದಿಕ್ಕುಗಳನ್ನು ಗುರುತಿಸಲು ಹೇಳುವುದು ಜೊತೆಗೆ ದಿಕ್ಕುಗಳ ಮಹತ್ವದ ಬಗ್ಗೆ ಅರ್ಥೈಸುವುದು.

### ಕಲಿಕಾ ಹಾಳೆ 26

**1. ಚಟುವಟಿಕೆ:** ದಿಕ್ಕುಗಳ ಬಗ್ಗೆ ನೀವು ಕೇಳಿದ್ದೀರಲ್ಲವೇ? ನಿಮಗೆಷ್ಟು ಗೊತ್ತು ಹೇಳಿ, ನೋಡೋಣ ಎಂಬ ಪಶ್ನೆಯಿದೆ. ಇದರಿಂದ ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು

**2. ಚಟುವಟಿಕೆ:** ದಿಕ್ಕು ಗುರುತಿಸೋಣವೇ. ಚಿತ್ರವನ್ನು ಗಮನಿಸಲು ಹೇಳುವುದು. ನಂತರ ಅದರ ಮೇಲೆ ಪ್ರಶ್ನೆಗಳನ್ನು ಕೇಳಿ ದಿಕ್ಕುಗಳನ್ನು ಮಕ್ಕಳಿಗೆ ಅರ್ಥೈಸಿಕೊಳ್ಳಲು ಅವಕಾಶ ನೀಡುವುದು.

**3. ಚಟುವಟಿಕೆ:** ಚಟುವಟಿಕೆ: ದಿಕ್ಕುಗಳ ಆಟ ಆಡೋಣ ಬನ್ನಿ

ಮಕ್ಕಳನ್ನು ಸೂಚನೆಯಂತೆ ಚಿತ್ರನೋಡಿ ದಿಕ್ಕುಗಳ ಆಟ ಆಡಲು ಹೇಳುವುದು ಮತ್ತು ಶಾಲೆಯ ಮೈದಾನದಲ್ಲಿ ಮಕ್ಕಳಿಗೆ ಇದೇ ರೀತಿ ಆಟ ಆಡಿಸುವುದು.

### ಕಲಿಕಾ ಹಾಳೆ 27

1. **ಚಟುವಟಿಕೆ:** ದಿಕ್ಸೂಚಿಯ ಜೊತೆ ಆಟವಾಡೋಣ ಬನ್ನಿ

ದಿಕ್ಸೂಚಿಯನ್ನು ಮಕ್ಕಳಿಗೆ ಪರಿಚಯಿಸುವುದು. ನಂತರ ದಿಕ್ಸೂಚಿ ಬಳಸಿ ದಿಕ್ಕುಗಳನ್ನು ಗುರುತಿಸಲು ಹೇಳುವುದು. ದಿಕ್ಸೂಚಿಯ ಸಹಾಯದಿಂದ ನಿಮ್ಮ ಶಾಲೆಯ ವಿವಿಧ ಭಾಗಗಗಳನ್ನು ಗುರುತಿಸುವುದು. ಅಗತ್ಯವಿರುವ ಕಡೆ ಮಾರ್ಗದರ್ಶನವನ್ನು ನೀಡುವುದು ಮತ್ತು ದಿಕ್ಸೂಚಿ ಬಳಕೆಯ ಮಹತ್ವದ ಬಗ್ಗೆ ಚರ್ಚಿಸುವುದು.

2. **ಚಟುವಟಿಕೆ:** ಭೂಪಟದಲ್ಲಿ ದಿಕ್ಕುಗಳನ್ನು ತಿಳಿಯೋಣ ಮತ್ತು ಪ್ರಶ್ನೆಗೆ ಉತ್ತರಿಸೋಣ (ಸಹಾಯಕ್ಕಾಗಿ ನಿಮ್ಮ ಬಳಿ ಭಾರತದ ಭೂಪಟವನ್ನು ಇಟ್ಟುಕೊಳ್ಳಿ)

ರಾಜಕಿಯ ಭೂಪಟವನ್ನು ನೆಲದ ಮೇಲೆ ದಿಕ್ಕುಗಳ ಅನುಸಾರ ಇಡಲು ಹೇಳುವುದು. ನಂತರ ಚಟುವಟಿಕೆಯಲ್ಲಿ ಸೂಚಿಸಿರುವಂತೆ ದಿಕ್ಕುಗಳನ್ನು ಗುರುತಿಸಲು ಅವಕಾಶ ನೀಡುವುದು. ದಿನನಿತ್ಯ ಜೀವನದಲ್ಲಿ ದಿಕ್ಕುಗಳ ಮಹತ್ವದ ಬಗ್ಗೆ ಚರ್ಚಿಸಿ ಅರ್ಥೈಸುವುದು.

ಇದೇ ರೀತಿ ನಿಮ್ಮ ಊರು, ತಾಲೂಕು, ಜಿಲ್ಲೆ, ಮುಂತಾದ ನಕ್ಷೆಗಳನ್ನು ಬಳಸಿಕೊಂಡು ನಿಮ್ಮ ಸ್ನೇಹಿತರೊಂದಿಗೆ ಇದೇ ರೀತಿಯ ದಿಕ್ಕುಗಳ ಆಟ ಆಡುತ್ತಾ ಇನ್ನೂ ಹೆಚ್ಚು ತಿಳಿದುಕೊಳ್ಳಲು ಅವಕಾಶ ಒದಗಿಸುವುದು

- ಇದರ ಬಗ್ಗೆಯೂ ತಿಳಿದುಕೊಳ್ಳಿ!

ಕಟ್ಟಡಗಳನ್ನು ಕಟ್ಟುವಾಗ ಜನರು ದಿಕ್ಕುಗಳ ಬಗ್ಗೆ ಹೆಚ್ಚು ಗಮನ ನೀಡುತ್ತಾರೆ ಎಂಬುದಕ್ಕೆ ಮಕ್ಕಳೆ ಉತ್ತರಗಳನ್ನು ಹುಡುಕಲು ಅವಕಾಶ ಮಾಡಿಕೊಡಿ, ನಂತರ ಅದರ ಹಿಂದಿನ ವೈಜ್ಞಾನಿಕ ಕಾರಣಗಳನ್ನು ಮಕ್ಕಳಗೆ ಸ್ಪಷ್ಟಪಡಿಸಿ.

**ಮೌಲ್ಯಮಾಪನ:** ಕಲಿಕಾ ಹಾಳೆ 26 ರ ಚಟುವಟಿಕೆ 2ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 17

## ನಕಾಶೆಗಳು

**ಕಲಿಕಾಫಲ:** ನಕ್ಷೆಯನ್ನು ಓದುವ ಕೌಶಲಗಳನ್ನು ಅರಿತು, ನಕ್ಷೆಯನ್ನು ರಚಿಸುವರು

**ಉದ್ದೇಶಗಳು:**

- ನಕ್ಷೆಯ ಅಗತ್ಯ ಅಂಶಗಳ ಬಗ್ಗೆ ತಿಳಿಯುವರು
- ನಕ್ಷೆಯ ವಿಧಗಳ ಬಗ್ಗೆ ಮತ್ತು ಅವುಗಳ ವಿಶೇಷತೆಯ ಬಗ್ಗೆ ಅರಿಯುವರು.
- ನಕ್ಷೆಯನ್ನು ಓದುವ ಮತ್ತು ರಚಿಸುವ ಕೌಶಲ್ಯವನ್ನು ಬೆಳೆಸಿಕೊಳ್ಳುವರು

**ಪ್ರಕ್ರಿಯೆ:** ಸುಗಮಕಾರರು ಮೊದಲಿಗೆ ನಕ್ಷೆ ಬಗ್ಗೆ ಕೆಲವು ಪ್ರಶ್ನೆಗಳನ್ನು ಕೇಳಿ ಮಕ್ಕಳಿಂದ ಪ್ರತಿಕ್ರಿಯೆ ಪಡೆದು ಮಕ್ಕಳ ಪೂರ್ವಜ್ಞಾನವನ್ನು ತಿಳಿಯುವುದು. ಮಕ್ಕಳನ್ನು ಗುಂಪುಗಳಾಗಿ ಮಾಡಿ ನಕ್ಷೆಯನ್ನು ನೀಡಿ ನಕ್ಷೆಯ ಅಂಶಗಳನ್ನು ಗುರುತಿಸಲು ಹೇಳುವುದು ಮತ್ತು ಎಲ್ಲರೂ ಮಂಡಿಸಲು ಅವಕಾಶ ನೀಡುವುದು. ನಂತರ ಭೂಪಟವನ್ನು ಬಳಸಿ ಮಕ್ಕಳನ್ನು ಪ್ರಶ್ನಿಸುತ್ತ ನಕ್ಷೆಯ ಅಗತ್ಯಾಂಶಗಳು ಮತ್ತು ಅವುಗಳ ಮಹತ್ವವನ್ನು ಅರಿಯಲು ಅವಕಾಶ ನೀಡುವುದು. ತದನಂತರ ಮಕ್ಕಳನ್ನು ಗುಂಪು ಮಾಡಿ ವಿವಿಧ ವಿಧದ ನಕ್ಷೆಗಳನ್ನು ನೀಡಿ ಅವುಗಳ ನಡುವೆ ಇರುವ ವ್ಯತ್ಯಾಸಗಳನ್ನು ಪಟ್ಟಿಮಾಡಲು ಹೇಳುವುದು. ಮಕ್ಕಳು ಪಟ್ಟಿ ಮಾಡಿದ ಅಂಶಗಳನ್ನು ತೆಗೆದುಕೊಂಡು ನಕ್ಷೆಯ ವಿಧಗಳನ್ನು ಅರ್ಥೈಸುವುದು ಜೊತೆಗೆ ಯಾವ ನಕ್ಷೆಯಿಂದ ಯಾವ ಮಾಹಿತಿಯನ್ನು ಪಡೆಯಬಹುದು ಎಂಬುದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದು. ನಕ್ಷೆ ಓದುವ ಕೌಶಲ್ಯವನ್ನು ಅರ್ಥೈಸಿಕೊಂಡ ನಂತರ ನಕ್ಷೆ ರಚಿಸುವ ಚಟುವಟಿಕೆ ಮಾಡಿಸುವುದು ಇದಕ್ಕೆ ಅಗತ್ಯ ಮಾರ್ಗದರ್ಶನವನ್ನು ನೀಡುವುದು. ಭೂಗೋಳದ ತರಗತಿಯಲ್ಲಿ ನಕ್ಷೆ ಅಥವಾ ಮ್ಯಾಪ್ ಬಳಸುವುದು ಬಹುಮುಖ್ಯ. ಮ್ಯಾಪ್ ಅಥವಾ ನಕ್ಷೆ ಇಲ್ಲದೆ ಭೂಗೋಳದ ತರಗತಿ ಅಪೂರ್ಣ ಎನ್ನುವುದನ್ನು ಸುಗಮಕಾರರು ಅರ್ಥಮಾಡಿಕೊಳ್ಳಬೇಕು.

### ಕಲಿಕಾ ಹಾಳೆ 28

1. **ಚಟುವಟಿಕೆ:** ನಕ್ಷೆಯನ್ನು ಒಮ್ಮೆ ಗಮನಿಸೋಣ ಮತ್ತು ಪಟ್ಟಿ ಮಾಡೋಣ.

2. **ಚಟುವಟಿಕೆ:** ನಕ್ಷೆಯನ್ನು ಒಮ್ಮೆ ನೋಡಿ ಹೇಳೋಣ: (ಭಾರತದ ರಾಜಕಿಯ ಭೂಪಟವನ್ನು ಬಳಸಿಕೊಳ್ಳುವುದು)

ನಕಾಶೆಯಲ್ಲಿರುವ ಪ್ರಮುಖ ಅಂಶಗಳನ್ನು ಪಟ್ಟಿಮಾಡಿಸುವುದು ಮತ್ತು ಅವುಗಳು ಏನನ್ನು ಸೂಚಿಸುತ್ತವೆ ಎಂಬುದನ್ನು ಅರ್ಥಮಾಡಿಸುವುದು. ಮಕ್ಕಳು ನಕಾಶೆಗಳನ್ನು ರಚಿಸುವಾಗ ಈ ಅಂಶಗಳನ್ನು ತಪ್ಪದೇ ದಾಖಲಿಸುವುದನ್ನು ಅಭ್ಯಾಸ ಮಾಡಿಸುವುದು.

**ಕಲಿಕಾ ಹಾಳೆ 29**

1. **ಚಟುವಟಿಕೆ:** ನಕ್ಷೆಯ ವಿಧಗಳ ಬಗ್ಗೆ ಅರಿಯೋಣ.

ಮಕ್ಕಳನ್ನು ಗುಂಪುಗಳಾಗಿ ಮಾಡಿ ವಿವಿಧ ವಿಧದ ನಕ್ಷೆಗಳನ್ನು ನೀಡಿ, ಗಮನಿಸಿ ಅವುಗಳಲ್ಲಿರುವ ವ್ಯತ್ಯಾಸಗಳನ್ನ ಗುರುತಿಸಲು ಹೇಳುವುದು. ನಂತರ ಅದರ ಮೇಲೆ ಚರ್ಚಿಸಿ ನಕ್ಷೆಯ ವಿಧಗಳನ್ನು ಅರ್ಥೈಸುವುದು ಜೊತೆಗೆ ಯಾವ ನಕ್ಷೆಯಿಂದ ಯಾವ ಮಾಹಿತಿಯನ್ನು ಪಡೆಯಬಹುದು ಎಂಬುದರ ಬಗ್ಗೆ ಸ್ಪಷ್ಟತೆಯನ್ನು ನೀಡುವುದು ಮತ್ತು ನಕ್ಷೆಯ ಮಹತ್ವವನ್ನು ಅರ್ಥೈಸುವುದು. ಶಾಲೆ/ ಅಟ್ಲಾಸ್/ ಪಠ್ಯ ಪುಸ್ತಕದಲ್ಲಿರುವ ವಿವಿಧ ವಿಧದ ನಕ್ಷೆಗಳನ್ನ ಬಳಸಿ ಈ ಚಟುವಟಿಕೆ ಮಾಡಿಸುವುದು ಬಹಳ ಮುಖ್ಯ.

ಶಾಲೆ/ ಅಟ್ಲಾಸ್/ ಪಠ್ಯ ಪುಸ್ತಕದಲ್ಲಿರುವ ವಿವಿಧ ವಿಧದ ನಕ್ಷೆಗಳನ್ನ ಬಳಸಿಕೊಳ್ಳುವುದು.

**ಸೂಚನೆ:** ನೀವು ಗಮನಿಸಬೇಕಾದ ಅಂಶಗಳು– ನಕ್ಷೆಗಳ ಶೀರ್ಷಿಕೆ, ಬಣ್ಣ, ಚಿಹ್ನೆಗಳು, ಸ್ಕೇಲ್, ಇತ್ಯಾದಿ.

2. **ಚಟುವಟಿಕೆ: ನಾವೇ ನಕ್ಷೆಯನ್ನು ತಯಾರಿಸೋಣ:**

ನೀಡಿರುವ ಸುಳಿವು ಆಧರಿಸಿ ಪ್ರತಿಯೊಬ್ಬರು ನಕ್ಷೆ ರಚಿಸಲು ಹೇಳುವುದು. ಅಗತ್ಯವಿರುವ ಕಡೆ ಮಾರ್ಗದರ್ಶನ ನೀಡುವುದು. ಮಕ್ಕಳು ರಚಿಸಿದ ನಕ್ಷೆಯನ್ನು ಪ್ರದರ್ಶಿಸಲು ಅವಕಾಶ ನೀಡಿ ಅದರ ಮೇಲೆ ಚರ್ಚಿಸುವುದು.

3. **ಚಟುವಟಿಕೆ:** ನಕ್ಷಾ ಸಂಕೇತಗಳನ್ನ ಬಳಸಿ ನಿಮ್ಮ ಶಾಲೆಯ ಅಥವಾ ಗ್ರಾಮದ ಕಾಲ್ಪನಿಕ ನಕ್ಷೆಯನ್ನು ರಚಿಸಬಹುದೇ? ಮೇಲಿನ ಚಟುವಟಿಕೆಗಳ ಆಧಾರದ ಮೇಲೆ ಮಕ್ಕಳೇ ನಕ್ಷೆ ರಚಿಸಲು ಹೇಳುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 29 ರ ಚಟುವಟಿಕೆ 1 ಮತ್ತು 2ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 18

## ಭೂಖಂಡಗಳು

**ಕಲಿಕಾ ಫಲ:**

1. ಪ್ರಪಂಚದ ನಕಾಶೆಯ ಮೇಲೆ ಖಂಡಗಳು ಮತ್ತು ಸಾಗರಗಳನ್ನು ಗುರುತಿಸುವರು.

2. ಅಕ್ಷಾಂಶ, ರೇಖಾಂಶ ಮತ್ತು ನಿರ್ದೇಶಾಂಕಗಳನ್ನು ಬಳಿಸಿಕೊಂಡು ನಕ್ಷೆ ಅಥವಾ ಅಟ್ಲಾಸ್‌ಗಳಲ್ಲಿ ಎಲ್ಲಾ ಖಂಡಗಳ ಸ್ಥಾನವನ್ನು ತಿಳಿಯುವರು.

**ಉದ್ದೇಶಗಳು:**

- ನಕಾಶೆಯ ಮೂಲಕ ಭೂಖಂಡಗಳ ಭೂಖಂಡಗಳು ಮತ್ತು ಸಾಗರಗಳ ಸ್ವರೂಪವನ್ನು ತಿಳಿದುಕೊಳ್ಳುವುದು.
- ಭೂಖಂಡಗಳು ಮತ್ತು ಸಾಗರಗಳನ್ನು ನಕಾಶೆಯ ಮೂಲಕ ಗುರುತಿಸುತ್ತಾ ಪ್ರತಿಯೊಂದರ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು
- ಅಕ್ಷಾಂಶ ಮತ್ತು ರೇಖಾಂಶಗಳಿಲ್ಲದೆ ನಿಖರವಾದ ಸ್ಥಾನಗಳನ್ನು ಗುರುತಿಸಲು ಸಾಧ್ಯವಿಲ್ಲ ಎಂಬುದನ್ನು ತಿಳಿದುಕೊಳ್ಳುತ್ತಾರೆ ಮತ್ತು ಗುರುತಿಸುತ್ತಾರೆ.

### ಕಲಿಕಾ ಹಾಳೆ 30

**1. ಚಟುವಟಿಕೆ:** ಮೇಲೆ ನಾವು ಭೂಖಂಡ, ಸಾಗರ, ಸಮುದ್ರಗಳ ಬಗ್ಗೆ ತಿಳ್ಕೊಂಡ್ವಿ ಅಲ್ವಾ, ಇಲ್ಲಿ ಒಂದು ವಿಶ್ವ ಭೂಪಟವನ್ನು ನೀಡಲಾಗಿದೆ ಅದರಲ್ಲಿ ನೀಡಿದ ಅಂಶ ಗುರುತಿಸಿ ತಿಳಿದುಕೊಳ್ಳಿ.

**2. ಚಟುವಟಿಕೆ:** ಗೋಡೆಯ ಮೇಲೆ ನೇತು ಹಾಕಿರುವ ಪ್ರಪಂಚದ ನಕ್ಷೆಯಲ್ಲಿ ಭೂಖಂಡಗಳು ಮತ್ತು ಸಾಗರಗಳನ್ನು ಸ್ನೇಹಿತರ ಜೊತೆಗೂಡಿ ಗುರುತಿಸಿ ಹೇಳಿ.

ಚಟುವಟಿಕೆಯಲ್ಲಿ ನೀಡಿರುವ ನಕ್ಷೆಯಲ್ಲಿ ಮಕ್ಕಳು ವಿವಿಧ ಖಂಡಗಳು, ಸಾಗರಗಳು, ಸಮುದ್ರಗಳನ್ನು ಗುರುತಿಸಲು ಮಾರ್ಗದರ್ಶನ ಮಾಡುವುದು. ನಂತರ ತರಗತಿಯಲ್ಲಿ ಮಕ್ಕಳಿಗೆ ನಕಾಶೆಗಳನ್ನು ಒದಗಿಸಿ ಗುಂಪುಗಳಲ್ಲಿ ಖಂಡಗಳು ಮತ್ತು ಸಾಗರಗಳನ್ನು ಗುರುತಿಸುವ ಆಟ ಆಡಿಸುವುದು. ಉದಾ: ಗುಂಪಿನಲ್ಲಿರುವ ಯಾವುದಾದರು ಒಂದು ಮಗು ಯುರೋಪ್ ಖಂಡ ಎಂದು ಹೇಳಿದರೆ ಉಳಿದವರು ಅದನ್ನು ಗುರುತಿಸಬೇಕು. ಹೀಗೆ ಪ್ರತಿಯೊಂದು ಖಂಡ, ಸಾಗರ ಮತ್ತು ದೇಶಗಳನ್ನು ಗುರುತಿಸುವ ಆಟವನ್ನು ಮಕ್ಕಳೇ ಆಡಿ ಗುರುತಿಸಲು ಸಹಾಯ ಮಾಡುವುದು.

**3. ಚಟುವಟಿಕೆ:** ಕೊಟ್ಟಿರುವ ಪ್ರಪಂಚದ ಖಾಲಿ ನಕ್ಷೆಯಲ್ಲಿ ಭೂಖಂಡಳಿಗೆ ಬಣ್ಣ ಹಚ್ಚಿ ಅವುಗಳನ್ನು ಹೆಸರಿಸಿ ಮತ್ತು ಸಾಗರಗಳನ್ನು ಗುರುತಿಸಿ ಬರೆಯೋಣ. ಸ್ವತಃ ಮಕ್ಕಳೇ ಚಟುವಟಿಕೆಯನ್ನು ಮಾಡಲು ಬಿಡುವುದು. ಈ ಕಲಿಕಾ ಹಾಳೆಗೆ ಭೂಖಂಡಗಳು ಹೇಗೆ ರಚನೆಯಾದವು ಮತ್ತು ಅವುಗಳು ಹೇಗೆ ದೂರ ಸರಿದವು ಎಂಬುದರ ಬಗ್ಗೆ ವೀಡೀಯೊವನ್ನು ತೋರಿಸಿ ಭೂಖಂಡ ಸಿದ್ದಾಂತಗಳ ಬಗ್ಗೆ ಪರಿಚಯ ಮಾಡಿಸುವುದು

### ಕಲಿಕಾ ಹಾಳೆ 31

**1. ಚಟುವಟಿಕೆ:** ಕೊಟ್ಟಿರುವ ನಕ್ಷೆಯಲ್ಲಿ ಪ್ರಪಂಚದ ಏಳು ಭೂಖಂಡಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸಿ ಬರೆಯಿರಿ.

**ಸೂಚನೆ:** ಪ್ರತಿ ಭೂಖಂಡವು ಯಾವ ಅಕ್ಷಾಂಶ ಮತ್ತು ರೇಖಾಂಶದಿಂದ ಪ್ರಾರಂಭಗೊಂಡು ಅಂತ್ಯಗೊಳುತ್ತದೆ ಎಂಬುದನ್ನು ಗುರುತಿಸಿ ಬರೆಯಬೇಕು.(ಪಠ್ಯಪುಸ್ತಕ ಅಥವಾ ಶಿಕ್ಷಕರ ಸಹಾಯವನ್ನು ಪಡೆದುಕೊಳ್ಳಿ)

ಅಕ್ಷಾಂಶ ಮತ್ತು ರೇಖಾಂಶಗಳನ್ನು ಗುರುತಿಸುವ ಮೂಲಕ ಇವುಗಳಿಲ್ಲದೆ ನಿಖರ ಸ್ಥಾನಗಳನ್ನು ಗುರುತಿಸಲು ಸಾದ್ಯವಿಲ್ಲ ಎಂಬುದನ್ನು ಖಾತ್ರಿಪಡಿಸಬೇಕು. ಇದಕ್ಕೆ ಸಂಬಂಧಿಸಿದಂತೆ ವಿವಿಧ ದೇಶಗಳ ಅಕ್ಷಾಂಶ ಮತ್ತು ರೇಖಾಂಶಗಳನ್ನು ನೀಡಿಯೂ ಮಕ್ಕಳಿಗೆ ಚಟುವಟಿಕೆ ಮಾಡಿಸಬಹುದು.

**2. ಚಟುವಟಿಕೆ:** ಕೊಟ್ಟಿರುವ ಏಷ್ಯಾ ನಕ್ಷೆಯಲ್ಲಿ ಭಾರತವನ್ನು ಗುರುತಿಸಿ, ಭಾರತದ ಪೂರ್ವಕ್ಕಿರುವ ಎರಡು ದೇಶಗಳು, ಪಶ್ಚಿಮಕ್ಕಿರುವ ಎರಡು ದೇಶಗಳು, ಉತ್ತರಿಕ್ಕಿರುವ ಎರಡು ದೇಶಗಳು ಮತ್ತು ದಕ್ಷಿಣಕ್ಕಿರುವ ಎರಡು ದೇಶಗಳನ್ನು ಗುರುತಿಸಿ ಹೆಸರಿಸಿ. ದಿಕ್ಕುಗಳ ಪರಿಚಯ ಈಗಾಗಲೇ ಮಕ್ಕಳಿಗೆ ಆಗಿರುವುದರಿಂದ ಸ್ವತಃ ಮಕ್ಕಳೇ ಗುರುತಿಸಲು ಬಿಡುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 31 ರ ಚಟುವಟಿಕೆ 1ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 19

## ಹವಾಮಾನ ಮತ್ತು ವಾಯುಗುಣ

**ಕಲಿಕಾಫಲ:** ಅಕ್ಷಾಂಶದ ಸ್ಥಾನವು ಹವಾಮಾನ ಮತ್ತು ಸಸ್ಯವರ್ಗದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದನ್ನು ತೋರಿಸುವರು.

**ಉದ್ದೇಶ:**

- ವಿವಿಧ ಸ್ಥಾನಗಳನ್ನು ಹೋಲಿಕೆ ಮಾಡುತ್ತಾ ಪ್ರತಿಯೊಂದು ಅಕ್ಷಾಂಶದ ಸ್ಥಾನವು ಅಲ್ಲಿನ ಹವಾಮಾನ ಸಸ್ಯವರ್ಗ ಮತ್ತು ಪ್ರಾಣಿವರ್ಗದ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ತನ್ನ ಸ್ಥಳಿಯ ಸನ್ನಿವೇಶದೊಂದಿಗೆ ಅರ್ಥಮಾಡಿಕೊಳ್ಳುವರು.

### ಕಲಿಕಾ ಹಾಳೆ 32

**1. ಚಟುವಟಿಕೆ:** ಕೊಟ್ಟಿರುವ ಚಿತ್ರದಲ್ಲಿ ಪ್ರಮುಖ ಅಕ್ಷಾಂಶಗಳನ್ನು ಗುರುತಿಸಲಾಗಿದೆ, ಅವುಗಳ ಹೆಸರನ್ನು ಬರೆದು ಅವುಗಳ ಬಗ್ಗೆ ತಿಳಿದಿಕೋ ಪಠ್ಯಪುಸ್ತಕದ ಸಹಾಯದಿಂದ ಪ್ರಮುಖ 5 ಅಕ್ಷಾಂಶಗಳನ್ನು ಗುರುತಿಸಲು ಮಾರ್ಗದರ್ಶನ ಮಾಡುವುದು.

**2. ಚಟುವಟಿಕೆ:** ಕೆಳಗಿನ ನಕ್ಷೆಯಲ್ಲಿ ಪ್ರಮುಖ ಅಕ್ಷಾಂಶಗಳು ಹಾದು ಹೋಗುವ ಖಂಡಗಳನ್ನು ಮತ್ತು ದೇಶಗಳನ್ನು ಗುರುತಿಸಿ ಪಟ್ಟಿ ಮಾಡಿ. (**ಸೂಚನೆ:** ಸಹಾಯಕ್ಕಾಗಿ ಪಠ್ಯಪುಸ್ತಕದ ನಕ್ಷೆಗಳನ್ನು ಬಳಸಿಕೊಳ್ಳಬಹುದು)

ಖಂಡ ಮತ್ತು ದೇಶಗಳನ್ನು ಗುರುತಿಸುವುದುರ ಮೂಲಕ ಆ ಖಂಡ ಮತ್ತು ದೇಶಗಳ ಹವಾಮಾನವನ್ನು ಅಕ್ಷಾಂಶ ಸ್ಥಾನದಿಂದ ಸುಲಭವಾಗಿ ಗುರುತಿಸಲು ಅನುಕೂಲವಾಗುತ್ತದೆ ಎಂಬುದನ್ನು ತಿಳಿಸಬೇಕು.

**3. ಚಟುವಟಿಕೆ:** ಮಕ್ಕಳೆ ಸ್ವತಃ, ಭೂಮಿಯ ಹವಾಮಾನ ವಲಯಗಳನ್ನು ಗುರುತಿಸಿ ಬಣ್ಣ ಹಚ್ಚಿ ಅವುಗಳ ಹೆಸರನ್ನು ಬರೆಯಿರಿ. ಮತ್ತು ಆ ವಲಯಗಳಲ್ಲಿ ಕಂಡುಬರುವ ಖಂಡಗಳು ಹಾಗೂ ದೇಶಗಳನ್ನು ತಿಳಿದುಕೊಳ್ಳಿ.

ತನ್ನ ಸ್ಥಳಿಯ ಸನ್ನಿವೇಶದೊಂದಿಗೆ ಸೂರ್ಯನ ಕಿರಣಗಳ ಆಧಾರದ ಮೇಲೆ ವಲಯಗಳನ್ನು ಹೇಗೆ ಮತ್ತು ಏಕೆ ಮಾಡಿಕೊಳ್ಳಲಾಗಿದೆ ಎಂಬುದನ್ನು ಮಕ್ಕಳಿಗೆ ಅರ್ಥ ಮಾಡಿಸಬೇಕು. ತಾವು ವಾಸಿಸುವ ಪ್ರದೇಶದ ಹವಾಮಾನ ಮತ್ತು ವಾಯುಗುಣ ಹೇಗೆ ನಿರ್ಧಾರವಾಗಿದೆ ಎಂಬುದನ್ನು ತಿಳಿಸಬೇಕು.

**4. ಚಟುವಟಿಕೆ:** ಮಕ್ಕಳಿಗೆ ಪ್ರಪಂಚದ ಕೆಲವು ನಗರಗಳು ಮತ್ತು ಅವುಗಳ ತಾಪಮಾನದ ಪಟ್ಟಿಯನ್ನು ನೀಡಲಾಗಿದ್ದು, ಆದರೆ ಒಂದೇ ಸಮಯದಲ್ಲಿ ಸ್ಥಳದಿಂದ ಸ್ಥಳಕ್ಕೆ ಹವಾಮಾನ ಬದಲಾಗಲು ಕಾರಣಗಳೇನು? ಕೇಳಿ ತಿಳಿದುಕೊಂಡು ತರಗತಿಯಲ್ಲಿ ಚರ್ಚೆ ಮಾಡಿ.

ಗುಂಪು ಚರ್ಚೆ ಮಾಡಿಸುವುದು ಮತ್ತು ಮಕ್ಕಳ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಬದಲಾವಣೆಗೆ ಕಾರಣಗಳನ್ನು ಪಟ್ಟಿ ಮಾಡುವುದು.

**5. ಚಟುವಟಿಕೆ:** ಮಕ್ಕಳೇ ಪ್ರತಿ ಭೂಖಂಡಗಳಲ್ಲಿಯೂ ಅಲ್ಲಿನ ಅಕ್ಷಾಂಶ ಸ್ಥಾನದ ಆಧಾರದ ಮೇಲೆ ಅಲ್ಲಿನ ಪ್ರಾಣಿ ಮತ್ತು ಸಸ್ಯವರ್ಗಗಳಲ್ಲಿ ವೈವಿಧ್ಯತೆಗಳನ್ನು ಕಾಣುತ್ತೇವೆ ಅಲ್ಲವೇ? ಹಾಗಾದರೆ ನಿಮ್ಮ ಪಠ್ಯಪುಸ್ತಕದ ಸಹಾಯದಿಂದ ಅಲ್ಲಿ ಕಂಡುಬರುವ ಪ್ರಮುಖ ಪ್ರಾಣಿಗಳು ಹಾಗೂ ಸಸ್ಯವರ್ಗಗಳನ್ನು ಪಟ್ಟಿ ಮಾಡಿ.

ಪ್ರಾಣಿಗಳು ಹಾಗೂ ಸಸ್ಯವರ್ಗಗಳನ್ನು ಪಟ್ಟಿ ಮಾಡುವ ಮೂಲಕ ಭೂಖಂಡಗಳ ನಡುವಿನ ವ್ಯತ್ಯಾಸಗಳನ್ನು ತಿಳಿದುಕೊಳ್ಳುವರು ಮತ್ತು ಬೇರೆ ಭೂಖಂಡಗಳಲ್ಲಿ ಅವುಗಳು ಏಕೆ ಕಂಡುಬರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವರು. ಕರ್ನಾಟಕದಲ್ಲಿಯೇ ಪ್ರದೇಶದಿಂದ ಪ್ರದೇಶಕ್ಕೆ ಬೆಳೆಗಳು, ಉಡುಗೆಗಳು, ಆಹಾರ ಪದ್ಧತಿಗಳು ವ್ಯತ್ಯಾಸವಿರುವುದಕ್ಕೆ ಕಾರಣಗಳನ್ನು ಹುಡುಕಲು ಕಾರ್ಯಯೋಜನೆಯನ್ನು ಮಕ್ಕಳಿಗೆ ನೀಡುವುದು

**6. ಚಟುವಟಿಕೆ:** ಒಂದು ವೇಳೆ ಅಂಟಾರ್ಟಿಕಾ ಖಂಡದಲ್ಲಿ ಕಂಡುಬರುವ ಪೆಂಗ್ವಿನ್ ಪಕ್ಷಿಗಳನ್ನು ನಿಮ್ಮ ಊರುಗಳಲ್ಲಿ ತಂದು ಬಿಟ್ಟರೆ ಏನಾಗಬಹುದು? ಯೋಚಿಸಿ ಉತ್ತರಿಸಿ.

ಮಕ್ಕಳೇಕೇಳಿ ತಿಳಿದು ಉತ್ತರಿಸಲು ಅವಕಾಶ ನೀಡುವುದು. ನಂತರ ಪೆಂಗ್ವಿನ್‌ಗಳು ವಾಸಿಸುವ ಪ್ರದೇಶಗಳು ಅಲ್ಲಿವ ಹವಾಮಾನ ಮತ್ತು ವಾಯುಗುಣದ ಪರಿಚಯ ಮಾಡಿಸಿ. ಇದೇ ಮಾದರಿಯಲ್ಲಿ ಇನ್ನಿತರ ಪ್ರಾಣಿವರ್ಗ ಮತ್ತು ಸಸ್ಯವರ್ಗಗಳ ಬಗ್ಗೆ ಚಟುವಟಿಕೆ ಮಾಡಿಸುವುದು.

**ಮೌಲ್ಯಮಾಪನ:** ಕಲಿಕಾ ಹಾಳೆ 32 ರ ಚಟುವಟಿಕೆ 5 ಮತ್ತು 6ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಕಲಿಕಾಂಶ 20**

**ಏಷ್ಯಾ ಖಂಡ**

**ಕಲಿಕಾ ಫಲ:** ಏಷ್ಯಾ ಖಂಡದ ಪ್ರಮುಖ ಲಕ್ಷಣಗಳನ್ನು ಓದಿ ಅರಿತುಕೊಳ್ಳುವರು.

**ಉದ್ದೇಶಗಳು:**

- ಭೂಖಂಡಗಳ ಸ್ಥಾನಮಾನ, ಸಸ್ಯವರ್ಗ, ಪ್ರಾಣಿವರ್ಗ, ಜನಜೀವನ, ಕೈಗಾರಿಕೆಗಳು ಮತ್ತು ಸಂಪನ್ಮೂಲಗಳ ಬಗ್ಗೆ ಅರ್ಥಮಾಡಿಕೊಳ್ಳುವುದು.
- ಭೂಖಂಡಗಳಲ್ಲಿ ಕಂಡುಬರುವ ವಿವಿಧ ದೇಶಗಳಲ್ಲಿ ವೈವಿಧ್ಯತೆಗೆ ಕಾರಣಗಳನ್ನು ಅರಿತುಕೊಂಡು ತನ್ನ ದೇಶ ಅಥವಾ ತನ್ನ ಸನ್ನಿವೇಶಗಳೊಂದಿಗೆ ಅವುಗಳನ್ನು ಹೋಲಿಕೆ ಮಾಡಿ ಅರ್ಥಮಾಡಿಕೊಳ್ಳುವುದು.

**ಕಲಿಕಾ ಹಾಳೆ 33**

1. ಚಟುವಟಿಕೆ: ಓದಿ ತಿಳಿದಿಕೋ ಮತ್ತು ಉಳಿದ 6 ಖಂಡಗಳ ಮಾಹಿತಿಯನ್ನು ಸಂಗ್ರಹಿಸಿ ಮಾಹಿತಿ ಹಾಳೆ ತಯಾರಿಸು.

ಈಗಾಗಲೇ ಮೇಲಿನ ಕಲಿಕಾಂಶಗಳಲ್ಲಿ ಖಂಡಗಳ ಬಗ್ಗೆ ಅರ್ಥಮಾಡಿಕೊಂಡಿರುವುದರಿಂದ ಉಳಿದ ಭೂಖಂಡಗಳಿಗೂ ಇದೇ ಮಾದರಿಯಲ್ಲಿ ಅಥವಾ ನಿಮಗೆ ಸರಿಯೆನಿಸಿದ ಇನ್ನಿತರ ಯಾವುದೇ ಮಾದರಿಯಲ್ಲಿ ಮಾಹಿತಿ ಹಾಳೆಯನ್ನು ಮಕ್ಕಳೇ ಸಿದ್ದಪಡಿಸಲು ಮಾರ್ಗದರ್ಶನ ಮಾಡುವುದು. ಮಕ್ಕಳ 6 ಗುಂಪುಗಳನ್ನಾಗಿ ಮಾಡಿ ಪ್ರತಿ ಗುಂಪಿಗೂ ಒಂದೊಂದು ಭೂಖಂಡದ ಬಗ್ಗೆ ಬರೆಯಲು ಹೇಳುವುದು. ನಂತರ ಆ ಮಾಹಿತಿ ಹಾಳೆಯನ್ನು ತರಗತಿಯ ಗೋಡೆಗೆ,ಮಕ್ಕಳಿಗೆ ಕಾಣುವಂತೆ ನೇತುಹಾಕುವುದು. ಇದರಿಂದ ಸ್ವತಃ ಮಕ್ಕಳೇ ಇತರ ಸಂಪನ್ಮೂಲಗಳನ್ನು ಓದಿ ಅರ್ಥೈಸಿಕೊಂಡು ಮಾಹಿತಿಯನ್ನು ಕಲೆಹಾಕುವ ಮತ್ತು ಬರೆಯುವ ಕೌಶಲ್ಯವನ್ನು ವೃದ್ಧಿಸಿಕೊಳ್ಳುತ್ತಾರೆ.

**ಮೌಲ್ಯಮಾಪನ:** ಕಲಿಕಾ ಹಾಳೆ 33 ರ ಚಟುವಟಿಕೆ 1ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಪೌರನೀತಿ**

**ಕಲಿಕಾಂಶ 21**

**ಸಂವಿಧಾನದ ಅಗತ್ಯತೆ**

**ಕಲಿಕಾ ಫಲಗಳು:**

1. ಸಂವಿಧಾನದ ಅಗತ್ಯತೆಯನ್ನು ಅರ್ಥ ಮಾಡಿಕೊಳ್ಳುವರು
2. ಭಾರತ ಸಂವಿಧಾನದ ರಚನಾ ಸಭೆಯ ಬಗ್ಗೆ ಓದಿ ತಿಳಿದುಕೊಳ್ಳುವರು ಮತ್ತು ಅದರಲ್ಲಿ ಕರ್ನಾಟಕದ ಪ್ರಮುಖ ವ್ಯಕ್ತಿಗಳ ಪರಿಚಯವನ್ನು ಮಾಡಿಕೊಳ್ಳುವರು

**3. ಕಲಿಕಾಫಲ:** ಪೂರ್ವ ಪೀಠಿಕೆಯ ಮತ್ತು ಅದರ ಪ್ರಮುಖ ಪದಗಳನ್ನು, ಸರಳ ಅರ್ಥದೊಂದಿಗೆ ವಿವರಿಸುವರು

**ಉದ್ದೇಶಗಳು:**

1. ಸಂವಿಧಾನವು ದೇಶದ ಮೂಲಭೂತ ಕಾನೂನು ಅದನ್ನು ಅದನ್ನು ಎಲ್ಲರೂ ಪಾಲಿಸಲೇಬೇಕು ಎಂಬುದನ್ನು ಅರ್ಥ ಮಾಡಿಕೊಂಡು ಅದನ್ನು ಪಾಲಿಸುವುದು.
2. ಸಂವಿಧಾನದ ರಚನಾ ಸಮಿತಿಯ ಬಗ್ಗೆ ಮಾಹಿತಿಯನ್ನು ಅರಿತುಕೊಳ್ಳವರು ಮತ್ತು ಸಂವಿಧಾನ ರಚನೆಯಲ್ಲಿ ಎಲ್ಲಾ ವರ್ಗ, ಪ್ರಾಂತ್ಯಗಳಿಗೂ ಆದ್ಯತೆ ನೀಡಲಾಗಿತ್ತು ಎಂಬುದನ್ನು ಅರಿತುಕೊಳ್ಳುವರು.
3. ಪೂರ್ವ ಪೀಠಿಕೆಯಲ್ಲಿನ ಪ್ರಮುಖಾಂಶಗಳನ್ನು ಪಟ್ಟಿಮಾಡುವುದರ ಜೊತೆಗೆ ತಮ್ಮ ದೈನಂದಿನ ಜೀವನದಲ್ಲಿ ಆ ಮೌಲ್ಯಗಳನ್ನು ಅಳವಡಿಸಿಕೊಳ್ಳುವರು.

**ಕಲಿಕಾ ಹಾಳೆ 34**

**1. ಚಟುವಟಿಕೆ:** ಕಥೆ ಓದೋಣ, ಆಮೇಲೆ ಉತ್ತರಿಸೋಣವೇ?

ಕಥೆಯ ಆಧಾರದ ಮೇಲೆ ಕೊಟ್ಟಿರುವ ಪ್ರಶ್ನೆಗಳಿಗೆ ಚರ್ಚಿಸಿ ಅಥವಾ ಉತ್ತರಿಸಿದ ಮೇಲೆ ಶಾಂತಿಯುತ ಸಮಾಜಕ್ಕಾಗಿ ಸಂವಿಧಾನಾತ್ಮ ಸರ್ಕಾರ ಅಗತ್ಯ ಮತ್ತು ನಾವೆಲ್ಲರೂ ಅದನ್ನು ಗೌರವಿಸಿ ಪಾಲಿಸಬೇಕು ಎಂಬ ಮನೋಭಾವನೆಯನ್ನು ಉಂಟುಮಾಡಬೇಕು. ಇದಕ್ಕೆ ವಿರುದ್ಧವಾಗಿ ನಡೆದರೆ ಏನೆಲ್ಲಾ ಘಟನೆಗಳು ಸಂಭವಿಸಬಹುದು ಎಂಬುದನ್ನೂ ಸಹ ಮನದಟ್ಟು ಮಾಡಿಬೇಕು. ಉದಾ: ಮೂಲಭೂತ ಹಕ್ಕುಗಳಿಗೆ ರಕ್ಷಣೆ ಇಲ್ಲದೇ ಹೋದರೆ ಏನಾಗಬಹುದು ಎಂಬ ಪ್ರಶ್ನೆಗೆ ಚರ್ಚೆ ಮಾಡಿಸುವುದಾಗಿದೆ.

**ಕಲಿಕಾ ಹಾಳೆ 35**

**1. ಚಟುವಟಿಕೆ:** ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸಿದ್ದ ಕರ್ನಾಟಕದ ಪ್ರಮುಖ ವ್ಯಕ್ತಿಗಳ ಚಿತ್ರವನ್ನು ಕೊಡಲಾಗಿದೆ. ಇವರುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತಿಳಿದುಕೊಳ್ಳಿ.

ರಚನಾ ಸಭೆಗೆ ವಿವಿಧ ಪ್ರಾಂತ್ಯಗಳಿಂದ ಸದಸ್ಯರನ್ನು ಆಯ್ಕೆ ಮಾಡಲಾಗಿತ್ತು ಎನ್ನುವುದನ್ನು ತಿಳಿಸಿ. ಕರ್ನಾಟಕದಿಂದ ಭಾಗವಹಿಸಿದ್ದ ಸದಸ್ಯರ ಪರಿಚಯ ಮಾಡಿಸುವುದು.

**2. ಚಟುವಟಿಕೆ:** ಮಕ್ಕಳೇ, ನಿಮ್ಮ ಶಾಲೆಯಲ್ಲಿ, ಶಾಲಾ ಮಂತ್ರಿ ಮಂಡಲದ ಜೊತೆಗೂಡಿ ನಿಮ್ಮ ಶಾಲೆಯ ನೀತಿ ನಿಯಮಗಳನ್ನು ನೀವೇ ರಚನೆ ಮಾಡಿ ಅದನ್ನು ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸಿ.

ಮೊದಲನೇ ದಿನ ಶಾಲೆಯಲ್ಲಿ ಮುಖ್ಯೋಪಾಧ್ಯಾಯರು, ಶಿಕ್ಷಕರ ಮಾರ್ಗದರ್ಶನದಲ್ಲಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಶಾಲಾ ಮಂತ್ರಿಮಂಡಲದ ಸಭೆಯನ್ನು ಏರ್ಪಡಿಸಿ ತಮ್ಮ ಶಾಲೆಗೆ ಸಂಬಂಧಿಸಿದ ನೀತಿ ನಿಯಮಗಳನ್ನು ರಚಿಸಲು ವೇದಿಕೆಯನ್ನು ಮಾಡಿಕೊಡುವುದು. ಮಂತ್ರಿ ಮಂಡಲದ ಸದಸ್ಯರು ಸೂಚಿಸಿದ ಅಂಶಗಳನ್ನು ಪಟ್ಟಿ ಮಾಡುವುದು ಮತ್ತು ಎಲ್ಲರ ಮುಂದೆ ಓದಿ ತಿಳಿಸಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಉಳಿದ ಮಕ್ಕಳು ಈ ನಿಯಮಗಳಿಗೆ ಸಲಹೆ ಸೂಚನೆಗಳನ್ನು ನೀಡಲು ಅವಕಾಶ ನೀಡುವುದು

ಎರಡನೇ ದಿನಮಂತ್ರಿ ಮಂಡಲದಲ್ಲಿ ಆ ಸಲಹೆ ಸೂಚನೆಗಳನ್ನು ಚರ್ಚಿಸಿ ಅಂತಿಮ ಕರಡನ್ನು ಸಿದ್ಧಪಡಿಸಿ ಅದನ್ನು ಅಂಗೀಕರಿಸುವುದು ಮತ್ತು ಅದು ಎಂದಿನಿಂದ ಅನ್ವಯವಾಗುತ್ತದೆ ಎಂಬುದನ್ನು ತಿಳಿಸುವುದು. ಶಿಕ್ಷಕರು ಮಾರ್ಗದರ್ಶನವನ್ನು ಮಾತ್ರ ನೀಡಬೇಕು ಮಕ್ಕಳು ರಚಿಸುವ ಯಾವುದೇ ನಿಯಮಗಳನ್ನು ಬೇಡ ಅಥವಾ ಬದಲಾವಣೆ ಮಾಡಿ ಎಂಬ ಸಲಹೆ ಸೂಚನೆಗಳನ್ನು ನೀಡಬಾರದು. ಇದಕ್ಕೆ ಸರ್ಕಾರಿ ಪ್ರಾಥಾಮಿಕ ಶಾಲಾ ಸಂವಿಧಾನ ಅಥವಾ ಶಾಲಾ ನಿಯಮಗಳು ಇತ್ಯಾದಿ ಶೀರ್ಷಿಕೆಗಳನ್ನು ನೀಡಬಹುದು.

**ಕಲಿಕಾ ಹಾಳೆ 36**

**1. ಚಟುವಟಿಕೆ:** ದಿನನಿತ್ಯ ನಾವು ಪ್ರಾರ್ಥನಾ ಸಭೆಯಲ್ಲಿ ಭಾರತದ ಪೂರ್ವಪೀಠಿಕೆಯನ್ನು ಓದುತ್ತೇವೆ ಅಲ್ಲವೇ? ಹಾಗಾದರೆ ಅದರಿಂದ ನೀವು ಏನನ್ನು ತಿಳಿದುಕೊಂಡಿದ್ದೀರಿ? ತಿಳಿಸಿ.

ದಿನನಿತ್ಯ ಪ್ರಾರ್ಥನಾ ಸಭೆಯಲ್ಲಿ ಪೂರ್ವ ಪೀಠಿಕೆಯನ್ನು ಓದಿಸುವುದು ಮತ್ತು ಪ್ರತಿ ದಿನ ಒಂದೊಂದು ಪ್ರಮುಖಾಂಶದ ಕುರಿತು ಒಬ್ಬೊಬ್ಬ ವಿದ್ಯಾರ್ಥಿಯು ಮಾತನಾಡಲು ಅವಕಾಶ ಕಲ್ಪಿಸುವುದು. ಉದಾ: ಭಾರತೀಯರಾದ ನಾವು, ಗಣರಾಜ್ಯ, ಸಮಾಜವಾದಿ, ಸರ್ವಧರ್ಮ ಸಮಭಾವ, ಸ್ವಾತಂತ್ರ್ಯ, ಸಮಾನತೆ ಇತ್ಯಾದಿ. ಇದು ಎಲ್ಲಾ ಶಾಲಾ ಮಕ್ಕಳ ಸಮ್ಮುಖದಲ್ಲೇ ನಡೆದರೆ ಒಳ್ಳೆಯದು ಇದರ ಮೂಲಕ ಸಂವಿಧಾನಿಕ ಮೌಲ್ಯಗಳ ಪರಿಚಯದ ಜೊತೆಗೆ ಅದನ್ನು ಪಾಲಿಸಲು ಶಿಕ್ಷಕರ ಮಾರ್ಗದರ್ಶನ ಇಲ್ಲಿ ಅತ್ಯಗತ್ಯ.

**2. ಚಟುವಟಿಕೆ:** ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ನಿನಗೆ ಇಷ್ಟವಾದ ಯಾವುದಾದರೂ 2 ಅಂಶಗಳು ಯಾವುವು ಮತ್ತು ಏಕೆ? ತಿಳಿಸು

**3. ಚಟುವಟಿಕೆ:** ಈ ಕೆಳಗೆ ಭಾರತ ಸಂವಿಧಾನದ ಪೂರ್ವಪೀಠಿಕೆಯನ್ನು ನೀಡಲಾಗಿದೆ. ಅದನ್ನು ಓದಿ ಮುಂದೆ ನೀಡಲಾದ ಪ್ರಶ್ನೆಗಳಿಗೆ ಉತ್ತರಿಸಿ

4. ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ನೀವು ಗಮನಿಸಿದ ಪ್ರಮುಖ ಪದಗಳನ್ನು ಪಟ್ಟಿ ಮಾಡಿ.

5. ಪೂರ್ವ ಪೀಠಿಕೆಯಲ್ಲಿ ತಿಳಿಸಿರುವ ಕೆಳಗಿನ ಪದಗಳ ಬಗ್ಗೆ ನೀನೇನು ಅರ್ಥ ಮಾಡಿಕೊಂಡಿರುವೆ ತಿಳಿಸು.

2 ರಿಂದ 5 ನೇ ಚಟುವಟಿಕೆಗಳನ್ನು ಮಕ್ಕಳೇ ಮಾಡಲು ಮಾರ್ಗದರ್ಶನ ಮಾಡುವುದು ಮತ್ತು ಮಕ್ಕಳು ಸಂವಿಧಾನಿಕ ಮೌಲ್ಯಗಳ ಬಗ್ಗೆ ಅರಿವನ್ನು ಹೆಚ್ಚಿಸಿಕೊಂಡು ಅದನ್ನು ಪಾಲನೆ ಮಾಡುವುದರ ಜೊತೆಗೆ ತಮ್ಮ ದೈನಂದಿನ ಜೀವನದಲ್ಲಿ ಅವುಗಳನ್ನು ಅಳವಡಿಸಿಕೊಳ್ಳುವಂತಾಗಬೇಕೆಂಬುದು ಈ ಕಲಿಕಾಂಶದ ಪ್ರಮುಖ ಆಶಯವಾಗಿದ್ದು ಶಿಕ್ಷಕರು ಸೂಕ್ತ ಮಾರ್ಗದರ್ಶನವನ್ನು ಒದಗಿಸಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 34 ರ ಚಟುವಟಿಕೆ1ನ್ನು, ಕಲಿಕಾ ಹಾಳೆ 35 ರ ಚಟುವಟಿಕೆ 2ನ್ನು ಮತ್ತು ಕಲಿಕಾ ಹಾಳೆ 36ರ ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**ಕಲಿಕಾಂಶ 22**

**ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳು**

**ಕಲಿಕಾ ಫಲ:** ನಿಜ ಜೀವನದ ಸನ್ನಿವೇಶಗಳಿಗೆ ಮೂಲಭೂತ ಹಕ್ಕುಗಳನ್ನು ಅನ್ವಯಿಸಿ ಅರ್ಥಮಾಡಿಕೊಳ್ಳುವರು .

**ಉದ್ದೇಶಗಳು:**

- ಮೂಲಭೂತ ಹಕ್ಕುಗಳ ಮಹತ್ವವನ್ನು ಅರ್ಥಮಾಡಿಕೊಳ್ಳವರು ಮತ್ತು ಮತ್ತೊಬ್ಬರ ಹಕ್ಕುಗಳನ್ನು ಗೌರವಿಸುವರು.
- ತನ್ನ ಸುತ್ತಮುತ್ತ ಮೂಲಭುತ ಹಕ್ಕುಗಳು ಉಲ್ಲಂಘನೆಯಾದಾಗ ನ್ಯಾಯಾಲಯದ ಮೂಲಕ ರಕ್ಷಣೆ ಪಡೆಯಬಹುದು ಎಂದು ಅರ್ಥ ಮಾಡಿಕೊಳ್ಳುವರು.

**ಕಲಿಕಾಂಶ 37**

1. **ಚಟುವಟಿಕೆ:** ಈ ಕೆಳಗಿನ ಕೋಷ್ಟಕದಲ್ಲಿ ಕೊಟ್ಟಿರುವ ಕೆಲವು ಸನ್ನಿವೇಶಗಳನ್ನು ನೀಡಲಾಗಿದೆ. ಆ ಸನ್ನಿವೇಶಕ್ಕೆ ..

2. **ಚಟುವಟಿಕೆ:** ಈ ಕೆಳಗಿನ ಹೇಳಿಕೆಗಳು ಯಾವ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿವೆ ಎಂಬುದನ್ನು ಕೊಟ್ಟಿರುವ ಬಾಕ್ಸ್‌ನಲ್ಲಿ ಬರೆಯಿರಿ. ಯಾವ ಮೂಲಭೂತ ಹಕ್ಕು ಉಲ್ಲಂಘನೆಯಾಗಿದೆ ಎಂಬುದನ್ನು ಗುರುತಿಸಿ ಹೊಂದಿಸಿ.

ಸನ್ನಿವೇಶಗಳನ್ನು ಅರ್ಥಮಾಡಿಕೊಂಡು ಮೂಲಭೂತ ಹಕ್ಕುಗಳ ಜೊತೆ ಸಂಬಂಧ ಕಲ್ಪಿಸುವರು ಮತ್ತು ಮೂಲಭೂತ ಹಕ್ಕುಗಳ ಉಲ್ಲಂಘನೆಯಾದಾಗ ನ್ಯಾಯಾಲಯದ ಮೊರೆ ಹೋಗಬಹುದು ಎಂಬ ಅರಿವನ್ನು ಮೂಡಿಸಬೇಕು ಮತ್ತು ಈ ಹಕ್ಕುಗಳ ಉಲ್ಲಂಘನೆಯು ಶಿಕ್ಷಾರ್ಹ ಅಪರಾಧವಾಗಿದೆ ಎಂಬುದನ್ನು ಉದಾಹರಣೆಯ ಸಮೇತ ತಿಳಿಸಬೇಕು. ಉದಾ: ಸರ್ಕಾರಿ ಶಾಲೆಯಲ್ಲಿ ಯಾವುದೇ ಜಾತಿ, ಧರ್ಮ, ಲಿಂಗ ಇತ್ಯಾದಿ ಅಂಶಗಳ ಆಧಾರದ ಮೇಲೆ ದಾಖಲಾತಿಯನ್ನು ನಿರಾಕರಿಸಿದರೆ, 14 ವರ್ಷದೊಳಗಿನ ಮಕ್ಕಳನ್ನು ಗಣಿಗಾರಿಕೆಯಲ್ಲಿ ಅಥವಾ ಬಲವಂತದ ದುಡಿಮೆಗೆ ಹಾಕಿದರೆ ಅವುಗಳು ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ ಮತ್ತು ಕಾನೂನಿನ ಪ್ರಕಾರ ಅಂತಹವರಿಗೆ ಶಿಕ್ಷೆ ನೀಡಬಹುದು.

3. **ಚಟುವಟಿಕೆ:** ಇಲ್ಲಿ ಒಂದಷ್ಟು ಚಿತ್ರಗಳನ್ನು ನೀಡಲಾಗಿದೆ, ಆ ಚಿತ್ರಗಳು ನಮ್ಮ ಯಾವ ಹಕ್ಕುಗಳು ಹಾಗೂ ಕರ್ತವ್ಯಗಳಿಗೆ ಸಂಬಂಧಿಸಿವೆ ಇದರಲ್ಲಿ ನಮಗೆ ಯಾವುದು ಬೇಕು ಮತ್ತು ಮತ್ತು ಯಾವುದು ಬೇಡ? ಪ್ರತಿಯೊಂದು ಚಿತ್ರದ ಕುರಿತು ಚರ್ಚಿಸಿ?

ಈ ಚಿತ್ರಗಳು ಮೂಲಭೂತ ಹಕ್ಕು ಮತ್ತು ಕರ್ತವ್ಯಗಳಿಗೆ ಸಂಬಂಧಿಸಿದ್ದು, ಚಿತ್ರಗಳ ಮೂಲಕ ಅವುಗಳನ್ನು ಅರ್ಥಮಾಡಿಕೊಳ್ಳುವ ಹಾಗೂ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿ ಯಾವುದು ಸರಿ ಮತ್ತು ತಪ್ಪು ಎಂಬುದನ್ನು ಅರ್ಥಮಾಡಿಕೊಂಡು ತನ್ನ ದೈನಂದಿನ ಸನ್ನವೇಶದಲ್ಲಿ ಕರ್ತವ್ಯಗಳನ್ನು ಪಾಲಿಸುವ ಮತ್ತು ಮೂಲಭೂತ ಹಕ್ಕುಗಳನ್ನು ಗೌರವಿಸಿ ರಕ್ಷಿಸುವ ಜವಬ್ದಾರಿಯನ್ನು ಹೊರುವಂತಾಗಬೇಕು.

4. **ಚಟುವಟಿಕೆ:** ಕೆಳಗೆ ಕೆಲವು ವಾಕ್ಯಗಳನ್ನು ನೀಡಲಾಗಿದೆ ಅದರ ಮುಂದೆ ಹೌದು ಹಾಗೂ ಇಲ್ಲ ಎಂದು ಆಯ್ಕೆ ನೀಡಲಾಗಿದೆ. ನಿನಗೆ ಸರಿಯೆನಿಸದನ್ನು ಗುರುತು ಹಾಕು ಮತ್ತು ಏಕೆ ಎಂಬುದನ್ನು ತರಗತಿಯಲ್ಲಿ ಎಲ್ಲರೊಂದಿಗೆ ಹಂಚಿಕೊ?

ಕರ್ತವ್ಯಗಳನ್ನು ಏಕೆ ಪಾಲನೆ ಮಾಡಬೇಕು, ಅವುಗಳನ್ನು ನಾವು ಸಂವಿಧಾನಾತ್ಮಕವಾಗಿ ಏಕೆ ಕಡ್ಡಾಯಗೊಳಿಸಿದ್ದೇವೆ ಎಂಬುದನ್ನು ಮಕ್ಕಳೇ ಅರ್ಥಮಾಡಿಕೊಂಡು ಪಾಲಿಸಲು ಪ್ರೋತ್ಸಾಹಿಸಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೆ ರಾಷ್ಟ್ರಕ್ಕೆ ನಾವು ಸಲ್ಲಿಸುವ ಕೊಡುಗೆ ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ವೃದ್ಧಿಸಬೇಕು. ಉದಾ: ರಾಷ್ಟ್ರಧ್ವಜ, ರಾಷ್ಟ್ರಗೀತೆಗೆ ಗೌರವ ಸಲ್ಲಿಸುವುದು, ಐತಿಹಾಸಿಕ ಸ್ಮಾರಕಕಗಳನ್ನು ರಕ್ಷಿಸುವುದು, ರಾಷ್ಟ್ರದ ಸಮಗ್ರತೆಯನ್ನು ಕಾಪಾಡುವುದು.

5. **ಚಟುವಟಿಕೆ:** ಕರ್ತವ್ಯಗಳನ್ನು ಮಾಡದಿದ್ದರೆ ಹಕ್ಕುಗಳನ್ನು ಕೇಳುವ ಅಥವಾ ಅನುಭವಿಸುವ ಹಕ್ಕು ಇಲ್ಲ ಎಂಬ ವಿಷಯದ ಬಗ್ಗೆ ಚರ್ಚಾ ಸ್ಪರ್ಧೆ ಏರ್ಪಡಿಸಿ ಎಲ್ಲರೂ ಚರ್ಚೆಯಲ್ಲಿ ಭಾಗವಹಿಸುವಂತೆ ಮಾಡುವುದು.

ತರಗತಿಯ ಮಕ್ಕಳಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಿ ಮಕ್ಕಳ ಅಬಿಪ್ರಾಯಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ವೇದಿಕೆ ನೀಡಬೇಕು ಮತ್ತು ಮೂಲಭೂತ ಹಕ್ಕುಗಳನ್ನು ಪಡೆದು ಅನುಭವಿಸಿದರಷ್ಟೇ ಅಲ್ಲ ಅದಕ್ಕೆ ಪ್ರತಿಯಾಗಿ ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಿ ಸುಸ್ಥಿರ ಸಮಾಜವನ್ನು ನಿರ್ಮಿಸಲು ಕರ್ತವ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು ಎಂಬ ಮನೋಭಾವನೆಯನ್ನು ಮಕ್ಕಳಲ್ಲಿ ಬೆಳೆಸಬೇಕು.

6. **ಚಟುವಟಿಕೆ:** ನಿಮ್ಮ ಶಾಲೆ ಮತ್ತು ಊರಿನಲ್ಲಿ ನೀವು ಮಾಡಬಹುದಾದ ಮೂಲಭೂತ ಕರ್ತವ್ಯಗಳು ಯಾವುವು ಪಟ್ಟಿ ಮಾಡಿ ಶಿಕ್ಷಕರೊಂದಿಗೆ ಚರ್ಚಿಸಿ.

ಪರಿಸರ ಸಂರಕ್ಷಣೆ, ಸ್ಮಾರಕಗಳ ರಕ್ಷಣೆ, ಮಹಿಳೆಯರಿಗೆ ಗೌರವ ಇತ್ಯಾದಿ ಅಂಶಗಳ ಬಗ್ಗೆ ಚರ್ಚಿಸಿ ಸ್ಥಳೀಯವಾಗಿ ನಾವು ವಾಸಿಸುವ ಪ್ರದೇಶಗಳಲ್ಲಿಯೇ ನಮ್ಮ ಮೂಲಭೂತ ಕರ್ತವ್ಯಗಳನ್ನು ನಿರ್ವಹಿಸಬಹುದು ಎಂದು ಮನವರಿಕೆಯಾಗಬೇಕು.

**ಮೌಲ್ಯಮಾಪನ:** ಕಲಿಕಾ ಹಾಳೆ 37 ರ ಚಟುವಟಿಕೆ 2 ಮತ್ತು ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 23

## ರಾಜ್ಯ ನಿರ್ದೇಶಕ ತತ್ವಗಳು

**ಕಲಿಕಾ ಫಲ:** ರಾಜ್ಯ ನಿರ್ದೇಶಕ ತತ್ವಗಳ ಬಗ್ಗೆ ತಿಳಿದುಕೊಳ್ಳುವರು

**ಉದ್ದೇಶಗಳು:**

- ಕಲ್ಯಾಣ ರಾಜ್ಯದ ಸ್ಥಾಪನೆಗಾಗಿ ಸಾರ್ವಜನಿಕ ನೀತಿ ಮತ್ತು ಯೋಜನೆಗಳನ್ನು ಜಾರಿಗೊಳಿಸುವಾಗ ರಾಜ್ಯ ನೀತಿ ನಿರ್ದೇಶಕ ತತ್ವಗಳನ್ನು ಸರ್ಕಾರವು ಗಣನೆಗೆ ತೆಗೆದುಕೊಳ್ಳುತ್ತದೆ ಎಂಬುದನ್ನು ತಿಳಿದುಕೊಳ್ಳುತ್ತಾರೆ.
- ಇವುಗಳನ್ನು ಜಾರಿಗೊಳಿಸುವುದು ಕಡ್ಡಾಯವಲ್ಲದಿದ್ದರೂ ಸಮಯ ಮತ್ತು ಸಂಧರ್ಭಕ್ಕನುಗುಣವಾಗಿ, ಸಾರ್ವಜನಿಕರ ಒಳಿತಿಗಾಗಿ ರಾಜ್ಯ ನಿರ್ದೇಶಕ ತತ್ವಗಳನ್ನು ಜಾರಿಗೊಳಿಸಲು ಸರ್ಕಾರಕ್ಕೆ ಮನವಿ ಸಲ್ಲಿಬಹುದೆಂಬುದು ತಿಳಿದಿರಬೇಕು.

### ಕಲಿಕಾ ಹಾಳೆ 38

1. **ಚಟುವಟಿಕೆ:** ನಿಮ್ಮ ಸುತ್ತಮುತ್ತಲಿನ ಸಮುದಾಯದಲ್ಲಿ ಕಂಡು ಬರುವ ಸಾಮಾಜಿಕ ಹಾಗೂ ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗಮನಿಸಿ. ಅವರೇಕೆ ದುರ್ಬಲರಾಗಿದ್ದಾರೆ ಎಂಬದರ ಬಗ್ಗೆ ಸಹಪಾಠಿಗಳೊಡನೆ ಚಿಂತನೆ ನಡೆಸಿ.

2. **ಚಟುವಟಿಕೆ:** ರಾಜ್ಯ ನಿರ್ದೇಶಕ ತತ್ವಗಳನ್ನು ರಾಜ್ಯಗಳು ಜಾರಿಗೊಳಿಸುವುದು ಕಡ್ಡಾಯವಲ್ಲ ಮತ್ತು ಅದನ್ನು ಜಾರಿಗೊಳಿಸಲು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವಂತಿಲ್ಲ. ಇದಕ್ಕೆ ಸಂಬಂಧಿಸಿದಂತೆ.

ರಾಜ್ಯ ನಿರ್ದೇಶಕ ತತ್ವಗಳನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕೆ? ಅಥವಾ ಬೇಡವೆ ಎಂಬ ವಿಷಯದ ಕುರಿತು ನಿಮ್ಮ ಶಾಲೆಯಲ್ಲಿ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಿ. ಅನಂತರ ಅದರ ಆಗು–ಹೋಗುಗಳ ಬಗ್ಗೆ ಚಿಂತಿಸಿ.

3. ಮಹಿಳೆಯರು, ದುರ್ಬಲರು, ಹಿರಿಯ ನಾಗರೀಕರು ಮತ್ತು ಮಕ್ಕಳಿಗೆ ಸಂಬಂಧಿಸಿದ ಯಾವುದಾದರೂ 5 ರಾಜ್ಯ ನಿರ್ದೇಶಕ ತತ್ವಗಳನ್ನು ಪಟ್ಟಿ ಮಾಡಿ.

ಮೇಲಿನ ಮೂರು ಚಟುವಟಿಕೆಗಳಿಗೆ ಸುಗಮಕಾರರು ಸೂಕ್ತ ಮಾರ್ಗದರ್ಶನ ಮಾಡುವುದು

**ಮೌಲ್ಯಮಾಪನ:** ಕಲಿಕಾ ಹಾಳೆ 38 ರ ಚಟುವಟಿಕೆ 2 ಮತ್ತು ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

## ಕಲಿಕಾಂಶ 24

## ನಮ್ಮ ರಕ್ಷಣಾ ಪಡೆ

**ಕಲಿಕಾ ಫಲ:** ಭಾರತದ ರಕ್ಷಣಾ ಪಡೆಗಳಾದ ಭೂ ಸೇನೆ, ವಾಯು ಸೇನೆ ಮತ್ತು ನೌಕಾ ಸೇನೆಗಳ ಬಗ್ಗೆ ತಿಳಿದುಕೊಳ್ಳುವರು

**ಉದ್ದೇಶಗಳು:**

- ರಕ್ಷಣಾ ಪಡೆಗಳು ರಾಷ್ಟ್ರದಲ್ಲಿ ಶಾಂತಿ ಕಾಪಾಡಲು ನಮ್ಮನ್ನು ಆಂತರಿಕ ಮತ್ತು ಬಾಹ್ಯ ಆಕ್ರಮಣಗಳಿಂದ ರಕ್ಷಿಸುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತಾರೆ.
- ಸೇನೆಗೆ ಸೇರಿಕೊಳ್ಳುವುದರ ಮೂಲಕ ಅಥವಾ ಸೇನೆಗೆ ಸೇರದೆಯೂ ವಿವಿಧ ಮಾಧ್ಯಮಗಳ ಮೂಲಕ ಸೇನೆಗೆ ಸಹಕಾರವನ್ನು ನೀಡಬಹುದು ಎಂಬುದನ್ನು ಅರಿಯುವುದು.

### ಕಲಿಕಾ ಹಾಳೆ 39

1. **ಚಟುವಟಿಕೆ:** ದೇಶಕ್ಕೆ ಸೈನ್ಯ ಏಕೆ ಬೇಕು? ತರಗತಿಯಲ್ಲಿ ಶಿಕ್ಷಕರ ಸಮ್ಮುಖದಲ್ಲಿ ಎಲ್ಲರೂ ಚರ್ಚೆ ಮಾಡಿ. ಅದರ ಅಗತ್ಯತೆಯನ್ನು ತಿಳಿದುಕೊಳ್ಳಿ.

ಸನ್ನಿವೇಶಗಳೊಂದಿಗೆ ದೇಶಕ್ಕೆ ಸೈನ್ಯದ ಅಗತ್ಯತೆಯನ್ನು ಅರ್ಥಮಾಡಿಸಿ ಉದಾ: ಯುದ್ಧದ ಸನ್ನಿವೇಶಗಳು.

2. **ಚಟುವಟಿಕೆ:** ಕೆಳಗಿನ ಪಟ್ಟಿಯಲ್ಲಿ ಪೂರಕ ರಕ್ಷಣಾ ಪಡೆಗಳು ಮತ್ತು ಸಹಾಯಕ ರಕ್ಷಣಾ ಪಡೆಗಳ ಹೆಸರನ್ನು ನೀಡಲಾಗಿದೆ. ಅವುಗಳನ್ನು ಸರಿಯಾಗಿ ವರ್ಗೀಕರಿಸಿ.

ಭೂಸೇನೆ, ನೌಕಾ ಸೇನೆ ಮತ್ತು ವಾಯುಸೇನೆ ಮಾತ್ರವಲ್ಲದೆ ಇತರ ಪೂರಕ ರಕ್ಷಣಾ ಪಡೆಗಳೂ ಸಹ ದೇಶ ರಕ್ಷಣೆಯ ಕಾರ್ಯದಲ್ಲಿ ತೊಡಗಿವೆ ಹಾಗೂ ಎನ್.ಸಿ.ಸಿ ಮತ್ತು ರೆಡ್‌ಕ್ರಾಸ್ ನಂತಹ ಪಡೆಗಳ ಮೂಲಕವು ಸೇನೆಗೆ ಸಹಾಯ ಮಾಡಬಹುದು ಎಂಬದನ್ನು ಮನದಟ್ಟು ಮಾಡಿಸುವುದು

**3. ಚಟುವಟಿಕೆ:** ಎನ್.ಸಿ.ಸಿ, ರೆಡ್‌ಕ್ರಾಸ್, ಗೃಹ ರಕ್ಷಕಾ ದಳ ಅಥವಾ ನಿಮ್ಮ ಊರಿನಲ್ಲಿರುವ ಯಾರಾದರು ಸೈನಿಕರು ಇವರುಗಳಲ್ಲಿ ಯಾರಾದರೊಬ್ಬರನ್ನು ನಿಮ್ಮ ಶಾಲೆಗೆ ಕರೆದು ಅವರೊಂದಿಗೆ ಅವರು ಮಾಡುವ ಕಾರ್ಯಗಳ ಬಗ್ಗೆ ಚರ್ಚೆ ಮಾಡಿರಿ.

ಮಕ್ಕಳ ಜೊತೆ ಎನ್.ಸಿ.ಸಿ, ರೆಡ್‌ಕ್ರಾಸ್, ಗೃಹ ರಕ್ಷಕಾ ದಳ ಅಥವಾ ನಿಮ್ಮ ಊರಿನಲ್ಲಿರುವ ಯಾರಾದರು ಸೈನಿಕರೊಂದಿಗೆ ಸಂವಾದವನ್ನು ಏರ್ಪಡಿಸಿ ಅವರ ನೈಜ ಅನುಭವಗಳನ್ನು ಮಕ್ಕಳೊಂದಿಗೆ ಹಂಚಿಕೊಂಡು ಚರ್ಚಿಸಲು ಅವಕಾಶ ಮಾಡಿಕೊಡುವುದು.

**4. ಚಟುವಟಿಕೆ :** ನಿನಗೆ ಭಾರತದ ರಕ್ಷಣಾ ಪಡೆಯಲ್ಲಿ ಸೇರಲು ಇಷ್ಟವೇ? ಯಾಕೆ? ನಿನ್ನ ಅಭಿಪ್ರಾಯವನ್ನು ತಿಳಿಸು.

5. ಮಕ್ಕಳ ಇಚ್ಚೆಯನುಸಾರ ತಮ್ಮ ಅಭಿಪ್ರಾಯವನ್ನು ಹಂಚಿಕೊಳ್ಳಲು ಅವಕಾಶ ನೀಡಬೇಕು. ಒಂದು ವೇಳೆ ಮಕ್ಕಳು ಡಾಕ್ಟರ್, ಇಂಜಿನಿಯರ್, ಪೋಲಿಸ್, ಐ.ಎ.ಎಸ್ ಇನ್ನಿತರ ಯಾವುದೇ ಬೇರೆ ಸೇವೆಗಳಿಗೆ ಸೇರಬೇಕು ಎಂದರೆ ಆ ಸೇವೆಗಳ ಮೂಲಕವೂ ನಾವು ಹೇಗೆ ರಾಷ್ಟ್ರಕ್ಕೆ ಸೇವೆ ಸಲ್ಲಿಸಬಹುದು ಎಂಬುದನ್ನು ತಿಳಿಸಿ.

**ಮೌಲ್ಯಮಾಪನ:** ಕಲಿಕಾ ಹಾಳೆ 39 ರ ಚಟುವಟಿಕೆ 1 ಮತ್ತು ಚಟುವಟಿಕೆ 5ನ್ನು ಮೌಲ್ಯಮಾಪನ ಚಟುವಟಿಕೆಯಾಗಿ ಪರಿಗಣಿಸುವುದು.

**28. ಸಮಾಜ ವಿಜ್ಞಾನ ಕಲಿಕೆ ಅನುಕೂಲಿಸಬಹುದಾದ ವಿಧಾನಗಳು**

ಕಲಿಕೆ ಎಂದರೆ ಶಿಕ್ಷಕರು ಹೇಳಿದ್ದನ್ನೆಲ್ಲ ಮಕ್ಕಳು ಕಲಿಯುವುದಲ್ಲ. ಕಲಿಕೆ ಮಕ್ಕಳೇ ಕ್ರಿಯಾಶೀಲರಾಗಿ ತೊಡಗಿಕೊಂಡು ಅನುಭವಗಳ ಮೂಲಕ ತಮ್ಮ ಜ್ಞಾನ ಕಟ್ಟಿಕೊಳ್ಳುವ ಪ್ರಕ್ರಿಯೆ. ಮಕ್ಕಳು ಗುಂಪು ಚರ್ಚೆಯಲ್ಲಿ, ಸಹವರ್ತಿಗಳ ಜೊತೆ ಚರ್ಚೆಯಲ್ಲಿ, ಅನುಭವ ಹಂಚಿಕೆಯಲ್ಲಿ ಸಹಕಲಿಕೆಯಲ್ಲಿ ತೊಡಗಿಕೊಂಡು ವೈಯಕ್ತಿಕವಾಗಿ ಹಾಗೂ ಗುಂಪಿನಲ್ಲಿ ಕಲಿಯುವಂತಾದರೆ ಶಿಕ್ಷಕರೊಂದಿಗೆ ಆತ್ಮೀಯವಾಗಿ, ಆತ್ಮವಿಶ್ವಾಸದಿಂದ ಚರ್ಚಿಸುವಂತಾಗಬೇಕು. ಈ ಎಲ್ಲಾ ವಿಧಾನಗಳಲ್ಲೂ ಮಕ್ಕಳು ಕ್ರಿಯಾಶೀಲರಾಗಿರುತ್ತೇರೆಯೇ ಹೊರತು ಶಿಕ್ಷಕರು ಹೇಳಿದ್ದನ್ನು ಆಲಿಸುವವರಾಗಿರುವುದಿಲ್ಲ.

1. ಕಥಾ ನಿರೂಪಣಾ ವಿಧಾನ.
2. ಯೋಜನಾ ವಿಧಾನ
3. ಪಠ್ಯಪುಸ್ತಕದ ಪಾಠ ಅವಲೋಕನ / ವಿಮರ್ಶಾ ಚಟುವಟಿಕೆ.
4. ಚರ್ಚಾ ವಿಧಾನ
5. ಸಮಸ್ಯಾ ಪರಿಹಾರ ವಿಧಾನ
6. ಮೂಲಾಧಾರ ವಿಧಾನ.
7. ಶಿಶು ಕೇಂದ್ರಿತ ಉಪನ್ಯಾಸ (ಶಿಕ್ಷಕರೇ ಕೇಂದ್ರವಾಗದೇ ಎಚ್ಚರಿಕೆಯಿಂದ ಬಳಸಬೇಕು)
8. ಘಟಕ ಪದ್ಧತಿ
9. ವೀಕ್ಷಣಾ ವಿಧಾನ
10. ಪ್ರವಾಸ / ಹೊರಸಂಚಾರ ವಿಧಾನ
11. ಪಾತ್ರಾಭಿನಯ/ನಾಟಕಾಭಿನಯ ವಿಧಾನ
12. ಕ್ಷೇತ್ರ ಅಧ್ಯಯನ
13. ಪ್ರಯೋಗ
14. ಕ್ರೀಡಾ ವಿಧಾನ
15. ಪ್ರಶ್ನೋತ್ತರ ವಿಧಾನ
16. ಸಂಶೋಧನೆ.
17. ಸಮೀಕ್ಷೆ / ಸಂದರ್ಶನ
18. ವಿಶ್ಲೇಷಣೆ.

ಶಿಕ್ಷಕರು ದೈನಂದಿನ ಕಲಿಕಾಂಶದ ಸ್ವರೂಪವನ್ನು ಅರ್ಥೈಸಿಕೊಂಡು ಯಾವ ವಿಧಾನದಿಂದ ಸುಲಭವಾಗಿ, ಗುಣಾತ್ಮಕವಾಗಿ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಮೈಗೂಡಿಸಬಹುದೆಂಬುದನ್ನು ಯೋಚಿಸಿ, ಯೋಜಿಸಿ ಕಾರ್ಯಪ್ರವೃತ್ತರಾದರೆ ಅವರ ಉದ್ದೇಶವು ಈಡೇರುವುದರಲ್ಲಿ ಸಂಶಯವಿಲ್ಲ. ಇಂಥ ಶಿಕ್ಷಕರು ಮಾತ್ರ ಉತ್ತಮ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ವಿದಾರ್ಥಿಗಳನ್ನು ಸಿದ್ಧಗೊಳಿಸಬಲ್ಲರು.

### ವಿವಿಧ ಮಾಹಿತಿ ಆಕರ/ಸಂಪನ್ಮೂಲಗಳನ್ನು ಬಳಸುವುದು.

ನಿರಂತರ ಅಧ್ಯಯನ ಶೀಲರಾಗಿರುವವರು ಮಾತ್ರವೇ ಅಧ್ಯಾಪಕರೆನಿಸುತ್ತಾರೆ. 'ತಿಳಿದಿರುವುದು ಅಂಗೈ ಅಗಲದಷ್ಟು, ತಿಳಿಯಬೇಕಾಗಿರುವುದು ಸಾಗರದಷ್ಟು' ನಾವು ಎಷ್ಟೇ ಕಲಿತರೂ ಕಲಿಯಲು ಬಹಳಷ್ಟಿದೆ ಎಂಬ ಅರಿವು ನಮಗಿರಬೇಕು. ಪ್ರತಿಯೊಂದು ಮಗುವಿನಿಂದಲೂ ಕಲಿಯಬೇಕಾದುದು ಇರುತ್ತದೆ. ಹುಡುಕಾಟ, ಅಂತರಾವಲೋಕನ ಮತ್ತು ಮಕ್ಕಳ ಅಗತ್ಯಗಳಿಗೆ ಸಂವೇದನಾ ಶೀಲತೆಯಿದ್ದರೆ ತನ್ನ ವೃತ್ತಿ ಜೀವನದ ದಕ್ಷತೆಯನ್ನು ಶಿಕ್ಷಕರು ಖಂಡಿತವಾಗಿಯೂ ಹೆಚ್ಚಿಸಿಕೊಳ್ಳುತ್ತಾರೆ. ಪರಿಣಾಮಕಾರಿ ತರಗತಿ ನಿರ್ವಹಣೆ, ಆಕರ್ಷಕವಾದ ರೀತಿಯಲ್ಲಿ ಕಲಿಕಾಂಶಗಳ ವರ್ಗಾಯಿಸುವಿಕೆ ನಡೆಸಲು ಹಲವು ಸಾಧನ ಸಲಕರಣೆಗಳು ಸೃಜಿಸಲ್ಪಡುತ್ತವೆ. ದಿನಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ ಮೊದಲಾದ ಸುದ್ದಿ ಮಾಧ್ಯಮಗಳಲ್ಲಿ ಬರುವ ಪಾಠಕ್ಕೆ ಪೂರಕವಾಗಬಲ್ಲ ವಿಷಯ, ಚಿತ್ರ, ಅಂಕಿ–ಅಂಶಗಳನ್ನು ಅಂದೇ ಕತ್ತರಿಸಿ ಜೋಪಾನವಾಗಿಟ್ಟು ಕೊಂಡಲ್ಲಿ ಅವು ಉಪಯುಕ್ತ ಕಲಿಕಾ ಸಾಧನಗಳಾಗುತ್ತವೆ. ತಾಂತ್ರಿಕ ಸಾಧನ ಸಲಕರಣೆಗಳಾದ ರೇಡಿಯೋ, ದೂರದರ್ಶನ, ಕಂಪ್ಯೂಟರ್, ಓ.ಹೆಚ್.ಪಿ, ಪ್ರೊಜೆಕ್ಟರ್‌ಗಳನ್ನು ಸೂಕ್ತ ಸಂದರ್ಭದಲ್ಲಿ ಕಲಿಕೆಗೆ ಪೂರಕವಾದ ಆಕರಗಳಾಗಿ ಬಳಸುವ ಅಭ್ಯಾಸವೂ ಒಳ್ಳೆಯದು. ಶಾಲಾ ವಾಚನಾಲಯದಲ್ಲಿರುವ ಆಕರ ಗ್ರಂಥಗಳನ್ನು ಶಿಕ್ಷಕರೂ ಓದಿ ವಿದ್ಯಾರ್ಥಿಗಳಿಗೂ ಓದಲು ಅವಕಾಶ ಕಲ್ಪಿಸಬೇಕು.

**ಕೆಲವು ಆಕರ ಗ್ರಂಥಗಳು**

1. ಭೂಗೋಳ ಸಂಗಾತಿ – ಭಾಗ 1, 2 ಮತ್ತು 3
2. ಕಿರಿಯರ ವಿಶ್ವ ಕೋಶ – 7 ಸಂಪುಟಗಳು – ಡಾ ನಿರಂಜನ್
3. ಸಚಿತ್ರ ಇತಿಹಾಸ
4. ಪ್ರಾಚೀನ ಭಾರತ
5. ಸಮಗ್ರ ಭಾರತದ ಇತಿಹಾಸ
6. ಭಾರತದ ಸಂವಿಧಾನ

ಇವೇ ಮುಂತಾದ ಮೌಲ್ಯಯುತ ಆಕರ ಗ್ರಂಥಗಳನ್ನು ಒಳಗೊಂಡ ಒಂದು ಇತಿಹಾಸ / ರಾಜ್ಯ ಶಾಸ್ತ್ರ / ಭೂಗೋಳದ ಪ್ರಯೋಗ ಶಾಲೆಯನ್ನು ಹೊಂದುವ ಮೂಲಕ ಸಮಾಜ ವಿಜ್ಞಾನ ವಿಷಯದ ಕಲಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸ ಬಹುದಾಗಿದೆ.

ಚಟುವಟಿಕೆಗಳನ್ನು ಸಂಘಟಿಸುವುದು ಮತ್ತು ಗುಂಪು ರಚನೆ

ಪರಿಣಾಮಕಾರಿಯಾಗಿ ಕಲಿಕೆ ಅನುಕೂಲಿಸಲು ನಿರಂತರ ಚಟುವಟಿಕೆಗಳನ್ನು ತರಗತಿ ಕೋಣೆಯ ಒಳಗೂ–ಹೊರಗೂ ರೂಪಿಸಿಕೊಳ್ಳಬೇಕಾಗುತ್ತದೆ. ಆದರೆ ಚಟುವಟಿಕೆಗಳಿಗಾಗಿ ಚಟುವಟಿಕೆಯಲ್ಲ. ತರಗತಿಯ ಏಕತಾನತೆಯನ್ನು ಹೋಗಲಾಡಿಸಿ ಜ್ಞಾನವನ್ನು ಕಟ್ಟಿಕೊಳ್ಳಲು ಅನುಕೂಲಿಸುವಂತಹ ಚಟುವಟಿಕೆಗಳನ್ನು ಅಳವಡಿಸಿಕೊಳ್ಳಬೇಕು. ಉದ್ದೇಶಿತ ಚಟುವಟಿಕೆಯಿಂದ ಕಲಿಕೆಯ ಮಾರ್ಗವು ಸರಳಗೊಳ್ಳುವಂತಿರಬೇಕೇ ಹೊರತು ಅದು ವಿಷಯವನ್ನು ಮತ್ತಷ್ಟು ಕ್ಲಿಷ್ಟಗೊಳಿಸುವಂತಾಗಬಾರದು. ಕಲಿಕೆಯ ಅವಲೋಕನವನ್ನು ಕೂಡ ಚಟುವಟಿಕೆಗಳ ಮೂಲಕವೇ ನಿರ್ಣಯಿಸಬಹುದೆಂಬ ಅರಿವಿನೊಂದಿಗೆ ವಿವಿಧ ಹಂತಗಳಲ್ಲಿ ವಿವಿಧ ರೀತಿಯ ಚಟುವಟಿಕೆಗಳನ್ನು ಸಂಯೋಜಿಸಿಕೊಳ್ಳಬೇಕು. ಈ ಚಟುವಟಿಕೆಗಳಿಗೆ ಕೆಲವು ಪೂರ್ವ ಸಿದ್ಧತೆಗಳಿರಬೇಕು. ಚಟುವಟಿಕೆಯ ಭಾಗವಾಗಿ ಗುಂಪು ಕಲಿಕೆಗೆ ಅವಕಾಶ ಕಲ್ಪಿಸಿಕೊಡಿ. ವಿವಿಧ ಗುಂಪುಗಳನ್ನು ರಚಿಸುವಾಗ ಯಾವ ವಿದ್ಯಾರ್ಥಿಯನ್ನು ಯಾವ ಗುಂಪಿನಲ್ಲಿಡಬೇಕು, ಯಾರು ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಸಹಾಯಕರು, ಯಾರು ಗುಂಪಿನ ನಾಯಕರು ಎಂದು ಮಕ್ಕಳೇ ನಿರ್ಧರಿಸುವಂತೆ ಅನುಕೂಲಿಸಿ. ಗುಂಪು ಕಲಿಕೆಯ ಗುರಿ ಮತ್ತು ಉದ್ದೇಶಗಳನ್ನು ಸಾಧಿಸಲು ವೈಯಕ್ತಿಕ ಗಮನ ನೀಡಿಕೆ ಅತಿ ಅವಶ್ಯಕ. ಪ್ರತಿ ಸಂದರ್ಭದಲ್ಲಿಯೂ ಮಕ್ಕಳ ಸಹಜ ಪ್ರವೃತ್ತಿಗಳಾದ ಕುತೂಹಲ, ಪ್ರಶ್ನಿಸುವ ಮನೋಭಾವನೆ, ಚಿಕಿತ್ಸಕ ಬುದ್ಧಿಗೆ ಪ್ರೇರಕವಾಗಬಲ್ಲ ಚಟುವಟಿಕೆಗಳನ್ನು ಸಿದ್ಧಗೊಳಿಸಲು ಹೆಚ್ಚಿನ ಆದ್ಯತೆ ನೀಡುವುದು ಅವಶ್ಯಕ. ಒಟ್ಟಿನಲ್ಲಿ

- ಚಟುವಟುಕೆಗಳು ಸರಳವಾಗಿರಲಿ
- ಚಟುವಟಿಕೆಗಳು ಕಲಿಕಾಂಶಕ್ಕೆ ಪೂರಕವಾಗಿರಲಿ
- ಎಲ್ಲಾ ವಿದ್ಯಾರ್ಥಿಗಳಿಗೂ ಭಾಗವಹಿಸಲು ಅವಕಾಶ ನೀಡುವಂತಿರಲಿ
- ವಿವಿಧ ಹಂತಗಳಿಗೆ ವಿವಿಧ ಮಾದರಿಯ ಚಟುವಟಿಕೆಗಳಿರಬಹುದು.
- ಚಟುವಟಿಕೆಯ ನಂತರ ವಿದ್ಯಾರ್ಥಿಗಳ ಅನಿಸಿಕೆಗಳನ್ನು ಸಂಗ್ರಹಿಸಿ
- ಕಲಿಕೆಯ ಅವಲೋಕನ ಮತ್ತು ಹಿಮ್ಮಾಹಿತಿಗೆ ಪ್ರತ್ಯೇಕ ಚಟುವಟಿಕೆಗಳು ಅವಶ್ಯವೆಂದಾದರೆ ಅವುಗಳ ಕಡೆ ಗಮನವಿರಲಿ.

**ಚಟುವಟಿಕೆಗಳನ್ನು ಸಂಘಟಿಸಲು ಕೆಲವು ಉದಾಹರಣೆಗಳು**

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕಾರ್ಥಿ ಕೇಂದ್ರಿತ ಕಲಿಕೆಗೆ ಹೆಚ್ಚಿನ ಒತ್ತು ನೀಡಲಾಗಿದೆ. ಕಂಠಪಾಠ ಕಲಿಕೆಯಿಂದ ಹೊರಬಂದು ನಿಜವಾದ ಕಲಿಕೆಗೆ ಕಲಿಕಾರ್ಥಿಯನ್ನು ಕರೆತರುವ ಪದ್ಧತಿಗಳು ಜಾರಿಯಾಗಿವೆ.

ಕಲಿಕೆಗೆ ಬೇಕಾದ ಅಗತ್ಯತೆಗಳನ್ನು ಅನುಕೂಲಿಸುವವರು ತಯಾರಿಸಿಕೊಂಡಿದ್ದರೂ ಅವರ ತಯಾರಿಕೆಯ ಹಿಂದೆ ಅನೇಕ ಸಮಸ್ಯೆಗಳು ಬರಬಹುದಾಗಿದೆ. ಇವುಗಳನ್ನು ಸಮರ್ಪಕವಾಗಿ ಬಿಡಿಸಿಕೊಳ್ಳಲು ಅನುಕೂಲಿಸುವವರು ಅನೇಕ ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಇಂತಹ ಸಂದರ್ಭಗಳಲ್ಲಿ ಚಟುವಟಿಕೆಗಳನ್ನು ನೀಡುವುದರ ಮೂಲಕ ಕಲಿಕೆಯನ್ನು ಸಮಗ್ರ ಕಲಿಕೆಯನ್ನಾಗಿಸಬಹುದು.

ಕಲಿಕಾರ್ಥಿಗಳಲ್ಲಿ ವೈಯಕ್ತಿಕ, ಸಹವರ್ತಿ ಗುಂಪು ಅಥವಾ ಗುಂಪುಗಳಲ್ಲಿ ಚಟುವಟಿಕೆಗಳನ್ನು ನೀಡಬಹುದು. ಕೆಲವೊಮ್ಮೆ ಇಡೀ ತರಗತಿಗೇ ಚಟುವಟಿಕೆ ನೀಡಬಹುದಾಗಿದೆ.

**1. ಕಲಿಕಾ ನಿಲ್ದಾಣ ಚಟುವಟಿಕೆ**

ಸಮಾಜ ವಿಜ್ಞಾನದಲ್ಲಿ ಬರುವ ವಂಶಾವಳಿಗಳು, ದಾರ್ಶನಿಕರು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಮೈದರಗಳು, ಸಸ್ಯವರ್ಗ, ಪ್ರಾಣಿಗಳು, ಸಮಾಜ ವಿಜ್ಞಾನಿಗಳ ಹೀಗೆ ಯಾವುದಾದರೂ ಒಂದು ಘಟಕಕ್ಕೆ ಸೇರಿದ ಅಂಶಗಳನ್ನು ಕಾರ್ಡ್‌ನಲ್ಲಿ ವಿವರವಾಗಿ ಬರೆಯುವುದು. ಅವುಗಳನ್ನು ನಿಗಧಿತ ಸ್ಥಳದಲ್ಲಿ ಇಡುವುದು. ಮಕ್ಕಳ ನಾಲ್ಕು ಅಥವ ಐದು ಗುಂಪನ್ನು (ಕಾರ್ಡ್‌ಗಳಿಗೆ ಅನುಸಾರವಾಗಿ) ರಚಿಸಿ ಕಾರ್ಡ್ ಇಟ್ಟಿರುವ ಸ್ಥಳಕ್ಕೆ ಪ್ರತಿ ಗುಂಪೂ ಆವರ್ತಗಳಲ್ಲಿ ಚಲಿಸಬೇಕು. ಅಲ್ಲಿನ ವಿಷಯ ಓದಿ ತಮ್ಮ ತಮ್ಮಲ್ಲಿ ಚರ್ಚಿಸಬೇಕು. ನಂತರ ಮುಂದಿನ ಕಾರ್ಡ್ ಬಳಿ ಚಲಿಸಬೇಕು. ಕಾರ್ಡ ಇರಿಸಿದ ಸ್ಥಳವೇ ಕಲಿಕೆಯ ನಿಲ್ದಾಣ. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಬಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನ ಹೇಳಿ ಮಾಡಿಸಿದ ವಿಧಾನ.

**2. ನಮ್ಮ ಗುಂಪು – ಪರಿಣಿತ ಗುಂಪು ಕಲಿಕೆ (ಹೋಮ್ ಗ್ರೂಪ್ – ಎಕ್ಸಪರ್ಟ್ ಗ್ರೂಪ್)**

ಇಲ್ಲಿನ ಗುಂಪಿನಲ್ಲಿ ಮೊದಲ ಹಂತದಲ್ಲಿ ಐದು ಅಥವ ಆರು ಮಕ್ಕಳ ಗುಂಪು ರಚಿಸುವುದು. ಈ ಗುಂಪು ನಮ್ಮ ಗುಂಪು ಎಂದಾಗುತ್ತದೆ. ಪ್ರಾರಂಭದಲ್ಲಿ ಈ ಗುಂಪಿಗೆ ಕೆಲಸವಿಲ್ಲ. ಕೊನೆಗೆ ಈ ಗುಂಪಿಗೆ ಕೆಲಸವಿದೆ.

ಎರಡನೇ ಹಂತದಲ್ಲಿ ನಮ್ಮ ಗುಂಪಿನಲ್ಲಿಯೇ ಸಂಖ್ಯೆಗಳನ್ನು ಒಬ್ಬೊಬ್ಬರಿಗೆ ನೀಡಬೇಕು. ಸದರಿ ಸಂಖ್ಯೆಯವರು ಒಂದೊಂದು ಗುಂಪು ರಚಿಸಿಕೊಳ್ಳುತ್ತಾರೆ. ಇದು ಪರಿಣಿತ ಗುಂಪು. ಪರಿಣಿತ ಗುಂಪು ತಮಗೆ ನೀಡಿದ ಒಂದು ಕಲಿಕಾಂಶದ ಬಗ್ಗೆ ಕೂಲಂಕುಷವಾಗಿ ಚರ್ಚಿಸುತ್ತದೆ. ನೀಡಿದ ವಿಷಯದ ಮೇಲೆ ಪರಿಣಿತಿ ಸಾಧಿಸುತ್ತದೆ.ಶಿಕ್ಷಕರು ಪ್ರತಿ ಗುಂಪಿಗೂ ಚಲಿಸುತ್ತಾ ಚರ್ಚೆ ಅನುಕೂಲಿಸುತ್ತಾರೆ.

ನಂತರ ವಾಪಾಸು ಸದಸ್ಯರು ತಮ್ಮ ಮೂಲ ಗುಂಪಿಗೆ ಮರಳಿ ತಾವು ಚರ್ಚಿಸಿದ ವಿಷಯವನ್ನು ತಮ್ಮ ಮೂಲ ಗುಂಪಿನೊಂದಿಗೆ ಹಂಚಿಕೊಳ್ಳುತ್ತಾರೆ. ಪ್ರತಿ ಸದಸ್ಯರೂ ಒಂದೊಂದು ವಿಷಯವನ್ನು ಚರ್ಚಿಸಿ ಪರಿಣಿತಿಗಳಿಸಿರುವುದರಿಂದ ಮೂಲ ಗುಂಪುಗಳು ಎಲ್ಲ ವಿಷಯಗಳನ್ನು ಹಂಚಿಕೊಳ್ಳುತ್ತವೆ. ಕೊನೆಯಲ್ಲಿ ಹೆಚ್ಚಿನ ವಿವರಗಳಿಗೆ ಶಿಕ್ಷಕರನ್ನು ಸಂಪರ್ಕಿಸಬಹುದು. ಉಪನ್ಯಾಸ ಪದ್ಧತಿ ಅನಿವಾರ್ಯ ಎಂದು ಬಾವಿಸಿದ್ದವರಿಗೆ ಅದನ್ನು ತಪ್ಪಿಸಲು ಈ ವಿಧಾನವೂ ಸಹ ಹೇಳಿ ಮಾಡಿಸಿದ ವಿಧಾನ.

**3. ಸಹವರ್ತಿ ಚಟುವಟಿಕೆ**

ಇಬ್ಬರು ಸಹವರ್ತಿಗಳ ನಡುವೆ ಸಮಾಜ ವಿಜ್ಞಾನದಲ್ಲಿ ಬರುವ ವಂಶಾವಳಿಗಳು, ವಾಸ್ತುಶಿಲ್ಪಗಳು, ಆಡಳಿತದ ಅಂಗಗಳು, ಭೂಮಿಯ ಮೇಲ್ಮೈದರಗಳು, ಸಸ್ಯವರ್ಗ, ಪ್ರಾಣಿಗಳು, ಸಮಾಜ ವಿಜ್ಞಾನಿಗಳ ಹೆಸರುಗಳನ್ನು ಚೀಟಿಯಲ್ಲಿ ಬರೆದು ಅವುಗಳನ್ನು ಆಯ್ಕೆ ಮಾಡಿಕೊಳ್ಳಲು ತಿಳಿಸುವುದು, ಹಾಗೂ ಸಹವರ್ತಿಗಳ ಗುಂಪುಗಳಲ್ಲಿ ಸೇರಿಕೊಳ್ಳಲು ತಿಳಿಸುವುದು. ಅಲ್ಲಿ ಅವರ ವಿಷಯ ಚರ್ಚಿಸಬಹುದು.

**4. ಗುಂಪು ಚಟುವಟಿಕೆ**

ಗುಂಪು ಚಟುವಟಿಕೆಯಲ್ಲಿ ಎರಡು ವಿದ್ಯಾರ್ಥಿಗಳ ಗುಂಪುಗಳು, ಮೂರು ವಿದ್ಯಾರ್ಥಿಗಳ ಗುಂಪು.... ಹೀಗೆ ಗರಿಷ್ಠ ಹತ್ತು ವಿದ್ಯಾರ್ಥಿಗಳ ಗುಂಪುಗಳನ್ನು ಸಂಘಟಿಸಬಹುದಾಗಿದೆ. ಈ ಗುಂಪುಗಳಿಗೆ ಸಮಾಜ ವಿಜ್ಞಾನ ಪಠ್ಯದಲ್ಲಿ ಬರುವ ಅನೇಕ ರಾಜ–ರಾಣಿ–ಆಡಳಿತಗಾರರ ಹೆಸರುಗಳು, ಸ್ಥಳಗಳು, ದಾರ್ಶನಿಕ್ಕರು, ನದಿಗಳು, ರಾಷ್ಟ್ರ ನಾಯಕರು, ದೇಶ ಅಥವ ರಾಜಧಾನಿಗಳು, ಗ್ರಹಗಳು, ನಕ್ಷತ್ರಗಳ ಗುಂಪು / ಗೆಲಕ್ಸಿ ಮುಂತಾದುವುಗಳ ಹೆಸರುಗಳನ್ನು ನೀಡಬಹುದಾಗಿದೆ.

ಕಲಿಕಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ, ಕಲಿಕಾಂಶಕ್ಕೆ ಸರಿಹೊಂದುವಂತಹ ಚಟುವಟಿಕೆಗಳನ್ನು ಆಯೋಜಿಸುವುದು. ಪ್ರತಿ ಗುಂಪಿಗೂ ಅದರದೇ ಆದ ಜವಾಬ್ದಾರಿ / ಚರ್ಚಾಂಶಗಳನ್ನು ನೀಡುವುದು. ಪ್ರತಿ ಗುಂಪುಗಳಲ್ಲಿಯ ಚರ್ಚೆಯಲ್ಲಿ ಮಕ್ಕಳ ಪಾಲ್ಗೊಳ್ಳುವಿಕೆಯನ್ನು ಗಮನಿಸುತ್ತಾ ಅಗತ್ಯ ಮಾರ್ಗದರ್ಶನ ನೀಡುವುದು. ಗುಂಪಿನಲ್ಲಿ ಮಗುವಿನ ಭಾಗವಹಿಸುವಿಕೆ, ಅಲ್ಲಿ ಉಂಟಾಗಬಹುದಾದ ಗೊಂದಲ / ಅಸ್ಪಷ್ಟತೆಗಳಿಗೆ ಅಗತ್ಯ ಸಲಹೆ ನೀಡುತ್ತಾ ಪರಸ್ಪರ ಕಲಿಕೆಗೆ ಹೆಚ್ಚು ಅವಕಾಶ ನೀಡುವುದು.

ಪ್ರಸ್ತುತ ಸಮಾಜ ವಿಜ್ಞಾನ ಪಠ್ಯಪುಸ್ತಕದಲ್ಲಿ ಈ ರೀತಿಯ ಗುಂಪು ಚರ್ಚೆ ಹಾಗೂ ಮಾಹಿತಿ ಸಂಗ್ರಹಣಾ ಚಟುವಟಿಕೆಗಳು ಇದ್ದು, ಇವು ಮಗುವಿನ ಕಲಿಕಾ ಹಂದರಗಳನ್ನು ತುಂಬಲು ಹಾಗೂ ಅವರ ಪೂರ್ವಜ್ಞಾನದೊಂದಿಗೆ ತಾವೇ ಜ್ಞಾನವನ್ನು ಕಟ್ಟಿಕೊಳ್ಳಲು ಅವಕಾಶಗಳು ಇವೆ.

**ಉದಾ :–**

1. ದೇವಾಲಯ, ಮಸೀದಿ ಅಥವ ಬೌತಿಕ ಸ್ಮಾರಕಗಳಿಗೆ ಭೇಟಿ ನೀಡಿ ಅಲ್ಲಿನ ವೈಶಿಷ್ಟ್ಯ ದಾಖಲಿಸುವ ಚಟುವಟಿಕೆ. ಗ್ರಾಮ ಪಂಚಾಯ್ತಿ ಅಥವ ಅಂತಹಾ ಯಾವುದೇ ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ನಡೆಯುವ ಸಭೆ ಅಥವ ಇತರೆ ಪ್ರಕ್ರಿಯೆ ತಿಳಿದುಕೊಂಡು ದಾಖಲಿಸುವ ಚಟುವಟಿಕೆ.

2. ವಿವಿದ ಚಿಹ್ನೆಗಳು, ಪ್ರಾಣಿವರ್ಗ, ಸಸ್ಯವರ್ಗ, ಪಕ್ಷಿಗಳು, ನಾಣ್ಯ, ಬಾವುಟಗಳ ಚಿತ್ರಗಳನ್ನು ಸಂಗ್ರಹಿಸಿ ತೋರಿಸುವ ಚಟುವಟಿಕೆ.

3. ಒಂದು ಚಟುವಟಿಕೆಯಲ್ಲಿ 'ಕಾರ್ಯನಿರತ ಮಾದರಿ' ಯೊಂದನ್ನು ವೀಕ್ಷಿಸುತ್ತಾ, ಅಲ್ಲಿ ಚರ್ಚಿಸಿ, ತೀರ್ಮಾನಿಸುವ ಅವಕಾಶಗಳೂ ಇವೆ.

ಈ ಮೇಲ್ಕಂಡ ಸಂದರ್ಭಗಳಲ್ಲಿ ಮಗುವಿನ ಮಾತುಗಾರಿಕೆ, ಪಾಲ್ಗೊಳ್ಳುವಿಕೆ, ಪರಸ್ಪರ ವಿನಿಮಯ / ಸಂವಹನ ಹಾಗೂ ದಾಖಲೀಕರಣವು ಪ್ರಧಾನವಾಗಿರುತ್ತದೆ. ತನಗೆ ತಿಳಿದಿರುವ ಜ್ಞಾನದ ಮೂಲಕ ಹೊಸ ಸನ್ನಿವೇಶವೊಂದರಲ್ಲಿ ಆ ಜ್ಞಾನವನ್ನು ಪುನರ್ರಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕ ತಾನೇ ಜ್ಞಾನವನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ. ಪ್ರತಿ ಸಂದರ್ಭದಲ್ಲಿಯೂ ಮಗುವಿಗೆ ಹಿಮ್ಮಾಹಿತಿ ನೀಡಬಹುದಾದ ಅಥವಾ ಮಗುವೇ ಹಿಮ್ಮಾಹಿತಿ ನೀಡಬಹುದಾದ ಅವಕಾಶವಿರುತ್ತದೆ.

* * * * *